ಐಕ್ಯರಂಗ

ಸಂಪುಟ ೧೨ ಸಂಚಿಕೆ ೧ - ೪
ಜನವರಿ ೨೮, ೧೯೯೦

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ

ತ್ರಿಪುರಾದಲ್ಲಿ ಮತ್ತೆ ಸಾಮೂಹಿಕ ಹತ್ಯೆ

ಕ್ರಿಮಿನಲ್ ಕಾಂಗ್ರೆ-ಟಿ.ಯು.ಜೆ.ಎಸ್. ಸರಕಾರದ ರಾಜಿನಾಮೆಗೆ

ಸಮರಧೀರ ಚಳುವಳಿ ಆರಂಭ

ತ್ರಿಪುರಾದ ಕಾಂಗ್ರೆ-ಟಿ.ಯುಜೆ.ಎಸ್.ನ ಅರೆಫ್ಯಾಸಿಸ್ಟ್ ಭಯೋತ್ಪಾದಕ ಆಳ್ವಿಕೆ ಬೆಲೋನಿಯಾದಲ್ಲಿ ಸಾಮೂಹಿಕ ಹತ್ಯಾಕಾಂಡ ನಡೆಸಿ 13 ಸಿ.ಪಿ.ಐ.(ಎಂ) ಮುಖಂಡರನ್ನು, ಕಾರ್ಯಕರ್ತರನ್ನು ಕೊಂದ 14 ತಿಂಗಳನಂತರ ಈಗ ಮತ್ತೊಮ್ಮೆ ಅಂತಹುದೇ ಹತ್ಯಾಕಾಂಡದ ಯೋಜನೆ ಹಾಕಿ ಜಾರಿಗೊಳಿಸುತ್ತಿದೆ.

ಅಗರ್ತಲಾದಿಂದ 150 ಕಿ.ಮೀ. ದೂರದ ನಲುವಾದಲ್ಲಿ ಡಿಸೆಂಬರ್ 22ರಂದು ಕಾಂಗ್ರೆ ಮುಖ್ಯ ಮಂತ್ರಿ ಸುಧೀರ್ ರಂಜನ್ ಮುಜುಂದಾರ್ ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಕೊಲ್ಲುತ್ತೇವೆ ಎಂದು ಬಹಿರಂಗವಾಗಿಯೇ ಘೋಷಿಸುತ್ತಿದ್ದಾಗ ಅತ್ತ ಅವರ ಕ್ರಿಮಿನಲ್ ಗ್ಯಾಂಗ್‌ಗಳು ತಮ್ಮ ಕೆಲಸವನ್ನು ಆಗಲೇ ಆರಂಭಿಸಿದ್ದರು. ಸಿ.ಪಿ.ಐ. (ಎಂ) ಕಾರ್ಯಕರ್ತರ ಅಪಹರಣ ಆಗಲೇ ಆರಂಭವಾಗಿತ್ತು. 13 ಮಂದಿ ನಾಪತ್ತೆಯಾಗಿದ್ದರು.

ಎರಡು ದಿನದ ನಂತರ ನಲುವಾಕ್ಕೆ ರಾಜ್ಯಪಾಲರು ಆಗಮಿಸುವ ಸ್ವಲ್ಪವೇ ಮೊದಲು ಮಾನಿಕ್ ನಾಮಾ ಎಂಬ ಯುವಕನ ಶವ ಪತ್ತೆಯಾಯಿತು. ಆದರೂ ಅಲ್ಲಿನ ಪೋಲೀಸರು ನಾಪತ್ತೆಯಾದವರನ್ನು ಹುಡುಕುವ ಪ್ರಯತ್ನ ಮಾಡುವುದಿಲ್ಲ ಎಂದು ತಿಳಿದಾಗ ಪಕ್ಷ ಐವರು ಎಂ.ಎಲ್.ಎ ಗಳಿದ್ದ ಒಂದು ತಂಡವನ್ನು ಕಳಿಸಿತು.

ರಾಜ್ಯಪಾಲರನ್ನು ಭೇಟಿಯಾಗಿ ಈ ಪ್ರದೇಶದಲ್ಲಿ ಹುಡುಕಾಟ ನಡೆಸಲು ನಾವೇ 500 ಯುವಕರ ತಂಡ ಕಳುಹಿಸುವುದಾಗಿಯೂ ತಿಳಿಸಲಾಯಿತು. ವ್ಯಾಯಾಂಗ ತನಿಖೆಗೂ ಒತ್ತಾಯಿಸಲಾಯಿತು.

ಇದರಿಂದ ಭಯಗೊಂಡು ಅದೇ ರಾತ್ರಿ ಕಾಮ್ರೇಡ್ ಸ್ವಪನ್ ದೇಬ್‌ನಾಥ್‌ರ, ಮರುದಿನ ಬೆಳಗ್ಗೆ ಕಾಮ್ರೇಡ್ ನಿರೇಶ್ ದೇಬ್‌ನಾಥ್‌ರ ಶವ ಸಿಕ್ಕಿರುವುದಾಗಿ ಪೋಲೀಸರು ತಿಳಿಸಿದರು.

25 ವರ್ಷ ವಯಸ್ಸಿನ ಕಾಮ್ರೇಡ್ ಮಾನಿಕ್ ನಾಮಾ ಬಡ ಕುಟುಂಬದಿಂದ ಬಂದ ಒಬ್ಬ ಡಿ.ವೈ.ಎಫ್.ಐ. ಕಾರ್ಯಕರ್ತ. ಕಾಂಗ್ರೆ ಗೂಂಡಾಗಳು ಆತನನ್ನು ಅಪಹರಿಸಿ ಗಂಟಲು ಕತ್ತರಿಸಿ ಕೊಂದಿದ್ದರು. ಆತನ ಹೆಂಡತಿ, ಎರಡು ತಿಂಗಳು ಮಗು ಹಾಗೂ ವಯಸ್ಸಾದ ತಾಯಿಯನ್ನು ಅನಾಥರನ್ನಾಗಿಸಿದರು.

ಕಾಮ್ರೇಡ್ ನಿರೇಶ್ ದೇಬ್‌ನಾಥ್ ಒಬ್ಬ ಕೃಷಿ ಕಾರ್ಮಿಕರು. ಸಿ.ಪಿ.ಐ.(ಎಂ) ಸದಸ್ಯರಾಗಿದ್ದರು. ಆತನ ಅಂಗಾಂಗಗಳನ್ನು ತುಂಡರಿಸಿ ಹಾಕಲಾಗಿತ್ತು.

ಕಾಮ್ರೇಡ್ ಸ್ವಪನ್ ದೇಬ್‌ನಾಥ್ ಒಂದು ಬಡ ಭೂಹೀನ ಕುಟುಂಬದಿಂದ ಬಂದು ಕಷ್ಟಪಟ್ಟು ಶಿಕ್ಷಣ ಮುಂದುವರಿಸುತ್ತಿದ್ದ ವಿದ್ಯಾರ್ಥಿ. ಆತ ಬಿ.ಕಾಂ. ಪಾಸಾದ ಸುದ್ದಿ ಬಂದ ದಿವಸವೇ ಆತನ ಕೊಲೆಯಾಗಿತ್ತು.

ಕಾನಪುರ ವಿಶ್ವವಿದ್ಯಾಲಯ ಎಂ.ಎಸ್.ಸಿ. ಅಂತಿಮ ಪರೀಕ್ಷೆಯನ್ನು ಇತ್ತೀಚೆಗಷ್ಟೆ ಮುಗಿಸಿದ ಕಾಮ್ರೇಡ್ ಸುಶೀಲ್ ಮಹಾಜನ್‌ನನ್ನು ಕೂಡಾ

> ತ್ರಿಪುರಾದಲ್ಲಿ ಸರ್ಕಾರವೆಂಬುದಿಲ್ಲ, ಮಾಫಿಯಾಗ್ಯಾಂಗ್‌ನ ಆಳ್ವಿಕೆಯಿದೆಯಷ್ಟೆ ಎಂದು ಹೊರಗಿನಿಂದ ಬಂದ ಪತ್ರಕರ್ತರೂ ಅಭಿಪ್ರಾಯಪಡುತ್ತಿದ್ದಾರೆ.
>
> ಇಂತಹ ಸರ್ಕಾರದ ರಾಜಿನಾಮೆಯ ಒತ್ತಾಯ ಮನೆ-ಮನೆಗೂ, ರಾಜ್ಯದ ಮೂಲೆ ಮೂಲೆಗೂ ತಲುಪಬೇಕೆಂದು ತ್ರಿಪುರಾ ರಾಜ್ಯ ಸಮಿತಿ ಕರೆ ನೀಡಿದೆ.

ಇದೇ ರೀತಿ ಕೊಲೆಮಾಡಿ ಮೂರು ತುಂಡುಗಳಾಗಿ ಕತ್ತರಿಸಲಾಗಿದೆ ಎಂದು ತಿಳಿದುಬಂದಿದೆ. ಶವ ಇನ್ನೂ ಪತ್ತೆಯಾಗಿಲ್ಲ.

ಈ ಅಮಾನುಷ ಕೊಲೆಗಳ ಸುದ್ದಿ ಹರಡಿದ ಕೂಡಲೇ ತ್ರಿಪುರಾದ ಜನ ರಾಜಕೀಯ ಭೇದ ಭಾವಗಳಿಲ್ಲದೆ ತಮ್ಮ ತೀವ್ರ ಪ್ರತಿಭಟನೆ ಸಲ್ಲಿಸಲು ಬೀದಿಗಿಳಿದರು. ಅಗರ್ತಲಾದಲ್ಲಿ ಒಂದು ದೊಡ್ಡ ಮೆರವಣಿಗೆ ನಡೆಸಲಾಯಿತು. ಡಿಸೆಂಬರ್ 29 ರಂದು ವ್ಯಾಪಕ ಮತಪ್ರದರ್ಶನಗಳು ನಡೆದವು.

21 ತಿಂಗಳ ಹಿಂದೆ ಅರೆ - ಫ್ಯಾಸಿಸ್ಟ್ ಭಯೋತ್ಪಾದನೆ ಆರಂಭವಾದಾಗ ತಮ್ಮ ಮನೆ - ಮಾರು ಬಿಟ್ಟು ಹೋಗಬೇಕಾಗಿ ಬಂದಿದ್ದ ಸಂಗಾತಿಗಳು ನವಂಬರ್ ಚುನಾವಣೆಗಳ ನಂತರ ದೇಶಾದ್ಯಂತ ಹೊಸ ವಾತಾವರಣ ಮೂಡಿ ಬಂದಾಗ ತಮ್ಮ ಮನೆಗಳಿಗೆ ಮರಳಲು ತಂತಮ್ಮ ಪ್ರದೇಶಗಳ ನಾಗರಿಕ ಹಾಗೂ ಪೋಲೀಸ್ ಅಧಿಕಾರಿಗಳ ಪರವಾನಿಗಿ ಕೇಳಿದ್ದರು. ಈ ಅಧಿಕಾರಿಗಳು ಅವರಿಗೆ ರಕ್ಷಣೆಯ ಭರವಸೆ ಕೂಡಾ ನೀಡಿದ್ದರು. ಆದರೆ ಅವರು ವಾಪಾಸು ಮರಳಿದಾಗ ಇಂತಹ ಗೂಂಡಾ ದಾಳಿಗಳು ಮತ್ತೆ ಆರಂಭವಾದವು.

"ತ್ರಿಪುರಾರಕ್ಷಿಸಿವಾರಾಚರಣೆ

ಚುನಾವಣೆಗಳ ಸಮಯದಲ್ಲಿ ತಾರಕಕ್ಕೇರಿದ ಕಾಂಗ್ರೆ ಭಯೋತ್ಪಾದನೆ ಚುನಾವಣೆಗಳ ನಂತರವೂ ಮುಂದುವರಿಯಿತು. ಸಿ.ಪಿ.ಐ.(ಎಂ) ಮುಖಂಡರ, ಕಾರ್ಯಕರ್ತರ ಕೊಲೆ ಮಾಡುವ ಈ ಸುಯೋಜಿತ ಹಲ್ಲೆಗಳ ನೇತೃತ್ವವನ್ನು ನೇರವಾಗಿ ಕಾಂಗ್ರೆ ಮುಖಂಡರು, ಮಂತ್ರಿಗಳೇ ವಹಿಸಲಾರಂಭಿಸಿದ್ದರು.

ಇದನ್ನು ಪ್ರತಿಭಟಿಸಿ, ತ್ರಿಪುರಾದಲ್ಲಿ ಮತ್ತೆ ಪ್ರಜಾಪ್ರಭುತ್ವ ಸ್ಥಾಪಿಸಬೇಕೆಂದು ಒತ್ತಾಯಿಸಿ ಎಡರಂಗದ ಕರೆಯ ಮೇರೆಗೆ ರಾಜ್ಯಾದ್ಯಂತ ಡಿಸೆಂಬರ್ 10ರಿಂದ 16 ರವರೆಗೆ 'ತ್ರಿಪುರಾ ರಕ್ಷಿಸಿ ವಾರಾಚರಣೆ' ಯಶಸ್ವಿಯಾಗಿ ನಡೆಯಿತು.

ಡಿಸೆಂಬರ್ 22 ರಿಂದ 24 ರವರೆಗೆ ನಡೆದ ಸಿ.ಪಿ.ಐ.(ಎಂ)ನ ತ್ರಿಪುರಾ ರಾಜ್ಯ ಸಮಿತಿ ಸಭೆ ಕಾಂಗ್ರೆ ಟಿ.ಯು.ಜೆ.ಎಸ್. ಸರ್ಕಾರದ ಸವಾಲನ್ನು ಎದುರಿಸಲು ಮುಂದಾದುದಕ್ಕೆ ತ್ರಿಪುರಾ ಜನತೆಯನ್ನು ಅಭಿನಂದಿಸಿದೆ.

ವಿಶೇಷವಾಗಿ ಬುಡಕಟ್ಟು ಅಲ್ಪಸಂಖ್ಯಾತರು ಪಕ್ಷಗಳ ಭೇದ-ಭಾವವಿಲ್ಲದೆ ಬುಡಕಟ್ಟು ಜನರ ಬೇಡಿಕೆಗಳ ಪಟ್ಟಿಯ ಆಧಾರದ ಮೇಲೆ ಎಲ್ಲಾ ಬುಡಕಟ್ಟು ವಿಭಾಗಗಳನ್ನು ಈ ಸರಕಾರದ ವಿರುದ್ಧ ಒಂದುಗೂಡಿಸುವ ಪ್ರಯತ್ನ ನಡೆಸುತ್ತಿರುವುದನ್ನು ಅದು ಗಮನಿಸಿತು. ಜನವರಿ 10ನ್ನು 'ಸ್ವಾಯತ್ತ ಜಿಲ್ಲಾ ಮಂಡಳಿ ದಿನ'ವಾಗಿ ರಾಜ್ಯಾದ್ಯಂತ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗಿದೆ.

ಸಿ.ಪಿ.ಐ.(ಎಂ) ಮತ್ತು ಎಡರಂಗ ಕಾಂಗ್ರೆ ಟಿ.ಯ.ಜೆಎಸ್. ಕೂಟದ ಸರ್ಕಾರ ರಾಜಿನಾಮೆ ನೀಡುವಂತೆ ಸಾಮೂಹಿಕ ಒತ್ತಡ ತರಲು ತಕ್ಷಣ ರಾಜ್ಯವ್ಯಾಪ್ತಿ ಸರ್ವವ್ಯಾಪಿ ಸಮರಧೀರ ಚಳುವಳಿ ನಡೆಸಲು ನಿರ್ಧರಿಸಿವೆ. ಈ ಹೋರಾಟದ ಆಧಾರವಾಗಿ ಹತ್ತಂಶಗಳ ಬೇಡಿಕೆ ಪಟ್ಟಿ ತಯಾರಿಸಲಾಗಿದೆ. ಸರಕಾರದ ಮಿತಿಮೀರಿದ

ಖರ್ಚಿನಿಂದಾಗಿ 30 ಕೋಟಿಯಷ್ಟು ಒಟ್ಟು ಸಂಪನ್ಮೂಲವಿಲ್ಲದ ರಾಜ್ಯದ ಖೋತಾ 90 ಕೋಟಿ.ರೂ.ಗಳನ್ನು ಮೀರಿದೆ. ರಾಜ್ಯದಲ್ಲಿ 'ಸರ್ಕಾರವೆಂಬುದಿಲ್ಲ, ಮಾಫಿಯಾ ತಂಡದ ಆಳ್ವಿಕೆಯಿದೆಯಷ್ಟೇ' ಎಂದು ಹೊರಗಿನಿಂದ ಬಂದ ಪತ್ರಕರ್ತರೇ ಹೇಳುತ್ತಿದ್ದಾರೆ. ಆದ್ದರಿಂದ ಪಕ್ಷಗಳ ಭೇದ ಭಾವವಿಲ್ಲದೆ ಎಡರಂಗದ ಈ ಹೋರಾಟದಲ್ಲಿ ಭಾಗವಹಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯಸಮಿತಿ ಜನತೆಗೆ ಕರೆ ನೀಡಿದೆ.

ಕಾಂಗ್ರೆ- ಟಿ.ಯು.ಜೆ.ಎಸ್. ಕೂಟದ ಸರ್ಕಾರದ ರಾಜಿನಾಮೆ ಒತ್ತಾಯ ಪ್ರತಿ ಮನೆಯನ್ನು, ರಾಜ್ಯದ ಪ್ರತಿ ಮೂಲೆಯನ್ನು ತಲುಪಬೇಕು. ಈ ಮೂಲಕ ಜನತೆಯ ಬೇಡಿಕೆಗಳಿಗೆ ಅದು ಸ್ಪಂದಿಸದಿದ್ದರೆ ಅದನ್ನು ಕಿತ್ತೆಸೆಯಲು ಸಾಧ್ಯವಾಗಬೇಕು ಎಂದು ರಾಜ್ಯಸಮಿತಿ ಕರೆ ನೀಡಿದೆ.

ಎಡರಂಗದ ಚಳುವಳಿಯ ನಿರ್ಧಾರವನ್ನು ಕೇಳಿದ ಕಾಂಗ್ರೆ ಮುಖ್ಯಮಂತ್ರಿ ಕಾನೂನನ್ನು ಉಲ್ಲಂಘಿಸಿ ವರ್ತಿಸಲು ತಮ್ಮ ಬೆಂಬಲಿಗರಿಗೆ ಬಹಿರಂಗ ಕರೆ ನೀಡಿದ್ದಾರೆ!

ರಾಜ್ಯದಲ್ಲಿ ಬರ್ಬರ ಪೋಲೀಸರ ಕೃತ್ಯಗಳು

ಆರು ವಾರಗಳ ಹಿಂದೆ ಕೇಂದ್ರದಲ್ಲಿ ಅಧಿಕಾರವನ್ನು ವಹಿಸಿಕೊಂಡ ಶ್ರೀ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗದ ಸರ್ಕಾರವು ಪಂಜಾಬ್ ಸಮಸ್ಯೆಯನ್ನು ಬಗೆ ಹರಿಸಲು ತೆಗೆದುಕೊಂಡ ಕ್ರಮ ಸಂವಿಧಾನದ 59 ನೆಯ ಸಂವಿಧಾನದ ತಿದ್ದುಪಡಿಯನ್ನು ತೆಗೆದುಹಾಕಿರುವುದು, ಕೆಲಸದ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸಂವಿಧಾನದಲ್ಲಿ ಸೇರಿಸಲು ಹೊರಟಿರುವುದು, ಆಕಾಶವಾಣಿ ಮತ್ತು ದೂರದರ್ಶನಗಳಿಗೆ ಸ್ವಾಯತ್ತತೆಯನ್ನು ಕೊಡಲು ವಿಧೇಯಕವೊಂದನ್ನು ಲೋಕಸಭೆಯಲ್ಲಿ ಮಂಡಿಸಿರುವುದು, ನ್ಯಾಯಾಧೀಶರನ್ನು ನೇಮಿಸಲು ಜುಡಿಷಿಯಲ್ ಕಮೀಷನ್ನನ್ನು ನೇಮಿಸುವುದು ಮುಂತಾದ ಕ್ರಮಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯು ಸ್ವಾಗತಿಸುತ್ತದೆ.

ಇತ್ತೀಚೆಗೆ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಗಳಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಪಕ್ಷವು ತನ್ನ ಆಡಳಿತದ ಒಂದೂವರೆ ತಿಂಗಳ ಕಾಲಾವಧಿಯಲ್ಲಿ ರಾಜ್ಯದ ಜನತೆಯ ಮೇಲೆ ಬರ್ಬರ ಪೋಲೀಸು ಧಬ್ಬಾಳಿಕೆಯನ್ನು ಹರಿಬಿಡುವ ಮೂಲಕ ಕಾಂಗ್ರೆಸ್ ಆಡಳಿತದ ವೈಖರಿಯನ್ನು ತೋರಿಸಿದೆ.

ಕಾಂಗ್ರೆಸ್ (ಐ) ಸರ್ಕಾರದ ಪೋಲೀಸು ನೀತಿಯಿಂದಾಗಿ ಲಾಕಪ್‌ಗಳಲ್ಲಿ ಬಂಧಿತರ ಸಾವು ಹೆಚ್ಚಾಗುತ್ತಿದೆ. ಹೋರಾಟ ಮಾಡುವ ರೈತರ, ವಿದ್ಯಾರ್ಥಿಗಳ, ಕಾರ್ಮಿಕರ ಮೇಲೆ ಪೋಲೀಸು ದಬ್ಬಾಳಿಕೆ, ಬೆತ್ತಪ್ರಹಾರ, ಅಶ್ರುವಾಯು ಪ್ರಯೋಗಗೊಂಡಿವೆ. ರಾಜ್ಯದ ಅನೇಕ ಕಡೆ ಇತ್ತೀಚಿಗಿನ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಪಕ್ಷಕ್ಕೆ ಮತವೀಯಲಿಲ್ಲವೆಂಬ ಕಾರಣಕ್ಕೆ ಕಾಂಗ್ರೆಸ್ (ಐ) ಗೂಂಡಾಗಳು ವಿರೋಧ ಪಕ್ಷಗಳ ಹಿಂಬಾಲಕರ ಮೇಲೆ ದಬ್ಬಾಳಿಕೆ ಹಾಗೂ ಹಿಂಸಾಚಾರ ನಡೆಸಿದ್ದಾರೆ.

ಗುಲ್ಬರ್ಗದಲ್ಲಿ, ಪೋಲೀಸ್ ಲಾಕಪ್‌ನಲ್ಲಿ ಒಬ್ಬ ಬಂಧಿತನ ಸಾವಿನ ನಂತರ ಜನರ ಪ್ರತಿಭಟನಾ ಪ್ರದರ್ಶನದ ಮೇಲೆ ಪೋಲೀಸರು ನಡೆಸಿದ ಗೋಲೀಬಾರಿನಲ್ಲಿ ಮೂವರು ಪ್ರಾಣ ಕಳೆದುಕೊಂಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಜಾಬಾದಿನಲ್ಲಿ

ಪುಟ ೬ ನೋಡಿ.

ರೈತ ಮುಖಂಡರ ಬಂಧನ ಪ್ರತಿಭಟನಾ ಸಭೆ

ರೈತರ ಮೇಲೆ ಕಾಂಗ್ರೆ ಸರ್ಕಾರದ ಅಮಾನುಷ ಧಾಳಿ

ಜನವರಿ 4 -1990 ರಂದು 500 ಕ್ಕೂ ಹೆಚ್ಚು ಪೋಲೀಸರು ಭದ್ರಾವತಿ ತಾಲ್ಲೂಕಿನ ತರೀಕೆರೆ ಫಾರ್ಮ್ ಭೂಮಿ ಆಕ್ರಮಿಸಿ ಅಲ್ಲಿ ವಾಸವಾಗಿರುವ ಹರಿಜನ, ಗಿರಿಜನ, ಭೂ ರಹಿತ ಪುರುಷ, ಮಹಿಳೆ, ಮುದುಕ, ಮಕ್ಕಳ ಮೇಲೆ ಅಮಾನವೀಯವಾಗಿ ಲಾಠಿ ಚಾರ್ಜ್ ಮಾಡಿ, ಟಿಯರ್ ಗ್ಯಾಸ್ ಬಳಸಿ, ದಮನಿಸಿ ನೂರಾರು ಜನರನ್ನು ಬಂಧಿಸಿ ಕೊಂಡೊಯ್ಯಲಾಗಿದೆ. ಮೂರು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಬತ್ತ, ಅಡಿಗೆ ಪಾತ್ರೆ, ಹಾಸಿಗೆ, ಹೊದಿಕೆಗಳನ್ನು ಲೂಟಿ ಮಾಡಿ ಪೋಲೀಸರು ಕೊಂಡೊಯ್ದಿದ್ದಾರೆ.

ದೇಶದ ಎಲ್ಲಾ ಜೀಪುಗಳ ತಯಾರಕ ಅತಿ ಶ್ರೀಮಂತರಲ್ಲೊಬ್ಬರಾದ ಮಹೇಂದ್ರ ಮತ್ತು ಮಹೇಂದ್ರ ಕಂಪನಿಯ ಹಿಡಿತದಲ್ಲಿರುವ ಸರಕಾರಿ ಭೂಮಿಯನ್ನು ಭದ್ರಾವತಿ ತಾಲ್ಲೂಕಿನ ಭೂಹೀನ ರೈತರು, ಕೃಷಿ ಕಾರ್ಮಿಕರು ಪಡೆಯಲು ಹೋರಾಟ ನಡೆಸುತ್ತಿದ್ದರು. ತುಂಗಭದ್ರ ಸಕ್ಕರೆ ಕಾರ್ಖಾನೆಗೆ ಸರ್ಕಾರ ಗುತ್ತಿಗೆಯಾಗಿ ನೀಡಿರುವ ಈ ಭೂಮಿಯನ್ನು 3 ವರ್ಷದಿಂದ ಪಾಳು ಬಿಡಲಾಗಿತ್ತು. ಗುತ್ತಿಗೆಯ ಅವಧಿಯೂ 89 ರ ಡಿಸೆಂಬರ್‌ನಲ್ಲಿ ಮುಗಿಯುವುದಿತ್ತು. ಇಂತಹ ಸಂದರ್ಭದಲ್ಲಿ ಮತ್ತೆ ಗುತ್ತಿಗೆ ಅವಧಿ ಮುಂದುವರಿಸದಿರಲು, ಹಾಗೂ ಶ್ರೀಮಂತರ ಪಾಲು ಮಾಡದೆ ಭೂಹೀನರಿಗೆ ದಲಿತರಿಗೆ ನೀಡಲು ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಗಳು ಒಮ್ಮೆ ಭೂ ಆಕ್ರಮಣವನ್ನು ಮಾಡಿದ್ದರು. ಇದನ್ನು ತೆರವು ಮಾಡಲು ಅಲ್ಲಿಯ ಜಿಲ್ಲಾಧಿಕಾರಿಗಳು ವಿನಂತಿಸಿ, ಚುನಾವಣೆಗಳು ಮುಗಿದ ಕೂಡಲೇ ಭೂಮಿ ನೀಡಲು ಪ್ರಯತ್ನಿಸುವುದಾಗಿ ವಿನಂತಿಸಿದ್ದರು.

ಅಧಿಕಾರಿಗಳ ಮಾತಿನಂತೆ ಚುನಾವಣೆ ಮುಗಿದ ನಂತರ ದಿನಾಂಕ 11-12-1989 ರಂದು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಪ್ರತಿನಿಧಿಗಳು, ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿದರು. ಪ್ರತಿನಿಧಿಗಳನ್ನು ಅಧಿಕಾರಿಗಳು [illegible] ಹೋಗಲು ತಿಳಿಸಲಾಯಿತು. ಭೂಮಿಯು

ಪುಟ ೭ ನೋಡಿ

ನಾನೊಂದು ಕನಸು ಕಂಡೆ

ನಾವು ಒಂದಲ್ಲ ಒಂದು ರೀತಿಯಲ್ಲಿ ವ್ಯಾವಸಾಯಿಕ ಕಲಾವಿದರಾಗಬೇಕು. ನಮ್ಮ ಸಮಾಜದಲ್ಲಿ ಇದಕ್ಕೆ ಅವಕಾಶಗಳು ಕಡಿಮೆ. ನಮಗೆ ಪ್ರಾಯೋಜಕರು ಸಿಗುವುದಿಲ್ಲ. ಟ್ರೇಡ್ ಯೂನಿಯನ್ ಮತ್ತು ಪಾರ್ಟಿಯ ಹತ್ತಿರ ಸಹ ಹಣ ಇಲ್ಲ. ನಾಟಕ ಇನ್ಸ್‌ಟಿಟ್ಯೂಟ್ ಆರಂಭಿಸುವುದು ಕೆಲವು ಸಾವಿರಗಳ ಮಾತಲ್ಲ......

ಇಂತಹ ಇನ್ಸ್‌ಟಿಟ್ಯೂಟ್ ಮತ್ತು ರೆಪರ್ಟರಿ ತಂಡವನ್ನು ದೆಹಲಿಯಲ್ಲಿ ಸುಮಾರು 2 ಲಕ್ಷ ಕಾರ್ಮಿಕರಿರುವ ಕಾಲೋನಿಯಲ್ಲಿ ಸ್ಥಾಪಿಸಬೇಕೆಂದು ನಮ್ಮ ಇಚ್ಛೆ. ಅವರಿಗೆ ವಾರದಲ್ಲಿ 2-3 ದಿನ ನಿಯಮಿತವಾಗಿ ಕಾರ್ಯಕ್ರಮ ಕೊಡಬೇಕು.

ನಮ್ಮ ಕಾರ್ಮಿಕರು ಸಾಂಸ್ಕೃತಿಕ ಹಸಿವಿನಿಂದ ನರಳುತ್ತಿದ್ದಾರೆ. ಸಾಂಸ್ಕೃತಿಕವಾಗಿ ಮೂಲೆತಳ್ಳಲ್ಪಟ್ಟಿದ್ದಾರೆ. ಮುಂಬಯಿಯ ಸಿನೇಮಾಗಳಲ್ಲಿ ಅತಿ ದರಿದ್ರವಾದದ್ದು ಮಾತ್ರ ಅವರಿಗೆ ತಲುಪುತ್ತದೆ. ನಾಟಕ ಅವರಿಗೆ ತಲುಪುವುದೇ ಇಲ್ಲ. ಸಾಹಿತ್ಯ ಸಹ ಹೆಚ್ಚಿನವರನ್ನು ತಲುಪುವುದೇ ಇಲ್ಲ...ಅವರ ಬಳಿಗೆ ಭಾರತದ ರಂಗಭೂಮಿಯಲ್ಲಿ ಅತ್ಯುತ್ತಮವಾದದ್ದನ್ನು. ಶೇಕ್ಸ್‌ಪೀಯರ್ ಗೋರ್ಕಿ ತೆಗೆದುಕೊಂಡು ಹೋಗಬೇಕೆಂಬುದು ನಮ್ಮ ಕನಸು.... ಭವಿಷ್ಯದ ಬಗ್ಗೆ ಹೇಳಬೇಕಾದರೆ ನಿಜವಾಗಿಯೂ ಜನಪರವಾದ ಎಡ ರಂಗಭೂಮಿಯ ಬೆಳವಣಿಗೆಗೆ ಅಡಿಪಾಯ ಹಾಕಬೇಕಾದರೆ ಇಂತಹ ಒಂದು ರೆಪರ್ಟರಿ ಮತ್ತು ಇನ್ಸ್‌ಟಿಟ್ಯೂಟ್ ಬೇಕಾಗುತ್ತದೆ. ನಮ್ಮ ಕನಸೆಂದರೆ ಇಂತಹ ಒಂದು ಕೇಂದ್ರ, ಸಹ ಮತ್ತು ದೇಶದ ಇತರ ಹಲವು ತಂಡಗಳಿಗೆ ತರಬೇತಿ ಕೇಂದ್ರ ಸಹ ಆಗಬೇಕು.......

ಇಂತಹ ಎಲ್ಲಾ ಕೆಲಸಗಳಿಗೆ ಸುಮಾರು ಲಕ್ಷ 40 ಬೇಕಾಗುತ್ತಧೆ ಇದು ಎಲ್ಲಿಂದ ಬರಬಹುದು ಎಂದು ನನಗೆ ಗೊತ್ತಿಲ್ಲ. ಆದರೆ ಇದಕ್ಕೆ ನಾವು ಪ್ರಯತ್ನವಂತೂ ಮಾಡುತ್ತಿದ್ದೇವೆ. 'ಜನಮ್'ನನಗೆ ಇಂತಹ ಹಣ ಸಂಗ್ರಹಿಸಲು 3ವರ್ಷದ ಅವಧಿ ಕೊಟ್ಟಿದೆ........

..ಸದ್ಯಕ್ಕೆ ಇನ್ಸ್‌ಟಿಟ್ಯೂಟ್ ಒಂದು ವೈಯಕ್ತಿಕ ಕನಸು.ಎಡಚಳುವಳಿಯ ಕಾರ್ಯತಂತ್ರದ ಭಾಗವಾಗುವ ಹಂತದಿಂದ ಇದು ಹರದಾರಿಗಳಷ್ಟು ದೂರವಿದೆ. ನಾನು ಪಾರ್ಟಿ ಬಳಿ ಹೋಗಿ ಇಂತಹುದು ಮಾಡಬೇಕು ಎಂದರೆ ನನ್ನನ್ನು ಹುಚ್ಚ ಎಂದು ಕರೆದಾರು. ಕೆಲವೊಮ್ಮೆ ಇಂತಹ ವೈಯಕ್ತಿಕ ಕನಸುಗಳಿಗಾಗಿ ನಾವು ದುಡಿಯಬೇಕಾಗುತ್ತದೆ. ಮೂರು ನಾಲ್ಕು ವರ್ಷಗಳೊಳಗೆ ಈ ಕನಸು ನನಸಾಗಬಹುದೇನೋ. ದೇಶದ ಇತರ ಕಡೆಗಳಲ್ಲಿರುವವರಿಗೂ ಇಂತಹ ಕನಸುಗಳಿರಬಹುದು. ಅವರು ಇಂತಹ ಕನಸುಗಳನ್ನು ಇನ್ನೂ ಬೇಗನೇ ನನಸಾಗಿಸಲು ಸಾಧ್ಯತೆ ಇದೆ.

ಕೊಲೆಯಾಗಿ ಒಂದು ವರ್ಷವಾಯಿತು...ಆದರೂ

ಸಫ್ದರ್ ಹಾಶ್ಮಿ ಹೇಳುತ್ತಾರೆ

.....ಬನ್ನಿ ಕೇಳೋಣ

ಜನವರಿ 1,1989 ಸರಿಯಾಗಿ ಒಂದು ವರ್ಷದ ಹಿಂದೆ. ರಂಗ ಕಾರ್ಯಕರ್ತ, ನಾಟಕಕಾರ, ಕವಿ, ಮತ್ತು ಸಿ.ಪಿ.ಐ. (ಎಂ) ಸದಸ್ಯ ಸಫ್ದರ್ ಹಾಶ್ಮಿಯ ಮೇಲೆ ಅಮಾನುಷ ಪ್ರಾಣಾಂತಿಕ ಹಲ್ಲೆ ನಡೆಯಿತು. ದೇಶದ ರಾಜಧಾನಿಯಿಂದ 15ಕಿ.ಮೀ. ದೂರದಲ್ಲಿ. ಸ್ಥಳೀಯ ಪೋಲಿಸ್ ಠಾಣೆಯ ಎರಡು ಕಿ.ಮೀ.ದೂರದಲ್ಲಿ. ಸಾಹಿಬಾಬಾದಿನ ನೂರಾರು ನಿವಾಸಿಗಳ ಕಣ್ಣೆದುರಿನಲ್ಲೇ.

ಸಫ್ದರ್ ಭಾರತದ ಜನಪರ ನಾಟಕ ಚಳುವಳಿ ಬಗ್ಗೆ ಹಲವು ಕನಸುಗಳನ್ನು ಕಂಡವರು ಒಂದು ನಾಟಕ ಇನ್ಸ್‌ಟಿಟ್ಯೂಟ್ ಮತ್ತೊಂದು ರೆಪರ್ಟರಿ- ಅವರ ಕನಸುಗಳಲ್ಲೊಂದು- ಸಾಕಾರಗೊಳ್ಳಬಹುದಾದ ಹಾದಿಯಲ್ಲಿದೆ.

ಸಫ್ದರ್‌ರನ್ನು ಕೊಂದ ಕಾಂಗ್ರೆಸ್ ಪೋಷಿತ ಗೂಂಡಾಗಳಿಗೆ, ಅವರ ರಾಜಕೀಯ ಬಾಸ್‌ಗಳಿಗೆ ಜನತೆ ನವಂಬರ್ ಕೊನೆಯಲ್ಲಿ ಬುದ್ಧಿ ಕಲಿಸಿದ್ದಾರೆ. ಆದರೂ ಸಫ್ದರ್ ಹುತಾತ್ಮರಾದದ್ದು ವ್ಯರ್ಥವಾಗಲಿಲ್ಲ. ಎಷ್ಟರಮಟ್ಟಿಗೆ ಜನಪರ ರಂಗಭೂಮಿ ಚಳುವಳಿ ಮುನ್ನಡೆದಿದೆಯೇ? ವಿಶೇಷವಾಗಿ ಕರ್ನಾಟಕದಲ್ಲಿ? ಜನಪರ ರಂಗಭೂಮಿ ಚಳುವಳಿ ಬಗ್ಗೆ ಸಫ್ದರ್‌ರ ಅನಿಸಿಕೆಗಳ ಕೆಲವು ತುಣುಕುಗಳು ಇಲ್ಲಿವೆ. ಅವರ ಬರಹಗಳಿಂದ ಆಯ್ದುವುಗಳು.

ಸಾಂಸ್ಕೃತಿಕ ಕ್ರಾಂತಿ

ನಮ್ಮ ಕೆಲಸ ಸದ್ಯಕ್ಕೆ ಸಾಂಸ್ಕೃತಿಕ ಕ್ರಾಂತಿ ಮಾಡುವುದಲ್ಲ. ನನ್ನ ಪ್ರಕಾರ ಸಾಂಸ್ಕೃತಿಕ ಕ್ರಾಂತಿಯನ್ನು ಮಾಡುವುದು ಒಂದು ರಾಜಕೀಯ ಪಕ್ಷ. ಒಂದು ಸಾಂಸ್ಕೃತಿಕ ಗುಂಪಿನಿಂದ ಈ ಕೆಲಸ ಸಾಧ್ಯವಿಲ್ಲ. ಆದರೆ ಸಾಂಸ್ಕೃತಿಕ ಗುಂಪು ಇಂತಹ ಕ್ರಾಂತಿಯಲ್ಲಿ ತನ್ನ ಪಾತ್ರ ವಹಿಸಬಲ್ಲದು.

ಸಾಂಸ್ಕೃತಿಕ ಕ್ರಾಂತಿಗೆ ಹಲವು ಆಯಾಮಗಳಿವೆ- ದೊಡ್ಡ ಪ್ರಮಾಣದ ಸಾಕ್ಷರತಾ ಚಳುವಳಿ; ಸಾಹಿತ್ಯದ ಆಸ್ತಿಯನ್ನು ಜನರಲ್ಲಿ ಹಂಚುವುದು; ಸಿನಿಮಾ ಟೆಲಿವಿಜನ್ ಮತ್ತು ನಾಟಕವನ್ನು ಒಂದು ಉದ್ದೇಶಕ್ಕಾಗಿ ನಿರ್ಮಾಣ ಮಾಡುವುದು; ಹೊಸ ಮೌಲ್ಯಗಳನ್ನು ಜನತೆಗೆ ಕೊಡುವುದು; ಹಳೆಯ ಮೌಲ್ಯಗಳ ವಿರುದ್ಧ ತೀವ್ರ ಹೋರಾಟ.....

ಆದರೆ ದೇಶದ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ನಮ್ಮ ಸಾಂಸ್ಕೃತಿಕ ಕೆಲಸಕ್ಕೆ ವಿಶಿಷ್ಟ ಪಾತ್ರವಿದೆ. ನಾವು ಕಾರ್ಮಿಕರು ಸಕ್ರಿಯವಾಗಿ ಟ್ರೇಡ್ ಯೂನಿಯನ್‌ನಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬಹುದು. ನಾವು ಮಧ್ಯಮ ವರ್ಗ ವಿದ್ಯಾರ್ಥಿಗಳು ಮತ್ತು ಯುವಜನರ ಮಧ್ಯೆ ಹೋರಾಟ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಬಿತ್ತಬಹುದು. ವಿಶಾಲ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ನಮ್ಮ ಪಾತ್ರ ಭಾವನಾತ್ಮಕವಾದುದು. ಪ್ರಜಾಸತ್ತಾತ್ಮಕ ಚಳುವಳಿಯ ಈ ಭಾವನಾತ್ಮಕ ಪಾತ್ರದಲ್ಲಿ ಸಣ್ಣ ಕತೆಗಾರರಿಗೆ, ಕವಿಗಳಿಗೆ, ಹಾಡಿನ ಗುಂಪುಗಳಿಗೆ ಅಷ್ಟೇ ಮುಖ್ಯವಾದ ಪಾತ್ರವಿದೆ.

ಬಾದಲ್ ಸರ್ಕಾರ ಮತ್ತು ತೃತೀಯ ರಂಗಭೂಮಿ

ಆತ ಬಂಗಾಲಿ ರಂಗಭೂಮಿಗೆ 4-5 ಪ್ರಮುಖ ನಾಟಕಗಳನ್ನು ಬರೆದು ಸಾಕಷ್ಟು ಪ್ರಮುಖ ಕೊಡುಗೆ ಕೊಟ್ಟಿದ್ದಾರೆ. ಆದರೆ ಈ 'ತೃತೀಯ ರಂಗಭೂಮಿ' ಪ್ರಾರಂಭ ಮಾಡಿದಾಗಿನಿಂದ ನಮ್ಮ ಜನಪರ ರಂಗಭೂಮಿ ಜತೆ ಸಾಕಷ್ಟು ಕಿಡಿಗೇಡಿತನದ ಆಟವಾಡಿದ್ದಾರೆ. ಆತ ಏನೇ ಹೇಳಲಿ ತನ್ನ ಕೆಲಸ ಹಲವಾರುವರ್ಕ್‌ಶಾಪ್‌ಗಳು, ಮತ್ತು ಆತನ ಜತೆ ಕೆಲಸ ಮಾಡುತ್ತಿರುವ ವಿದ್ಯಾರ್ಥಿಗಳು ಅನುಯಾಯಿ ರಂಗ ತಂಡಗಳ ಮೂಲಕ ಹಲವಾರು ಸಾಂಸ್ಕೃತಿಕ ಕೆಲಸಗಾರರ ಮಟ್ಟಿಗಂತೂ ನಾಟಕದ ವಸ್ತುವಿನ ಪ್ರಶ್ನೆಯನ್ನು ಮೂಲೆಗುಂಪು ಮಾಡಿದ್ದಾರೆ. ತಂತ್ರದ ಪ್ರಶ್ನೆಯನ್ನು ಅತಿ ಮುಖ್ಯವಾಗಿಸಿದ್ದಾರೆ - ತಂತ್ರವೇ ನಾಟಕದ ಮುಖ್ಯ ಅಂಗವೇನೋ ಎನ್ನಿಸುವಂತೆ ಬಾದಲ್ ಸರ್ಕಾರರ ಅನುಯಾಯಿಗಳಿಗೆ ನಾಟಕವನ್ನು ಒಂದು ವಿಶಿಷ್ಟ ರೀತಿಯಲ್ಲಿ ಆಡುವುದು. ನಾಟಕವನ್ನು ಯಾವುದೋ ಉದ್ದೇಶಕ್ಕಾಗಿ ಆಡುವುದಕ್ಕಿಂತ ಹೆಚ್ಚು ಮುಖ್ಯವಾದದ್ದು. ಅವರು ತಮ್ಮ ಶರೀರವನ್ನು ಏಕಮಾತ್ರ ಪರಿಕರವಾಗಿ ಉಪಯೋಗಿಸಿ - ನಾಟಕವಾಡುವುದೇ ಒಂದು ವಿಶಿಷ್ಟತೆ ಎಂದು ಬಗೆದಿದ್ದಾರೆ.....

..ಬಾದಲ್ ಸರ್ಕಾರ ಒಂದು ಪಂಥ ಸೃಷ್ಟಿಸಿದ್ದಾರೆ. ಆತ ತನ್ನ ಸುತ್ತ ಒಂದು ಮಾಯೆ ಸೃಷ್ಟಿಸುತ್ತಾರೆ..ಬಂಗಾಳದಲ್ಲಿ, ಎಡರಂಗ ಸರ್ಕಾರಕ್ಕೆ ವಿರೋಧವಾದ ಶಕ್ತಿಗಳೊಂದಿಗೆ ಕೆಲಸ ಮಾಡುತ್ತಾರೆ. ಬಂಗಾಳ ಮತ್ತು ಬಿಹಾರದ ಒಳ ಪ್ರದೇಶಗಳಲ್ಲಿ ಆತ ಚರ್ಚ್, ಸಂಘಟನೆಗಳೊಂದಿಗೆ ಕೆಲಸ ಮಾಡುತ್ತಾರೆ. ಸಿ.ಪಿ.ಐ. (ಎಂ)ನ್ನು ಸಾರ್ವಜನಿಕವಾಗಿ ಹಳಿಯುತ್ತಾರೆ. ಆತನೊಂದಿಗೆ ನಾವು ಎಂದಿಗೂ ಕೆಲಸಮಾಡಲಾರೆ. ಬೂರ್ಜ್ವಾ ಪತ್ರಿಕೆಗಳು ಆತನಿಗೆ ಭಾರೀ ಪ್ರಚಾರ ನೀಡಿವೆ- ಆತ ನಾಟಕಗಳಲ್ಲಿ ಭಾರೀ ಕ್ರಾಂತಿ ತಂದಿದ್ದಾನೊ ಎಂಬ ಭಾರತದಲ್ಲಿ ಬೀದಿ ನಾಟಕಗಳನ್ನು ಆತನೇ ಕಂಡು ಹಿಡಿದ್ದಾನೋ ಎಂಬ ಭಾವನೆ ಬರುವಂತೆ. ಇದು ದೊಡ್ಡ ಸುಳ್ಳು. ನಮ್ಮ ತಂಡವಂತೂ ಆತನ ಬಗ್ಗೆ ಕೇಳೂ ಇರಲಿಲ್ಲ. ಆತನ ನಾಟಕಗಳನ್ನು ನೋಡೂ ಇರಲಿಲ್ಲ. ಬೀದಿ ನಾಟಕ ಗಳು ನಮಗೆ ತುರ್ತಿನ ಅವಶ್ಯಕತೆ ಆಗಿತ್ತು. ಇದು ಎಷ್ಟೋ ಬೇರೆ ತಂಡಗಳ ಮಟ್ಟಿಗೂ ನಿಜ. ಬಾದಲ್ ಸರ್ಕಾರ ಶರೀರಕ್ಕೆ ವ್ಯಾಯಾಮ ಒದಗಿಸುವ ಕೆಲವು ಒಳ್ಳೆಯ ರಂಗತಂತ್ರವಾಗಬಲ್ಲ ತಂತ್ರಗಳನ್ನು ಕೊಟ್ಟಿದ್ದಾರೆ. ಆದರೆ ಈ ಪರಂಪರೆ ಜತೆ ಯಾವ ವಿಮರ್ಶಾತ್ಮಕ ಸಂಬಂಧಗಳನ್ನಿಟ್ಟು ಕೊಳ್ಳಬೇಕೋ ಅಷ್ಟೆ, ಜಾಗ್ರತೆಯಾಗಿ ಆತನ ತಂತ್ರಗಳ ಜತೆ ವಿಮರ್ಶಾತ್ಮಕ ಸಂಬಂಧಗಳನ್ನಿಟ್ಟುಕೊಳ್ಳಬೇಕು.

'ಮೆರವಣಿಗೆ' ಮತ್ತು ಇತರ ಸರ್ಕಾರ್ ನಾಟಕಗಳು

ವಸ್ತುವಿಗೆ ಸಂಬಂಧ ಪಟ್ಟ ಹಾಗೆ ಆತನ ನಾಟಕಗಳಲ್ಲಿ ಮೊದಲಿನಿಂದ ಕೊನೆಯವರೆಗೂ ಅರಾಜಕತೆ ತುಂಬಿ ತುಳುಕುತ್ತಿವೆ. ಸಿನಿಕತೆ ಅದರ ಅವಿಭಾಜ್ಯ ಅಂಗ . ಈ ರೀತಿ ತಮ್ಮನ್ನು ತಾವೇ ಕ್ರಾಂತಿಕಾರಿಗಳು ಎಂದು ಕರೆದು ಕೊಳ್ಳುವ ಬಹಳ ಜನ ನೋಡಿದ್ದೇನೆ. ಈ ಜನ ಸೂರಿನ ಮೇಲೆ ನಿಂತು ಒದರುತ್ತಾರೆ - ಎಲ್ಲರೂ ಬೋಳಿ ಮಕ್ಕಳು ಎಲ್ಲರೂ ಭ್ರಷ್ಟರೂ ಅಂತ . ಇದು ಬಹಳ ಸುಲಭ. ಯಾಕೆಂದರೆ ನೀವು ಯಾವುದಕ್ಕೂ ನಿಮ್ಮನ್ನು ಬದ್ಧರಾಗಿಸಿಕೊಳ್ಳುವ ಅಗತ್ಯ ಇಲ್ಲ.

'ಮೆರವಣಿಗೆ' ಆತನದೊಂದು ನಾಟಕ. ಇದು ದೇಶದ ತುಂಬೆಲ್ಲಾ ಅಲೆ ಅಲೆಯಾಗಿ ಹಬ್ಬಿತು. ಪಾಕಿಸ್ತಾನಕ್ಕೂ ಈ ನಾಟಕ ಹೋಗಿತ್ತು. ನಾನು ಇದನ್ನು ನೋಡಿದವರನ್ನು ಕೇಳಿದೆ. ಎಷ್ಟರ ಮಟ್ಟಿಗೆ ಇದು ನಿಮ್ಮ ಅನುಭವಕ್ಕೆ ಹತ್ತಿರವಾಗಿದೆ ಎಂತ. ಅವರ ಬಳಿ ಉತ್ತರವಿರಲಿಲ್ಲ. ಈ ನಾಟಕ ಸಿನಿಕತನದ ಪರಮಾವಧಿ. ಒಂದೇ ಉಸುರಿನಲ್ಲಿ ಆತ ಮಾರ್ಕ್ಸ್, ಎಂಗೆಲ್ಸ್,ಫ್ರಾಯ್ಡ್, ಲೆನಿನ್, ಹಿಟ್ಲರ್,ಬೋರಿಸ್ ಬೇಕರ್ ಎಲ್ಲರ ಬಳಿ ಹೋಗುತ್ತಾರೆ. ಎಲ್ಲವನ್ನೂ ಒಂದೇ ಎನ್ನುತ್ತಾರೆ ಯಾವಾಗಲೂ ಆತ ಈ ರೀತಿ ಮಾಡುತ್ತಾರೆ. ಆತನ ಯೋಚನೆಗಳಲ್ಲಿ ಅರಾಜಕತೆ ಇದೆ. ಇದು ಯೋಜಿತ ಅರಾಜಕತೆ ಎಂದೆನಿಸುತ್ತದೆ. ನನಗೆ ಆತನ ಶೈಲಿಯಲ್ಲೂ ಇದು ಕಾಣುತ್ತದೆ. ಅದು ಬಿಡಿಬಿಡಿಯಾಗಿದೆ. ಅದು ನಡೆಯುತ್ತಿರುವಾಗ ನಿಮಗೆ ಭಾರಿ ಚೈತನ್ಯದ ಅನುಭವವಾಗುತ್ತದೆ. ಅದು ಮುಗಿದಾಗ ನಿಮ್ಮನ್ನು ಗಲಿಬಿಲಿಯಲ್ಲಿ ಹಾಕುತ್ತದೆ.

ನಾಟಕ ಆಡುವ ಹಕ್ಕು ಕಸಿಯಲು ಬಿಡಬೇಡಿ

ಬೀದಿ ನಾಟಕ ಇತ್ತೀಚಿನ ವರ್ಷಗಳಲ್ಲಿ ಜನರ ಮೂಡ್ ಪ್ರತಿಬಿಂಬಿಸುವ ಜನಪ್ರಿಯ ಮಾಧ್ಯಮವಾಗಿ ಬೆಳೆಯುತ್ತಿದೆ. ಹಲವು ರಾಜ್ಯಗಳಲ್ಲಿ ಸಂಘಟಿತ ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ದನಿ ನೀಡುವ ಕಲಾರೂಪವಾಗಿ ಬೆಳೆಯುತ್ತಿದೆ. ಅದರ ಚಲನಶೀಲತೆ, ಪರಿಣಾಮಕಾರಿ, ಸತ್ವ ಶೋಷಿತ ಜನತೆಯ ಆಶೋತ್ತರಗಳಿಗೆ ಅದರ ಬದ್ಧತೆ - ಅದನ್ನು ವ್ಯವಸ್ಥೆ 'ಕಾನೂನು ಮತ್ತು ವ್ಯವಸ್ಥೆ'ಯ ಪಾಲಕರು ಸಂಶಯ ಮತ್ತು ಆಕ್ರಮಕ ದೃಷ್ಟಿಯಿಂದ ನೋಡುವಂತೆ ಮಾಡಿದೆ......

ಒಬ್ಬ ನಾಟಕ, ನಿರ್ದೇಶಕ, ನಾಟಕಕಾರ ಅಥವಾ ಗಾಯಕ ಬೀದಿ ನಾಟಕದಲ್ಲಿ ಭಾಗವಹಿಸುವುದು ಅದು ಅವನನ್ನು ಪ್ರೇಕ್ಷಕರ ಬಳಿ ಒಯ್ಯುತ್ತದೆ ಅಂತ. ಆತನ ಪ್ರಭಾವವನ್ನು ಇನ್ನೂ ಹೆಚ್ಚಿನ ಕ್ಷೇತ್ರಗಳಿಗೆ ವಿಸ್ತರಿಸುತ್ತದೆ ಅಂತ. ಆತ ಜನ ಕಲೆಯುವಲ್ಲಿ, ಸಾರ್ವಜನಿಕ ಸ್ಥಳಗಳಿಗೆ ತನ್ನ ಕಲೆ ಪ್ರದರ್ಶಿಸಲು ಹೋಗುತ್ತಾನೆ. ಪಾರ್ಕುಗಳು, ಮಾರ್ಕೆಟ್‌ಗಳು, ಬಸ್ ಸ್ಟಾಪ್‌ಗಳು, ಕಾಲೋನಿಗಳು, ಮತ್ತು ಕೈಗಾರಿಕಾ ಎಸ್ಟೇಟುಗಳು ಆತನ ರಂಗಮಂದಿರಗಳು. ಕಾನೂನು ಮತ್ತು ವ್ಯವಸ್ಥೆ ಕಾಪಾಡಲು ಪೋಲೀಸರು ಆತನನ್ನು 'ರಂಗಮಂದಿರಗಳಿಗೆ ಹೋಗದಂತೆ ತಡೆದರೆ ಆತ ಎಲ್ಲಿಗೆ ಹೋಗಬೇಕು? ಬೀದಿ ನಾಟಕ ತಂಡಗಳಿಗೆ ಪೋಲೀಸರ ಈ ವ್ಯವಹಾರ ಅಪಾಯದ ನೋಟಿಸ್. ಆತನ ಪ್ರೇಕ್ಷಕರನ್ನು ಹುಡುಕಿಕೊಳ್ಳುವ ಪಕ್ಕಿನ ಬರ್ಬರ ದಮನ.

ಪೋಲೀಸರು

- ನಕಲಿ ಔಷಧಿ ಮಾರುವ ನಕಲಿ ವೈದ್ಯರಿಗೆ ತೊಂದರೆ ಕೊಡುವುದಿಲ್ಲ

-ಕೋತಿಯಾಟ ಆಡುವವರನ್ನು ಆತನ ಚೇಷ್ಟೆ ಪ್ರದರ್ಶಿಸಲು ಬಿಡುತ್ತಾರೆ.

-ಹಾವಾಡಿಗನನ್ನಾಗಲಿ ದೊಂಬರಾಟದವನನ್ನಾಗಲಿ ತಡೆಯುವುದಿಲ್ಲ ಮಾತ್ರವಲ್ಲ ಅವರ ಅಲ್ಪ ಆದಾಯದ ಒಂದು ಭಾಗ ನುಂಗುತ್ತಾರೆ. ಪೋಲೀಸರು ಬೀದಿ ನಾಟಕಗಳ ಮೇಲೆ ಪ್ರತಿಬಂಧ ಹೇರುವುದು. ಅದು ಟ್ರಾಫಿಕ್‌ಗೆ ತೊಂದರೆ ಮಾಡುತ್ತದೆ ಅಂತ ಅಲ್ಲ. ಅದು ರಾಜಕೀಯ ಸ್ವರೂಪದ್ದು ಅಂತ. ಪೋಲೀಸರು ಬೀದಿ ನಾಟಕ ತಂಡಗಳನ್ನು ಪ್ರತಿಬಂಧಿಸುವುದು, ಆಕ್ರಮಣ ಮಾಡುವುದು - ಈ ನಾಟಕಗಳು ಪ್ರಚಲಿತ ಸಮಸ್ಯೆಗಳನ್ನು ತೆಗೆದುಕೊಂಡು, ಅದನ್ನು ಪ್ರೇಕ್ಷಕರಿಗಾಗಿ ವೈಜ್ಞಾನಿಕವಾಗಿ ವಿಶ್ಲೇಷಿಸುತ್ತದೆ ಎಂಬ ಕಾರಣಕ್ಕೆ. ಪೋಲೀಸರು ಅದನ್ನು ಪ್ರತಿಬಂಧಿಸುವ ಮೂಲಕ ಪ್ರಭುತ್ವದ ಒಂದು ಕೈ ಆಗಿ ಕೆಲಸ ಮಾಡುತ್ತಾರೆ. ಭಿನ್ನಮತ ಮತ್ತು ಪ್ರತಿಭಟನೆ ಬಗ್ಗೆ ಪ್ರಭುತ್ವದ ತಾಳ್ಮೆ ಕಡಿಮೆಯಾಗುತ್ತಿದೆ.

ಬೀದಿ ನಾಟಕವೆಂದರೇನು? ಎತ್ತಸಾಗಿದೆ?

★ ಮೂಲಭೂತವಾಗಿ ಸಮರಶೀಲ ರಾಜಕೀಯ ಪ್ರತಿಭಟನೆಯ ನಾಟಕ. ಅದರ ಕೆಲಸ ಜನತೆಯನ್ನು ಸಂಘಟಿಸುವುದು, ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು. ಅದರ ಸೈದ್ಧಾಂತಿಕ ಪರಂಪರೆ ಸುಮಾರು 150ವರ್ಷಗಳದ್ದಾದರೆ, ಈಗಿನ ರೂಪದಲ್ಲಿ ಪರಂಪರೆ 70ವರ್ಷಗಳದ್ದು - ರಷ್ಯನ್ ಕ್ರಾಂತಿಗಿಂತ ಈಚಿನದ್ದು.....

★ಭಾರತದಲ್ಲಿ ಬೀದಿ ನಾಟಕ ಜನತೆಯನ್ನು ವಸಾಹತುಶಾಹಿ -ವಿರೋಧಿ ಹೋರಾಟಕ್ಕೆ ಎಳೆಯುವ IPTAದ ಸಾಂಸ್ಕೃತಿಕ ಪ್ರಯತ್ನಗಳ ಭಾಗವಾಗಿ ಆರಂಭವಾಯಿತು. ಸ್ವಾತಂತ್ರ್ಯಾನಂತರ ಅದು ಜನತೆಯ ಸಾಮಾಜಿಕ ಮತ್ತು ಆರ್ಥಿಕ ದಮನದ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಂಡಿತು.....

★ ಬಯಲಿನಲ್ಲಿ ಆಡಿದ ನಾಟಕವೆಲ್ಲ ಬೀದಿ ನಾಟಕವೆಂದು ಕೆಲವರು ಕರೆಯಲಾರಂಭಿಸಿದ್ದಾರೆ. ಇದು ಯಾವುದೇ ನಾಟಕದಲ್ಲಿ ಹೀರೋ ಕೊನೆಯಲ್ಲಿ ಸತ್ತರೆ ಅದು ದುರಂತ ನಾಟಕವೆನ್ನುವಷ್ಟೇ ಹಾಸ್ಯಾಸ್ಪದ.

★ ಪ್ರಚಲಿತ ಭಾರತದ ಬೀದಿ ನಾಟಕ ನಮ್ಮ ಜಾನಪದ, ಪ್ರಾಚೀನ ಪಾಶ್ಚಿಮಾತ್ಯ - ಎಲ್ಲಾ ತರದ ನಾಟಕಗಳಿಂದ ಸಮಾನವಾಗಿ ಪ್ರಭಾವಿತವಾಗಿದೆ. ರಾಜಕೀಯ ಕರಪತ್ರ ಪೋಸ್ಟರ್, ಗೋಡೆ ಬರಹ, ಹೋರಾಟದ ಭಾಷಣ, ರಾಜಕೀಯ ಪ್ರದರ್ಶನ - ಇವೂ ಬೀದಿನಾಟಕದ ರೂಪವನ್ನು ರೂಪಿಸುವಲ್ಲಿ ಪಾತ್ರವಹಿಸಿವೆ.

★ ಬೀದಿ ನಾಟಕ 20ನೇ ಶತಮಾನದ್ದು. ಬಂಡವಾಳಶಾಹಿ ಮತ್ತು ಪಾಳೆಯಗಾರಿ ಶೋಷಣೆಯ ಅಡಿ ಬದುಕುವ ದುಡಿಯುವ ಜನರ ವಿಶಿಷ್ಟ ಅವಶ್ಯಕತೆಗಾಗಿ ಹುಟ್ಟಿದ್ದು ರೂಪ ಗೊಂಡದ್ದು.

★ ಈ ತಲೆಮಾರಿನ ಬೀದಿ ನಾಟಕ ಕಲಾವಿದರು 40ರ 50ರ ದಶಕದ ಈ ಕಲೆಯ ಪ್ರವರ್ತಕರಿಗಿಂತ, ಹೆಚ್ಚಾಗಿ ಈ ಕಲೆಯ

ಪುಟ 6 ನೋಡಿ.

'ಐಕ್ಯರಂಗ ದ ಪ್ರಸಾರವನ್ನು ಹೆಚ್ಚಿಸಿ

ಕಾಂ.ಪಿ. ರಾಮಚಂದ್ರನ್ ಕರೆ

ಕರ್ನಾಟಕದಲ್ಲಿ ಪಕ್ಷದ ವಾರಪತ್ರಿಕೆಯಾದ "ಐಕ್ಯರಂಗ" ದ ಪ್ರಸಾರವನ್ನು ಹೆಚ್ಚಿಸುವುದೇ ಮುಂದಿನ ಮೂರು ತಿಂಗಳುಗಳಲ್ಲಿ ಇಡೀ -ಪಕ್ಷದ ಮುಖಂಡರ, ರಾಜ್ಯಸಮಿತಿಯಿಂದ ಆರಂಭವಾಗಿ ಶಾಖೆಯವರೆಗೂ ವಿವಿಧ ಘಟಕಗಳ, ಕಾರ್ಯಕರ್ತರೆಲ್ಲರ ಅತ್ಯಂತ ಪ್ರಮುಖ ರಾಜಕೀಯ ಕೆಲಸವಾಗಬೇಕೆಂದು ಕೇಂದ್ರಸಮಿತಿಯ ಕಾರ್ಯದರ್ಶಿ ಮಂಡಲಿ ಸದಸ್ಯ ಕಾಂ.ಪಿ. ರಾಮಚಂದ್ರನ್ ಕರೆ ನೀಡಿದರು.

"ಐಕ್ಯರಂಗವನ್ನು ಪ್ರತಿವಾರನಿಯಮಿತವಾಗಿ ತರಬೇಕೆಂದು ಪಕ್ಷದ ರಾಜ್ಯಸಮಿತಿ ತೀರ್ಮಾನಿಸಿದೆ. ಆದರೆ ಇಂದು ಇರುವ ಪ್ರತಿಕೆಯ ಪ್ರಸಾರ, ಏಜೆನ್ಸಿಗಳ ಹಣ ಬಾಕಿ ಇತ್ಯಾದಿ ಸಮಸ್ಯೆಗಳಿಂದ ಪತ್ರಿಕೆ ಆರ್ಥಿಕವಾಗಿ ಸುಭದ್ರವಾಗುವುದು ಸಾಧ್ಯವಿಲ್ಲ ಹೀಗಾಗಿ ಹಲವೊಮ್ಮೆ ತಿಂಗಳಿಗೆ ಎರಡು ಮೂರು ಸಂಚಿಕೆಗಳು ಮಾತ್ರ ಬರುತ್ತಿವೆ. ಇಂತಹ ಪರಿಸ್ಥಿತಿಯನ್ನು ನಿವಾರಿಸುವುದು ಮಾತ್ರವಲ್ಲ ಪಕ್ಷ ರಾಜಕೀಯ ವಿಚಾರಗಳು ಜನರನ್ನು ತಲುಪಿ ಪಕ್ಷದ ಪ್ರಭಾವ ಹೆಚ್ಚಬೇಕೆಂದು ಅವರು ನುಡಿದರು. ಅವರು ಬೆಂಗಳೂರು, ತುಮಕೂರು, ಕೋಲಾರು, ಹಾಗೂ ಮೈಸೂರು ಜಿಲ್ಲೆಗಳ ಪಕ್ಷದ ಕಾರ್ಯಕರ್ತರ ಎರಡು ದಿನಗಳ ತರಬೇತಿ ಶಿಬಿರದಲ್ಲಿ ಮಾತನಾಡುತ್ತಿದ್ದರು. ಪಕ್ಷದ ಸಂಘಟನೆಯಲ್ಲಿ ಆದರ ತತ್ವ, ಸಿದ್ಧಾಂತಗಳ ಪ್ರಚಾರದ ಕೆಲಸದ ಮಹತ್ವ ಬಗ್ಗೆ ವಿವರಿಸುತ್ತಾ ಲೆನಿನ್ 'ಇಸ್ಕ್ರಾ' ಪತ್ರಿಕೆಯನ್ನು ಪಕ್ಷದ ವಿಚಾರಗಳನ್ನು ಪ್ರಚಾರ ಮಾಡಲು ಜತೆಗೆ ಪಕ್ಷವನ್ನು ಕಟ್ಟಲು ಬಳಸಿದರು ಎಂದು ಅವರು ಪಶ್ಚಿಮ ಬಂಗಾಳದಲ್ಲಿ 1977ರ ಮೊದಲು 10 ಸಾವಿರ ಪ್ರಸಾರವಿದ್ದ ಗಣಶಕ್ತಿ ದೈನಿಕದ ಪ್ರಸಾರ ಈಗ ಒಂದೂವರೆ ಲಕ್ಷಕ್ಕೇರಿದೆ, ಕೇರಳದ 'ದೇಶಾಭಿಮಾನಿ' ಪತ್ರಿಕೆ ಕೂಡಾ ಈಗ ನಾಲ್ಕು ಸ್ಥಳಗಳಿಂದ ಏಕಕಾಲಕ್ಕೆ ಪ್ರಸಾರವಾಗಿ 1.5 ಲಕ್ಷ ಮಾರಾಟವಾಗುತ್ತಿವೆ ಎಂದು ತಿಳಿಸಿ ಇದು ಆ ಎರಡು ರಾಜ್ಯಗಳಲ್ಲಿ ಕಮ್ಯುನಿಸ್ಟ್ ಆಂದೋಲನದ ರಾಜಕೀಯ ಅಗತ್ಯವಾಗಿತ್ತು ಎಂದರು. ನಮ್ಮ ಪ್ರಸಾರ ಬೂರ್ಜ್ವಾ ಪತ್ರಿಕೆಗಳ, ಇದರ ಮಾಧ್ಯಮಗಳ ವ್ಯಾಪ್ತಿಗೆ ಹೋಲಿಸಿದರೆ ಅಪಾರ ಸಾಗರದಲ್ಲಿ ತೊಟ್ಟು ಇಂಕುಹಾಕಿದಂತೆ ಆದುದರಿಂದ ಪಕ್ಷರಾಜಕೀಯ ನಿಲುಮೆಯ ಪ್ರಚಾರವಾಗಲು ಪತ್ರಿಕೆಗಳ ಪ್ರಸಾರ ಹೆಚ್ಚಿ ಕರ್ನಾಟಕದಲ್ಲೂ ಬೂರ್ಜ್ವಾ ಪತ್ರಿಕೆಗಳ ಪ್ರಚಾರಗಳನ್ನು ಎದುರಿಸಲು, ಪಕ್ಷದ ವಿಚಾರಗಳನ್ನು ಪಕ್ಷದ ಹಿಂತೈಷಿಗಳಿಗೆ ಬೆಂಬಲಿಗರಿಗಾದರೂ ತಿಳಿಸಲು 'ಐಕ್ಯರಂಗ' ಪತ್ರಿಕೆ ನಿಮಮಿತವಾಗಿ ಪ್ರಕಟವಾಗುವಂತೆ, ಆದರ ಪ್ರಚಾರ ಈ ರಾಜ್ಯಸಮಿತಿಯ ಇತ್ತೀಚಿನ ಸಭೆ ನಿರ್ಣಯಿಸಿದಂತೆ 5000 ಕ್ಕೆ ಹೆಚ್ಚುವಂತೆ ಮಾಡುವುದು ಅಗತ್ಯ. ಪ್ರತಿಯೊಬ್ಬ ಸದಸ್ಯರು ಒಂದು ಪ್ರತಿ ಮಾರಬೇಕೆಂದು, ಸರಿಯಾಗಿ ಚಂದಾ ಹಣ ಸಂಗ್ರಹವಾಗುವಂತೆ ಮಾಡಬೇಕು, ತಂಡ ತಂಡಗಳಾಗಿ ಪಕ್ಷದ ಕಾರ್ಯಕರ್ತರು ಕೆಲಸಮಾಡುತ್ತಿರುವ ಫ್ಯಾಕ್ಟರಿಗಳಲ್ಲಿ, ಇತರ ರಂಗಗಳಲ್ಲಿ ಪತ್ರಿಕೆ ಪ್ರಸಾರವಾಗಲು ಪ್ರಯತ್ನಿಸಬೇಕು ಎಂದು ಕಾ.ಪಿ. ರಾಮಚಂದ್ರನ್ ಕಳಕಳಿಯಿಂದ ಮನವಿ ಮಾಡಿಕೊಂಡರು. ತಾವು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಪಕ್ಷದ ಪತ್ರಿಕೆಗಳ ದೊಡ್ಡ ಕಂತೆಯನ್ನು ಬಗಲಲ್ಲಿ ಹಿಡಿದ ತೆಳ್ಳಗಿನ ದೇಹದ ಹುಡುಗನಾಗಿ ತಮ್ಮ ಕಾಲೇಜಿನಲ್ಲಿ 25-30 ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದುದನ್ನು, ಹಾಗೂ ಅಂದಿನ ದಿನಗಳಲ್ಲಿ ಪ್ರಮುಖ ನಾಯಕರೆಲ್ಲರೂ ಇದೇ ರೀತಿ ಪತ್ರಿಕೆಗಳ ಮಾರಾಟ ಮಾಡುತ್ತಿದ್ದುದನ್ನು ನೆನಪಿಸಿಕೊಂಡರು.

ಇದು ಅಂದಿನ ದಿನಗಳ ನೆನಪಾದರೆ, ಇತ್ತೀಚೆಗೆ ಮುಂದುವರಿದ ದೇಶವಾದ ಫ್ರಾನ್ಸ್‌ಗೆ ಭೇಟಿಯಿತ್ತಾಗ ಪತ್ರಿಕೆಯ ಚೀಲವನ್ನು ಬಗಲಿಗೆ ನೇತುಹಾಕಿಕೊಂಡು ತನಗೆ ನಿಯಮಿಸಿದ್ದ ಪ್ರದೇಶದಲ್ಲಿ ಪತ್ರಿಕೆಯನ್ನು ಮಾರಲು ಮಹಡಿಗಳನ್ನು ಹತ್ತಿ ಇಳಿದು ಶ್ರಮಿಸುತ್ತಿದ್ದ ಫ್ರೆಂಚ್ ಕಮ್ಯುನಿಸ್ಟ್ ಸಂಗಾತಿಯ ಪ್ರಯತ್ನವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು.

ಇತರ ಕೆಲಸಗಳಿಗೆ ಕುಂದಾದರೂ ಸರಿ ಮುಂದಿನ ಮೂರು ತಿಂಗಳುಗಳಲ್ಲಿ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವ ಕೆಲಸದಲ್ಲಿ ಧುಮುಕಬೇಕೆಂದು ಅವರು ಮತ್ತೆ ಮತ್ತೆ ಒತ್ತಿ ನುಡಿದರು.

ಪತ್ರಿಕೆಯ ಬೆಲೆ

ಅನೇಕ ಪತ್ರಿಕೆಗಳ ಬೆಲೆ 2-3 ಬಾರಿ ಹೆಚ್ಚಾದರೂ ಹೆಚ್ಚಿಸದಿದ್ದ 'ಐಕ್ಯರಂಗ' ದ ಬೆಲೆಯನ್ನು ಈಗ ರೂ 1.50 ಕ್ಕೆ ಏರಿಸಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. ಈ ಬೆಲೆ ಏರಿಕೆಯ ಸಂಪೂರ್ಣ ಮುದ್ರಣಾ ವೆಚ್ಚ, ಅಂಚೆ ವೆಚ್ಚ, ಮತ್ತು ಕಮೀಷನ್‌ಗಳ ಒಟ್ಟು ಸೇರಿದ ನಿರ್ವಹಣಾ ವೆಚ್ಚಕ್ಕೆ ಪ್ರತಿ ಪತ್ರಿಕೆಯ ಪ್ರತಿಗೂ 0.50 ರಷ್ಟು ಕಡಿಮೆಯಾಗುತ್ತದೆಂಬುದನ್ನು ಗಮನಿಸ ಬೇಕಾಗಿ ವಿನಂತಿಸುತ್ತೇವೆ.

ಆದ್ದರಿಂದ ದಯವಿಟ್ಟು, ಪತ್ರಿಕೆಯ ಬಿಲ್ ಬಾಕಿಯಿರಿಸದೆ ಹಣಸಂದಾಯ ಮಾಡಬೇಕೆಂದು ವಿನಂತಿಸುತ್ತೇವೆ.

ವ್ಯವಸ್ಥಾಪಕರು
ಐಕ್ಯರಂಗ

ರೈತರ ಸಾಲ ಹಾಗೂ ನೀರಿನ ಕರವಸೂಲಿ ಕೂಡಲೇ ನಿಲ್ಲಿಸಬೇಕು.

ಕೇಂದ್ರ ಸರ್ಕಾರ ಮುಂದಿನ ಬಜೆಟ್ ಅಧಿವೇಶನದಲ್ಲಿ ರೈತರ ಸಾಲ ಮನ್ನಾ ಮಾಡುವ ನೀತಿ ನಿಯಮ ಅಂತಿಮಗೊಳಿಸಿ 10 ಸಾವಿರ ರೂ ವರೆಗಿನ ಸಾಲಮನ್ನಾ ಮಾಡುವ ತನ್ನ ಕಾಲ ಮಿತಿ ಕಾರ್ಯಕ್ರಮದಲ್ಲಿ ಸೇರಿಸಿದೆ. ಈ ಕ್ರಮವನ್ನೇ ಅನುಸರಿಸದೆ ರಾಜ್ಯ ಸರ್ಕಾರ ತಾತ್ಕಾಲಿಕ ತಡೆಯಾಜ್ಞೆಯನ್ನು ವಾಪಸು ಪಡೆದು ಸಾಲ ವಸೂಲಿ ಮಾಡುತ್ತಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾಂ ಜಿಲ್ಲಾ ಸಮಿತಿ ತೀವ್ರವಾಗಿ ವಿರೋಧಿಸಿದೆ. ಸವದತ್ತಿಯಲ್ಲಿ ಸಭೆ ಸೇರಿದ್ದ ಸಭೆಯ ಮಲಪ್ರಭಾ ಅಚ್ಚು ಕಟ್ಟು ಪ್ರದೇಶದ ರೈತರಿಗೆ ನೀರು ನೀಡದೆಯೇ ಅವರಿಂದ ನೀರಿನ ಕರ ವಸೂಲಿ ಮಾಡುತ್ತಿರುವುದನ್ನು ಹಾಗೂ ದಂಡ ವಸೂಲಿ ಮಾಡುವುದನ್ನು ಖಂಡಿಸಿದೆ. ವಸೂಲಿಯನ್ನು ಕೂಡಲೇ ನಿಲ್ಲಿಸದಿದ್ದರೆ ರೈತಸಮುದಾಯ ಸಮಿತಿ ಹೋರಾಟಕ್ಕಿಳಿಯುವುದು ಅನಿವಾರ್ಯವೆಂದು ಎಚ್ಚರಿಸಿದೆ.

ರೈತರ ಸಾಲಃ ಹೊಣೆ ಜಾರಿಕೆ ಪ್ರಯತ್ನ.

ರಾಜ್ಯದ ಬಡ ರೈತರು ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ರಾಷ್ಟ್ರೀಯ ರಂಗ ಸರ್ಕಾರವು ಬಡ ರೈತರ ಸಾಲವನ್ನು ಮನ್ನಾ ಮಾಡುವ ನೀತಿ ನಿರೂಪಣೆಯನ್ನು ನಿರ್ಧರಿಸುವ ತನಕ ಕಾಯದೆ ವೀರೇಂದ್ರ ಪಾಟೀಲರ ಸರ್ಕಾರವು ಬಡ ರೈತರ ಸಾಲವನ್ನು ವಸೂಲಿ ಮಾಡಲು ಆತುರಪಡುತ್ತಿದೆ. ಇದರಿಂದ ಬಡ ಮತ್ತು ಮಧ್ಯಮ ರೈತರ ಅತೀವ ಸಂಕಷ್ಟವನ್ನು ಅನುಭವಿಸುವಂತಾಗಿದೆ.

ಹಿಂದಿನ ಜನತಾದಳ ಸರ್ಕಾರವು 1983ರ ಡಿಸೆಂಬರ್‌ರ ಒಳಗೆ (ಐ) ಸರ್ಕಾರವು ಕೊಡಲಿಲ್ಲ. ಇದರ ಪರಿಣಾಮವಾಗಿ 'ನಬಾರ್ಡ್' ಸಹ ಅಪೆಕ್ಸ್ ಬ್ಯಾಂಕುಗಳಿಗೆ ಹಣ ಕೊಡುವುದನ್ನು ನಿಲ್ಲಿಸಿದೆ. ಇದರಿಂದ ರೈತರಿಗೆ ಹೊಸ ಸಾಲ ಸಿಕ್ಕುತ್ತಿಲ್ಲ.

ಹತ್ತಿಯ ಮತ್ತು ತಂಬಾಕು ಬೆಲೆಗಳು ಕುಸಿದಿರುವಾಗ ಬೆಳಗಾರರನ್ನು ರಕ್ಷಿಸಲು ಕಾಂಗ್ರೆಸ್ (ಐ) ಸರ್ಕಾರ ರೈತರನ್ನು ಕೇಂದ್ರ ಸರ್ಕಾರದ ವಿರುದ್ಧ ಎತ್ತಿಕಟ್ಟುವ ತಂತ್ರಗಳನ್ನು ಅನುಸರಿಸುತ್ತದೆ.

ಇನ್ನು ಮುಂದೆ ಪ್ರತಿವಾರವೂ 'ಐಕ್ಯರಂಗ'

ಅಕಾಲಿಕ, ಅನಿಯಮಿತವಾಗಿ ಬರುತ್ತಿರುವ 'ಐಕ್ಯರಂಗ ' ಪತ್ರಿಕೆಯ ಮುದ್ರಣವನ್ನು ಕ್ರಮಬದ್ಧಗೊಳಿಸಲು ಪಕ್ಷದ ರಾಜ್ಯ ಸಮಿತಿ ತನ್ನ ಇತ್ತೀಚಿನ ಸಭೆಯಲ್ಲಿ ನಿರ್ಣಯಿಸಿದೆ. ಐಕ್ಯರಂಗದ ಪ್ರಸಾರ ಹೆಚ್ಚಳ, ಹಾಗೂ ಇನ್ನಿತರ ವಿಷಯಗಳ ಬಗ್ಗೆ ನಿರ್ಣಯ ಕೈಗೊಂಡ ರಾಜ್ಯಸಮಿತಿ 'ಐಕ್ಯರಂಗವನ್ನು ಕ್ರಮಬದ್ಧವಾಗಿ ತರುವುದರ ಆರ್ಥಿಕ ಹೊಣೆಯನ್ನು ಹೊರಲು ನಿರ್ಧರಿಸಿದೆ.

"ಐಕ್ಯರಂಗ" ದ ಕಷ್ಟದ ದಿನಗಳಲ್ಲಿ ಆದರೊಡನಿದ್ದ ಎಲ್ಲಾ ಓದುಗ ಸಂಗಾತಿಗಳಿಗೂ ಹಾಗೂ ಏಜೆನ್ಸಿದಾರರಿಗೆ "ಐಕ್ಯರಂಗ" ತನ್ನ ಅಭಿವಂದನೆಯನ್ನು ವ್ಯಕ್ತಪಡಿಸುತ್ತದೆ ಮುಂದಿನ ದಿನಗಳಲ್ಲಿ ಪತ್ರಿಕೆಯ ಪ್ರಸಾರದ ಹೆಚ್ಚಳ ಹಾಗೂ ಯಶಸ್ವಿಗಾಗಿ ಸಹಕರಿಸಬೇಕೆಂದು ವಿನಂತಿಸುತ್ತದೆ.

"ಐಕ್ಯರಂಗ"

ರಾಜಾ ಮಿಲ್ ಬೆಂಕಿ ಅನಾಹುತ

ಸುರಕ್ಷತಾ ಕ್ರಮಗಳ ಅಭಾವದ ಪರಿಣಾಮ

ಜನವರಿ 18 ರಂದು ಬೆಂಗಳೂರಿನಲ್ಲಿ, ಎನ್.ಟಿ.ಸಿ. ಒಡೆತನದ ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಮಿಲ್ಲಿನಲ್ಲಿ ಅನಾಹುತಕಾರಿ ಬೆಂಕಿ ಅಪಘಾತ ನಡೆದಿರುವ ಬಗ್ಗೆ ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ತೀವ್ರ ಆಘಾತ ವ್ಯಕ್ತಪಡಿಸಿದೆ. ಜನವರಿ 18,19 ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯಸಮಿತಿಯ ಸಭೆ ಈ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿದೆ.

ಎರಡನೇ, ಶಿಫ್ಟ್‌ನಲ್ಲಿ ಈ ಅನಾಹುತ ನಡೆದಿದ್ದರೂ ಯಾವ ಕಾರ್ಮಿಕರಿಗೂ ಅಥವಾ ಇತರ ವ್ಯಕ್ತಿಗಳಿಗೂ ಆಘಾತ ವಾಗಿಲ್ಲವೆಂಬುದು ರಾಜ್ಯ ಸಮಿತಿಗೆ ಉಂಟಾಗಿದ್ದ ಆತಂಕವನ್ನು ನಿವಾರಿಸಿದೆ. ಅನಾಹು ಸುಮಾರು 2000 ಕಾರ್ಮಿಕರಗಳಿಗೆ ಹಾಗೂ ಜೀವನಕ್ಕೆ ಧಕ್ಕೆ ತಂದಿದೆ.

ರಾಜ್ಯಸರ್ಕಾರ ಮತ್ತು ಮಿಲ್‌ನ ಆಡಳಿತ ವರ್ಗ ಆವಶ್ಯಕವಾದ ಸುರಕ್ಷಾ ಕಾಕ್ರಮಗಳನ್ನು ಯಾವುದೇ ಹೊಣೆಗಾರಿಕೆಯಿಲ್ಲದೆ ಉಲ್ಲಂಘಿಸಲಾಗಿದೆ. ಸರಿಯಾದ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬಂದಿದ್ದರೆ ಇಂತಹುದೇ ಅಪಘಾತ ಸಂಭವಿಸುವುದನ್ನು ತಡೆಗಟ್ಟಬಹುದಾಗಿತ್ತೆಂದು ಅಭಿಪ್ರಾಯಪಟ್ಟಿದೆ.

ಆದುದರಿಂದ ಈ ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಮಿಲ್ ಆಡಳಿತ ವರ್ಗ ಸಂಕಷ್ಟಕ್ಕೊಳಗಾದ ಕಾರ್ಮಿಕರಿಗೆ ಕೂಡಲೇ ಪರಿಹಾರ ನೀಡಬೇಕೆಂದು ಹಾಗೂ ಕೇಂದ್ರ ಸರ್ಕಾರ ಗಿರಣಿಗಳು ಆದಷ್ಟು ಶೀಘ್ರವಾಗಿ ಆರಂಭವಾಗಲು ನಿರ್ಮಾಣಕಾರ್ಯ ಆರಂಭಿಸಬೇಕೆಂದು, ಯಂತ್ರಗಳನ್ನು ಒತ್ತಾಯಪೂರ್ವಕವಾಗಿ ತರಿಸಿ ಸ್ಥಾಪಿಸಿ ಕಾರ್ಮಿಕರಿಗೆ ಕೆಲಸ ನೀಡಬೇಕೆಂದು ರಾಜ್ಯ ಸಮಿತಿ ಒತ್ತಾಯಿಸಿದೆ.

ಆಟೋ ರಿಕ್ಷಾ ನಿಲ್ದಾಣ, ಬೇಕೆಂದು ಚಾಲಕರ ಮನವಿ

ನಗರದಲ್ಲಿ ಸಾರ್ವಜನಿಕರ ಸೇವೆಯಲ್ಲಿರುವ ಆಟೋರಿಕ್ಷಾಗಳಿಗೆ ಈಗಿರುವ ನಿಲ್ದಾಣಗಳು ಸಾಲದೇ ಇರುವುದರಿಂದ ಕೆಲವು ಮುಖ್ಯ ಸ್ಥಳಗಳಲ್ಲಿ ಆಟೋ ನಿಲ್ದಾಣಗಳನ್ನು ಹಾಕಬೇಕೆಂದು ಆಟೋ ರಿಕ್ಷಾ ಡ್ರೈವರ್ಸ್ ಯುನಿಯನ್ ಒತ್ತಾಯಿಸಿದೆ. ಇಂತಹ ಸ್ಥಳಗಳನ್ನು ಗುರುತಿಸಿ ಪಟ್ಟಿ ಮಾಡಿ ಎ.ಆರ್.ಡಿ.ಯು.ನ ನಿಯೋಗವೊಂದು ಡಿ.ಸಿ.ಪಿ. ಯವರಿಗೆ ಈ ಬಗ್ಗೆ ಮನವಿ ಪತ್ರ ಸಲ್ಲಿಸಿದೆ. ಸಂಘದ ಉಪಾಧ್ಯಕ್ಷರಾದ ಕಾಂ.ಎ.ಕೆ. ಕುಪ್ಪಸ್ವಾಮಿಯವರ ನೇತೃತ್ವದಲ್ಲಿ ಜನ ಪದಾಧಿಕಾರಿಗಳ ನಿಯೋಗ ಜನವರಿ 6 ರಂದು ಡಿ.ಸಿ.ಪಿ.ಯವರನ್ನು ಭೇಟಿ ಮಾಡಿತು. ಡಿ.ಸಿ.ಪಿ. ಯವರು ಈ ಮನವಿಯನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ.

ಜನವರಿ 12 ರಂದು ಎ.ಆರ್.ಡಿ.ಯು ಆಶ್ರಯದಲ್ಲಿ ಬಹಿರಂಗ ಸಭೆಯೊಂದು ನಡೆದು ರೆಫ್ಯೂಸ್ ಕೇಸ್ ಮತ್ತು ಚಾಲಕ ಸಮಸ್ಯೆಗಳನ್ನು ಬಗ್ಗೆ ಚರ್ಚಿಸಲಾಯಿತು. ಸಂಘದ ಮುಖಂಡ ಕಾಂ. ಎಸ್.ಟಿ.ಅರಸು ಅವರ ಅಧ್ಯಕ್ಷತೆಯಲ್ಲಿ ಚಿಕ್ಕ ಲಾಲ್‌ಬಾಗಿನಲ್ಲಿ ನಡೆದ ಈ ಸಭೆಯಲ್ಲಿ ಸಂಘದ ಪದಾಧಿಕಾರಿಗಳು ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಖಿಲ ಭಾರತ ವಕೀಲರ ಸಂಘದ ಮುಖಂಡರಾದ ಎಸ್.ಶಂಕರಪ್ಪನವರು ಮಾತನಾಡುತ್ತಾ ರೆಫ್ಯೂಸಲ್ ಎಂದು ಪದವೇ ಕೇಂದ್ರದ ಮೋಟಾರು ವಾಹನ ಕಾಯಿದೆಯಲ್ಲಿ ಇಲ್ಲ ಎಂದು ಹೇಳಿ ಕೆಲವು ಕಾನೂನು ಸಲಹೆ ನೀಡಿದರು. ಬೇರೆ ಕಾರ್ಮಿಕರಿಗೆ ಇರುವ ಸವಲತ್ತುಗಳಲ್ಲಿ ಕೆಲವನ್ನಾದರೂ ಜಾರಿಗೊಳಿಸಿ ಆಟೋ ಚಾಲಕರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು. ಜಂಟಿ ಕಾರ್ಯದರ್ಶಿ ಕಾ॥ ಬಿ.ಎಸ್. ನಾರಾಯಣ ಮಾನೇ ಹಾಗೂ ಖಜಾಂಚಿ ಹೆಚ್.ಆರ್.ರವಿಯವರು ಸಭೆಯಲ್ಲಿ ಮಾತನಾಡಿದರು.

ಡಿಸೆಂಬರ್ 30 ರಿಂದ ಜನವರಿ 3 ರವರೆಗೂ ಆಟೋ ಚಾಲಕ ಮುತ್ತುರಾಜ ಎಂಬುವರನ್ನು ಅಕ್ರಮವಾಗಿ ಬಂಧಿಸಿ ಸೆಂಟ್ರಲ್ ಪೋಲೀಸ್ ಠಾಣೆಯಲ್ಲಿ ಹಿಂಸೆ ಮಾಡಿ ಸುಳ್ಳು ಮೊಕದ್ದಮೆ ದಾಖಲು ಮಾಡಿದ ಪ್ರಕರಣವನ್ನು ಸಂಘ ತೀವ್ರವಾಗಿ ಖಂಡಿಸಿದೆ.

ಎಡ ಪಕ್ಷಗಳಿಗೆ ಹೆಚ್ಚಿದ ಹೊಣೆಗಾರಿಕೆ

ಅಧಿಕಾರ ಕಳೆದು ಕೊಂಡ ಕಾಂಗ್ರೆ ಹಾಗೂ ಕೋಮುವಾದೀ ಶಕ್ತಿಗಳು ದೇಶಕ್ಕೆ ಅಪಾಯವನ್ನು ಗಂಡಾಂತರವನ್ನು ತರಲು ಪ್ರಯತ್ನಿಸುತ್ತಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಎಡಪಕ್ಷಗಳು ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದೆ ಪಕ್ಷವನ್ನು ವಿಶಾಲವಾಗಿ ಹಾಗೂ ಶಿಸ್ತುಬದ್ಧವಾಗಿ ಕಟ್ಟಬೇಕಾಗಿದೆ ಎಂದು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ॥ ಕೆ.ಆರ್. ಶ್ರೀಯಾನ್ ರವರು ಕರೆನೀಡಿದರು ಅವರು ಜನವರಿ 7 ರಂದು ಬಂಟ್ವಾಳ ತಾಲೋಕು ಪಕ್ಷದ ಸರ್ವ ಸದಸ್ಯರ ಹಾಗೂ ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತ

ಸಫ್ದರ್ ಹಾಶ್ಮಿ ಸ್ಮರಣಾರ್ಥ ಚಿತ್ರಕಲಾ ಜಾಥ

ಕುಂದಾಪುರ ಸಮುದಾಯ ಜನವರಿ 16 ರಿಂದ ರವರೆಗೆ ಪ್ರಸಿದ್ಧ ಕಲಾವಿದ ಸಫ್ದರ್ ಹಾಶ್ಮಿಯವರ ಸ್ಮರಣಾರ್ಥ ಉತ್ತರ ಕನ್ನಡ ಜಿಲ್ಲೆ ಕುಮಟಾದಿಂದ ಕುಂದಾಪುರದವರೆವಿಗೂ ಈ ಜಾಥ ಸಂಚರಿಸಲಿದೆ.

ಜಾಥಾದ ಉದ್ಘಾಟನೆ ದಾವಣಗೆರೆ ಚಿತ್ರಕಲಾ ವಿದ್ಯಾಲಯದ ಪ್ರಾಚಾರ್ಯ ಶ್ರೀ ಟಿ.ಬಿ. ಸೊಲಬಕ್ಕ ನವರು, ಬಿ.ಆರ್. ಕಟ್ಟಿ ಹಾಗೂ ರಾಜ್ಯದ ವಿವಿಧ ಕಲಾವಿದರ ಕೃತಿಗಳು ಪ್ರದರ್ಶನಗೊಳ್ಳುತ್ತಿವೆ.

ಪಕ್ಷ ವಿರೋಧಿ ಚಟುವಟಿಕೆ ಉಚ್ಛಾಟನೆ

ಪ್ರಜಾಸತ್ತಾತ್ಮಕ ವಿರೋಧಿ ಕಾರ್ಯಾಚರಣೆ, ಅಶಿಸ್ತು, ಗುಂಪುಗಾರಿಕೆ ಮುಂತಾದ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ ಬಸವರಾಜ ಮಾಲೀಪಾಟೀಲರವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಛಾಟಿಸಲಾಗಿದೆ ಎಂದು ಸಿ.ಪಿ.ಐ. (ಎಂ) ರಾಯಚೂರು ಜಿಲ್ಲಾ ಕಾರ್ಯದರ್ಶಿ ಕಾ॥ ಪುರುಷೋತ್ತಮಕೆ.ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಕ್ಷದ ಸದಸ್ಯರು, ಹಿತೈಷಿಗಳು ಈ ವ್ಯಕ್ತಿಯೊಂದಿಗೆ ಯಾವುದೇ ಸಂಬಂಧ ಸಂಪರ್ಕ ಇಡಬಾರದಾಗಿ ಅವರು ವಿನಂತಿಸಿದ್ದಾರೆ.

ತೀವ್ರತರ ಹಣಕಾಸಿನ ಭ್ರಷ್ಟಾಚಾರ, ಗುಂಪುಗಾರಿಕೆ, ಅಶಿಸ್ತು, ಸಂವಿಧಾನ ಬಾಹಿರ ಕಾರ್ಯಚಟುವಟಿಕೆ, ಪಕ್ಷದ ನಿಯಮಗಳ ಉಲ್ಲಂಘನೆ ಮಾಡಿದ ಸಿಂಧನೂರಿನ ಜನತಾ ಕಾಲೋನಿಯ ಬಾಕುಮಿಯಾರವರನ್ನು ಪಕ್ಷದ ಸದಸ್ಯತ್ವದಿಂದ ಉಚ್ಛಾಟಿಸಲಾಗಿದೆ ಎಂದು ಸಿಂಧನೂರು ತಾಲೂಕು ಪಕ್ಷದ ಕಾರ್ಯದರ್ಶಿ ಕಾ॥ ಟಿ. ಲಿಂಗಪ್ಪನವರು ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಡಿಸೆಂಬರ್ 7ರಂದು ಕ್ಯೂಬಾದ ಅತ್ಯುತ್ತಮ ಸೈನಿಕರಲ್ಲೊಬ್ಬರಾದ ಅಂತೋನಿಯೋ ಮಾಸಿಯೋ ಮತ್ತು ಆತನ ಸಂಗಡಿಗರು ದೂರದ ಆಫ್ರಿಕಾದಲ್ಲಿ ತಮ್ಮ ಅಂತರಾಷ್ಟ್ರೀಯ ಕರ್ತವ್ಯ ನಿರ್ವಹಿಸುತ್ತಾ ಬಲಿದಾನ ಗೈದರು ಈ ದಿನವನ್ನು ಕ್ಯೂಬಾದಲ್ಲಿ ಈಗ ವಿಶ್ವದ ವಿವಿಧ ಭಾಗಗಳಲ್ಲಿ ಕ್ಯೂಬಾದ ಅಂತರಾಷ್ಟ್ರೀಯರ ಅಂದರೆ ಅಂತರಾಷ್ಟ್ರೀಯ ಕರ್ತವ್ಯ ನೆರವೇರಿಸುತ್ತಾ ಹುತಾತ್ಮರಾದ ವೀರರ ಸ್ಮರಣೆಯ ದಿನವಾಗಿ ಆಚರಿಸಲಾಗುತ್ತಿದೆ. 1989ಡಿಸೆಂಬರ್ 7ರಂದು ಕಾಮ್ರೇಡ್ ಫಿಡೆಲ್ ಕಾಸ್ಟ್ರೋ ಈ ಸ್ಮರಣ ಸಮಾರಂಭದಲ್ಲಿ ಮಾಡಿದ ಭಾಷಣದ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.

"ಕಮ್ಯುನಿಸ್ಟರು, ಕ್ರಾಂತಿಕಾರಿಗಳು ಎಂದೂ ಶರಣಾಗುವುದಿಲ್ಲ"

-ಫಿಡೆಲ್ ಕಾಸ್ಟ್ರೋ

...ಸೈನಿಕ ಹಾಗೂ ನಾಗರಿಕ ಅಂತರ್ರಾಷ್ಟ್ರೀಯ ಮಿಶನ್‌ಗಳನ್ನು ಈಡೇರಿಸಿದ ಲಕ್ಷಾಂತರ ಕ್ಯೂಬನ್ನರು ಈಗಿನ ಮುಂದಿನ ಪೀಳಿಗೆಗಳ ಕೃತಜ್ಞತೆ ಸಂಪಾದಿಸಿದ್ದಾರೆ. ನಮ್ಮ ಜನತೆಯ ಮಹಾನ್ ಹೋರಾಟಶೀಲ ಹಾಗೂ ಅಂತರ್ರಾಷ್ಟ್ರೀಯ ಪರಂಪರೆ ಎತ್ತಿ ಹಿಡಿದಿದ್ದಾರೆ.

ಅವರು ಮರಳಿ ಬಂದಾಗ ತಮ್ಮ ದೇಶ ಸಾಮ್ರಾಜ್ಯಶಾಹಿಯ ಕ್ರಿಮಿನಲ್ ದಿಗ್ಬಂಧನಗಳನ್ನು ವಿಫಲಗೊಳಿಸಿ ಅಭಿವೃದ್ಧಿಗಾಗಿ ಭಾರೀ ಹೋರಾಟದಲ್ಲಿ ಅಸಾಮಾನ್ಯ ಘನತೆಯಿಂದ ತೊಡಗಿರುವುದನ್ನು ಕಾಣುತ್ತಿದ್ದಾರೆ. ಸಮಾಜವಾದೀ ಬಣದಲ್ಲಿನ ಸದ್ಯದ ಬಿಕ್ಕಟ್ಟಿನಿಂದ ನಮ್ಮ ದೇಶಕ್ಕಾಗಬಹುದಾದ ನಕಾರಾತ್ಮಕ ಆರ್ಥಿಕ ಪರಿಣಾಮವನ್ನೂ ಇದರ ಜತೆ ತಮ್ಮ ದೇಶ ಬಾಂಧವರು ಎದುರಿಸಬೇಕಾಗಬಹುದೆಂಬ ಸಂಗತಿಯನ್ನು ಅವರು ಕಾಣುತ್ತಿದ್ದಾರೆ.

ಸಮಾಜವಾದೀ ಬಣದ ಈ ಬಹುಪಾಲು ದೇಶಗಳ ಜನತೆ ಸಾಮ್ರಾಜ್ಯಶಾಹಿ - ವಿರೋಧಿ ಹೋರಾಟಗಳ ಬಗ್ಗೆ, ಅಂತರ್ರಾಷ್ಟ್ರೀಯತೆಯ ನೀತಿಗಳ ಬಗ್ಗೆ ಮಾತನಾಡುತ್ತಿಲ್ಲ. ಅವರ ಪತ್ರಿಕೆಗಳಲ್ಲಿ ಈ ಪದಗಳ ಪ್ರಸ್ತಾಪ ಕೂಡಾ ಕಾಣಬರುತ್ತಿಲ್ಲ. ಈ ಪರಿಕಲ್ಪನೆಗಳನ್ನು ಅವರು ತಮ್ಮ ರಾಜಕೀಯ ಶಬ್ದಕೋಶದಿಂದ ತೆಗೆದೇ ಹಾಕಿದ್ದಾರೆ. ಈ ನಡುವೆ ಬಂಡವಾಳಶಾಹಿ ಮೌಲ್ಯಗಳು ಈ ಸಮಾಜಗಳಲ್ಲಿ ಹಿಂದೆಂದೂ ಕೇಳಬಂದಿರದಷ್ಟು ಶಕ್ತಿ ಪಡೆಯುತ್ತಿವೆ.

ಬಂಡವಾಳಶಾಹಿಯೆಂದರೆ ತೃತೀಯ ಜಗತ್ತಿನ ಜನಗಳೊಂದಿಗೆ ಅಸಮಾನ ವ್ಯಾಪಾರ ಸಂಬಂಧ, ವೈಯಕ್ತಿಕ ಸ್ವಾರ್ಥಪರತೆಯ, ರಾಷ್ಟ್ರೀಯ ಸಂಕುಚಿತತೆಯ ಹೆಚ್ಚಳ, ಹಣವಿನಿಯೋಗ ಮತ್ತು ಉತ್ಪಾದನೆಯಲ್ಲಿ ತರ್ಕಹೀನತೆ ಹಾಗೂ, ಅರಾಜಕತೆಯ ರಾಜ್ಯಭಾರ, ಕುರುಡು ಆರ್ಥಿಕ ನಿಯಮಗಳಿಗಾಗಿ ಜನಗಳ ನಿರ್ದಯ ಬಲಿದಾನ, ಅತ್ಯಂತ ಬಲಶಾಲಿಯಾದವ ಮಾತ್ರ ಬದುಕಬಲ್ಲ, ಮನುಷ್ಯನಿಂದ ಮನುಷ್ಯನ ಶೋಷಣೆಯ ಸನ್ನಿವೇಶ, ಸಾಮಾಜಿಕ ವಲಯದಲ್ಲಿ ಪ್ರತಿಯೊಬ್ಬನೂ ಕೇವಲ ತನಗಾಗಿಯೆಂಬ

> ಹಿಂದೆ ಬಂಡವಾಳ ಶಾಹಿಯೆಂದರೆ ವಸಾಹತು ಶಾಹಿಯಾಗಿತ್ತು. ಈಗ ಅತ್ಯಂತ ಆಧುನಿಕ ಮತ್ತು ಅಗ್ಗದ ಅತ್ಯಂತ ಪರಿಣಾಮಕಾರಿ ಮತ್ತು ಅತ್ಯಂತ ನಿರ್ದಯ ಆರ್ಥಿಕ, ರಾಜಕೀಯ ವಿಧಾನಗಳನ್ನು ಬಳಸಿ ಶತಕೋಟಿಗಟ್ಟಲೆ ಮಾನವಜೀವಿಗಳ ನವ - ವಸಾಹತೀಕರಣ ಎಂದರ್ಥ.

ಸನ್ನಿವೇಶ. ಇಷ್ಟೇ ಅಲ್ಲ ಬಂಡವಾಳ ಶಾಹಿಯೆಂದರೆ ಇನ್ನೂ ಅನೇಕ ಸಂಗತಿಗಳನ್ನು ಸಂಕೇತಿಸುತ್ತದೆ- ಸೂಳೆಗಾರಿಕೆ ಮಾದಕ ದ್ರವ್ಯಗಳು, ಸಟ್ಟಾ, ಭಿಕ್ಷಾಟನೆ, ನಿರುದ್ಯೋಗ, ಅತ್ಯಂತ ಹೀನ ಅಸಮಾನತೆ, ನೈಸರ್ಗಿಕ ಸಂಪನ್ಮೂಲಗಳ ಲೂಟಿ, ವಾತಾವರಣ, ಸಾಗರ, ನದಿ, ಅರಣ್ಯಗಳಲ್ಲಿ ವಿಷ ಹರಡುವುದು. ವಿಶೇಷವಾಗಿ ಕೈಗಾರೀಕೃತ ಬಂಡವಾಳ ಶಾಹಿ ದೇಶಗಳಿಂದ ಅನಭಿವೃದ್ಧ ದೇಶಗಳ ಲೂಟಿ, ಹಿಂದೆ ಬಂಡವಾಳಶಾಹಿಯೆಂದರೆ ವಸಾಹತುಶಾಹಿಯಾಗಿತ್ತು; ಈಗ ಅತ್ಯಂತ ಆಧುನಿಕ ಹಾಗೂ ಅಗ್ಗದ, ಅತ್ಯಂತ ಪರಿಣಾಮಕಾರಿಯಾದ ಹಾಗೂ ಅತ್ಯಂತ ನಿರ್ದಯ ಆರ್ಥಿಕ ಮತ್ತು ರಾಜಕೀಯ ವಿಧಾನಗಳನ್ನು ಬಳಸಿ ಶತಕೋಟಿಗಟ್ಟಲೆ ಮಾನವಜೀವಿಗಳ ನವ- ವಸಾಹತೀಕರಣ ಎಂದು ಅದರರ್ಥ

ತಪ್ಪುಗಳಿಗೆ ಕಾರಣ

ಬಂಡವಾಳ ಶಾಹೀ. ಅದರ ಮಾರುಕಟ್ಟೆ ಆರ್ಥಿಕ, ಅದರ ಮೌಲ್ಯಗಳು ಅದರ ಕೋಟಿಗಳು, ಅದರ ವಿಧಾನಗಳು ಸಮಾಜವಾದವನ್ನು ಅದರ ಸದ್ಯದ ತೊಂದರೆಗಳಿಂದ ಎಂದೂ ಪಾರು ಮಾಡಲಾರವು. ಸಮಾಜವಾದ ಹಿಂದೆ ಮಾಡಿದ ಯಾವುದೇ ತಪ್ಪುಗಳನ್ನು ಅವು ಸರಿಪಡಿಸಲಾರವು.

ಇಂತಹ ಹೆಚ್ಚಿನ ತೊಂದರೆಗಳು ಕೇವಲ ತಪ್ಪುಗಳ ಫಲವಷ್ಟೇ ಅಲ್ಲ. ವಿಶ್ವದ ಸಂಪತ್ತಿನ ಗುತ್ತೇದಾರಿಕೆ ಹೊಂದಿದ್ದ ಪ್ರಮುಖ ಬಂಡವಾಳಶಾಹಿ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿಯು ಸಮಾಜವಾದಿ ದೇಶಗಳ ವಿರುದ್ಧ ಹೇರಿದ್ದ ಅಗಾಧ ದಿಗ್ಬಂಧನದ ಪರಿಣಾಮ ಕೂಡಾ. ತಮ್ಮ ವಸಾಹತುಗಳನ್ನು ಲೂಟಿ ಮಾಡಿ,ಕಾರ್ಮಿಕ ವರ್ಗವನ್ನು ಶೋಷಿಸಿ, ಸಾಕಷ್ಟು ಅಭಿವೃದ್ಧಿ ಹೊಂದಿರದ ದೇಶಗಳಿಂದ ವ್ಯಾಪಕ ಪ್ರಮಾಣದಲ್ಲಿ ಪ್ರತಿಭಾಪಲಾಯನಕ್ಕೆ ಉತ್ತೇಜನ ನೀಡಿ ಅತ್ಯಂತ ಮುಂದುವರಿದ ತಂತ್ರಜ್ಞಾನವನ್ನು ಈ ಪ್ರಮುಖ ಬಂಡವಾಳಶಾಹಿ ದೇಶಗಳು ಸಾಧಿಸಲು ಸಾಧ್ಯವಾದ್ದರಿಂದ.

ಮೊದಲ ಸಮಾಜವಾದಿ ಪ್ರಭುತ್ವದ ವಿರುದ್ಧ ವಿನಾಶಕಾರಿ ಯುದ್ಧ ಹರಿಯಬಿಡಲಾಯಿತು. ಮಿಲಿಯಾಂತರ ಜೀವಗಳ ಬಲಿ ತೆಗೆದುಕೊಳ್ಳಲಾಯಿತು. ಉತ್ಪಾದನಾ ಸಾಧನಗಳನ್ನು ಬಹುಪಾಲು ನಾಶಮಾಡಲಾಯಿತು. ಆದರೆ ಈ ಪ್ರಥಮ ಸಮಾಜವಾದಿ ಪ್ರಭುತ್ವ ದಂತಕಥೆಯ ಫೀನಿಕ್ಸ್ ಪಕ್ಷಿಯಂತೆ ತನ್ನದೇ ಬೂದಿಯಿಂದ ಮತ್ತೆ ಎದ್ದು ಬಂತು - ಒಂದಕ್ಕಿಂತ ಹೆಚ್ಚು ಬಾರಿ. ಫ್ಯಾಸಿಸಂನ್ನು ಸೋಲಿಸಿ ಇನ್ನೂ ವಸಾಹತು 'ಶಾಹಿ ಆಳ್ವಿಕೆಯಲ್ಲಿದ್ದ ದೇಶಗಳ ವಿಮೋಚನಾ ಹೋರಾಟಗಳಿಗೆ ನಿರ್ಣಾಯಕ ಬೆಂಬಲ ನೀಡಿ ಮಾನವಕುಲಕ್ಕೆ ಮಹಾನ್ ಸೇವೆ ಸಲ್ಲಿಸಿತು. ಈಗ ಇದನ್ನೆಲ್ಲಾ ಮರೆಯಲಾಗುತ್ತಿದೆ.

ಸೋವಿಯತ್ ಒಕ್ಕೂಟದಲ್ಲೇ ಎಷ್ಟೊಂದು ಮಂದಿ ಈ ಧೀರಜನಗಳ ಇತಿಹಾಸ ನಿರ್ಮಿಸಿದ ಸಾಧನೆಗಳನ್ನು ಅತ್ಯಪೂರ್ವ ಪ್ರತಿಭೆಗಳನ್ನು ನಿರಾಕರಿಸುವಲ್ಲಿ, ನಾಶಪಡಿಸುವಲ್ಲಿ ತೊಡಗಿರುವುದನ್ನು ನೋಡಲು ಅಸಹ್ಯವೆನಿಸುತ್ತದೆ. ಒಂದು ದೊಡ್ಡ ಗಾತ್ರದ, ಹಿಂದುಳಿದ ಬಡದೇಶದಲ್ಲಿ ಝಾರ್‌ವಾದಿ ಸರ್ವಾಧಿಕಾರದಿಂದ ಮೂಡಿಬಂದ ಕ್ರಾಂತಿಯೊಂದು ಖಂಡಿತಾವಾಗಿಯೂ ಮಾಡಿರುವ ತಪ್ಪುಗಳನ್ನು ಸರಿಪಡಿಸುವ ರೀತಿ ಇದಲ್ಲ. ನಾವೀಗ ಇತಿಹಾಸದ ಅತೀದೊಡ್ಡ ಕ್ರಾಂತಿ ನಡೆಸಲು ಝಾರ್‌ವಾದಿ ರಶ್ಯಾವನ್ನು ಆರಿಸಿಕೊಂಡಿದ್ದಕ್ಕೆ ಲೆನಿನ್‌ರನ್ನು ಆಪಾದಿಸಬಾರದು.

ಸೋವಿಯತ್ ಒಕ್ಕೂಟ ಮತ್ತು ಸಮಾಜವಾದದ ಬಗ್ಗೆ ವಿಷ ತುಂಬಿರುವ ಕೆಲವು ಸೋವಿಯತ್ ಪತ್ರಿಕೆಗಳ ಪ್ರಸಾರವನ್ನು ನಿಲ್ಲಿಸಲು ನಾವು ಹಿಂಜರಿಯಲಿಲ್ಲ. ಇವುಗಳಲ್ಲಿ ಕೆಲವು ಕ್ಯೂಬಾ ಕ್ರಾಂತಿಕಾರಿ ಪ್ರಕ್ರಿಯೆಲ್ಲಿ

> ಬುಡಮೇಲು ಮಾಡುವ, ಸಮಾಜವಾದಿ ಮೌಲ್ಯಗಳನ್ನು ವ್ಯವಸ್ಥಿತವಾಗಿ ನಾಶಮಾಡುವ ಸಾಮ್ರಾಜ್ಯಶಾಹಿಯ ಕಾರ್ಯಾಚರಣೆಗಳ ಜತೆಗೆ ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಮಾಡಿದ ತಪ್ಪುಗಳೂ ಸೇರಿಕೊಂಡು ಅಲ್ಲಿ ಅಸ್ಥಿರತೆಯ ಪ್ರಕ್ರಿಯೆ ತೀವ್ರಗೊಂಡಿದೆ.

ಸೋವಿಯತ್ ಒಕ್ಕೂಟ ಮತ್ತು ಕ್ಯೂಬಾದ ನಡುವೆ ಸ್ಥಾಪನೆಗೊಂಡ ನ್ಯಾಯಪೂರ್ಣ ಹಾಗೂ ಸಮಾನ ವ್ಯಾಪಾರ ಸಂಬಂಧಗಳನ್ನು ಅಂತ್ಯಗೊಳಿಸಿ ಅಮೇರಿಕಾ ತೃತೀಯ ಜಗತ್ತಿನೊಡನೆ ಮಾಡುವಂತೆ ಸೋವಿಯತ್ ಒಕ್ಕೂಟ ಕೂಡಾ ಕ್ಯೂಬಾದ ಕಚ್ಚಾ ಸಾಮಾಗ್ರಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಕಮ್ಮಿ ಬೆಲೆಗೆ ಕೊಂಡ ಕ್ಯೂಬಾಕೆ ಎಷ್ಟು ಹೆಚ್ಚು ಸಾಧ್ಯವೋ ಅಷ್ಟು ಹೆಚ್ಚು

> ಸಮಾಜವಾದವನ್ನು ಸುಧಾರಿಸಬೇಕು ಈ ನೀತಿಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಯಾಕೆಂದರೆ ಇದು ಪ್ರತಿಯೊಂದು ಮಾನವ ಪ್ರಯತ್ನಕ್ಕೆ ಸದಾ ಅನ್ವಯಿಸುವ. ಇಂತಹ ಪ್ರಯತ್ನದೊಳಗೇ ಅಡಕವಾಗಿರುವ ನೀತಿ. ಆದರೆ ಮಾರ್ಕ್ಸ್‌ವಾದ - ಲೆನಿನ್‌ವಾದದ ಅತ್ಯಂತ ಮೂಲಭೂತ ನೀತಿಗಳನ್ನು ಕೈಬಿಟ್ಟು ಸಮಾಜವಾದವನ್ನು ಸುಧಾರಿಸುವುದು ಸಾಧ್ಯವೇ?

ಬೆಲೆಗೆ ತನ್ನ ಉತ್ಪಾದನೆಗಳನ್ನು ಮಾರಬೇಕೆಂದು ಕರೆ ನೀಡುತ್ತಿವೆ. ಸಂಕ್ಷಿಪ್ತವಾಗಿ, ಸೋವಿಯತ್ ಒಕ್ಕೂಟ ಕೂಡಾ ಕ್ಯೂಬಾದ ವಿರುದ್ಧ ಅಮೆರಿಕಾ ಹಾಕಿರುವ ದಿಗ್ಬಂಧನದಲ್ಲಿ ಶಾಮೀಲಾಗಬೇಕೆಂಬುದು ಅವರ ಆಸೆ......

ಪೂರ್ವಯುರೋಪಿನಲ್ಲಿ

ಬುಡಮೇಲು ಮಾಡುವ, ಸಮಾಜವಾದೀ ಮೌಲ್ಯಗಳನ್ನು ವ್ಯವಸ್ಥಿತವಾಗಿ ನಾಶ ಮಾಡುವ ಸಾಮ್ರಾಜ್ಯಶಾಹಿಯ ಕಾರ್ಯಾಚರಣೆಗಳ ಜತೆಗೆ ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಮಾಡಿದ ತಪ್ಪುಗಳೂ ಸೇರಿಕೊಂಡು ಅಲ್ಲಿ ಅಸ್ಥಿರತೆಯ ಪ್ರಕ್ರಿಯೆ ತೀವ್ರಗೊಂಡಿದೆ. ಇದರಿಂದ ತಮಗಾದ ಆನಂದವನ್ನು ಮರೆಮಾಚಲು ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ದೇಶಗಳು ಆಗುತ್ತಿಲ್ಲ ಸದ್ಯದ ಘಟ್ಟದಲ್ಲಿ ಸಮಾಜವಾದಿ ಬಣವೆಂಬುದೇ ಇಲ್ಲ ಎಂಬುದು ಅವರಿಗೆ ಖಂಡಿತವಾಗಿದೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಅಮೆರಿಕನ್ ಅಧ್ಯಕ್ಷೀಯ ಸಲಹೆಗಾರರು ಈ ಕೆಲವು ಪೂರ್ವ ಯುರೋಪಿನ ದೇಶಗಳಿಗಾಗಿ ಬಂಡವಾಳ 'ಶಾಹಿ ಬೆಳವಣಿಗೆಯ ಕಾರ್ಯಕ್ರಮಗಳನ್ನು ಈಗಲೇ ತಯಾರಿಸುತ್ತಿದ್ದಾರೆ....

ಸಮಾಜವಾದವನ್ನು ಸುಧಾರಿಸಬೇಕು ಎನ್ನಲಾಗುತ್ತಿದೆ. ಈ ನೀತಿಯನ್ನು ಯಾರೂ ನಿರಾಕರಿಸುವುದು ಸಾಧ್ಯವಿಲ್ಲ. ಯಾಕೆಂದರೆ ಇದು ಪ್ರತಿಯೊಂದು ಮಾನವ ಪ್ರಯತ್ನ ಶಾಶ್ವತವಾಗಿ ಅನ್ವಯವಾಗುವ , ಆ ಪ್ರಯತ್ನದಲ್ಲೇ ಅಡಕವಾಗಿರುವ ನೀತಿ. ಆದರೆ ಮಾರ್ಕ್ಸ್‌ವಾದ - ಲೆನಿನ್‌ವಾದದ ಅತ್ಯಂತ ಮೂಲಭೂತ ನೀತಿಗಳನ್ನು ಕೈಬಿಟ್ಟು ಸಮಾಜವಾದವನ್ನು ಸುಧಾರಿಸುವುದು ಸಾಧ್ಯವೇ? ಈ ಸುಧಾರಣೆಯ ಹೆಸರಿನ ಕ್ರಮಗಳು ಬಂಡವಾಳಶಾಹಿ ಮಾರ್ಗದಲ್ಲಿ ಏಕಿರಬೇಕು? ಕೆಲವರು ಹೇಳಿಕೊಳ್ಳುವಂತೆ ಆ ವಿಚಾರಗಳು ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದರೆ ಸಾಮ್ರಾಜ್ಯಶಾಹಿಯನೇತಾರನ ಅವಿರೋಧ, ಉತ್ಸಾಹಪೂರ್ಣ ಬೆಂಬಲ ಅದಕ್ಕೆ ಸಿಗುತ್ತಿದೆಯೇಕೆ? ಇತಿಹಾಸದಲ್ಲಿ ಇಂತಹ ಒಂದು ಉದಾಹರಣೆ ಎಂದೂ ದಾಖಲಾಗಿಲ್ಲ.

ಕಾಮ್ರೇಡ್ ಗೋರ್ಬಚೆವ್ ಈ ವರ್ಷ ಕ್ಯೂಬಾಕ್ಕೆ ನೀಡಿದ ಭೇಟಿಯ ಸಮಯದಲ್ಲಿ, ನಾವು ಪರಸ್ಪರ ನೇರ, ಆಳವಾದ ಅಭಿಪ್ರಾಯ ವಿನಿಮಯ ಮಾಡಿಕೊಂಡ ಭೇಟಿಯ ಸಮಯದಲ್ಲಿ, ನಾನು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಸಾರ್ವಜನಿಕವಾಗಿ ನನ್ನ ಅಭಿಪ್ರಾಯ ವ್ಯಕ್ತಪಡಿಸಿದೆ - ಯಾವುದೇ ಸಮಾಜವಾದಿ ದೇಶ ಬಂಡವಾಳಶಾಹಿಯನ್ನು ಕಟ್ಟಬಯಸುವುದಾದರೆ ಹಾಗೆ ಮಾಡುವ ಅದರ ಹಕ್ಕನ್ನು ಗೌರವಿಸಬೇಕು. ಯಾವುದೇ ಬಂಡವಾಳಶಾಹಿ ದೇಶದ ಸಮಾಜವಾದವನ್ನು ಕಟ್ಟುವ ಹಕ್ಕನ್ನು ಸಂಪೂರ್ಣವಾಗಿ ಗೌರವಿಸಬೇಕೆಂದು ನಾವು ಒತ್ತಾಯಿಸುವಂತೆ.

ಕಮ್ಯುನಿಸ್ಟರು ಕರ್ತವ್ಯಬದ್ಧರು.

ಕ್ರಾಂತಿಯನ್ನು ಆಮದು ಮಾಡಲು ಸಾಧ್ಯವಿಲ್ಲ. ರಫ್ತು ಮಾಡಲು ಸಾಧ್ಯವಿಲ್ಲ ಎಂದು ನನ್ನನಂಬಿಕೆ. ಕೃತಕ ಗರ್ಭಧಾರಣೆ ಅಥವಾ ಭ್ರೂಣ ಕಸಿಯಿಂದ ಒಂದು ಸಮಾಜವಾದಿ ಪ್ರಭುತ್ವದ ಸ್ಥಾಪನೆ ಸಾಧ್ಯವಿಲ್ಲ. ಕ್ರಾಂತಿಗೆ ಸಮಾಜದೊಳಗೇ ಕೆಲವು ಸನ್ನಿವೇಶಗಳಿರಬೇಕಾಗುತ್ತದೆ. ಅದನ್ನು ಸೃಷ್ಟಿಸಬಲ್ಲವರು ಆಯಾಯ ದೇಶದ ಜನರು ಮಾತ್ರವೇ. ಆದರೆ ಈ ವಿಚಾರಗಳು ಕ್ರಾಂತಿಕಾರಿಗಳು ಪರಸ್ಪರ ತೋರಲು ಸಾಧ್ಯವಿರುವ ತೋರುವ ಸೌಹಾರ್ದಕ್ಕೆ ವಿರುದ್ಧವಾದುದೇನಲ್ಲ.

ಅಲ್ಲದೆ ಕ್ರಾಂತಿ ಒಂದು ಪ್ರಕ್ರಿಯೆ ಅದರಲ್ಲಿ ಮುನ್ನಡೆಯೂ ಸಾಧ್ಯ. ಹಿನ್ನಡೆಯೂ ಸಾಧ್ಯ. ನಿಷ್ಫಲಗೊಳಿಸಲೂ ಬಹುದಾದ ಪ್ರಕ್ರಿಯೆ. ಆದರೆ ಕಮ್ಯುನಿಷ್ಟರು ಎಲ್ಲಕ್ಕಿಂತ ಮಿಗಿಲಾಗಿ ಧೈರ್ಯವಂತರಾಗಿರಬೇಕು, ಕ್ರಾಂತಿಕಾರರಾಗಿರಬೇಕು. ಎಂತಹದೇ ವಿಷಮ ಸ್ಥಿತಿಯಲ್ಲೂ ಹೋರಾಟ ನಡೆಸಲು ಅವರು ಕರ್ತವ್ಯ ಬದ್ಧರು. ಪ್ಯಾರಿಸ್ ಕಮ್ಯೂನಾರ್ಡ್‌ಗಳು ತಮ್ಮ ವಿಚಾರಗಳ ರಕ್ಷಣೆಗೆ ಹೋರಾಡಿದರು, ಅದಕ್ಕಾಗಿ ಮಡಿದರು. ಕ್ರಾಂತಿ ಮತ್ತು ಸಮಾಜವಾದದ ಬಾವುಟಗಳನ್ನು ಹೋರಾಟ ನೀಡದೆ ತ್ಯಜಿಸುವುದಿಲ್ಲ. ಹೇಡಿಗಳು, ನೀತಿಭ್ರಷ್ಟರಷ್ಟೆ ಶರಣಾಗುತ್ತಾರೆ- ಕಮ್ಯುನಿಷ್ಟರು, ಇತರ ಕ್ರಾಂತಿಕಾರಿಗಳು

> ತೃತೀಯ ಜಗತ್ತಿನ ದೇಶಗಳೊಂದಿಗೆ ಅಸಮಾನ ವ್ಯಾಪಾರ ಸಂಬಂಧಗಳ ಮೂಲಕ ಸೂರೆಮಾಡಿದ ಕೊಳ್ಳೆಯ ಒಂದು ಪಾಲನ್ನು ನೀಡುವ ಭರವಸೆಯನ್ನು ಅಮೆರಿಕನ್ ಸಾಮ್ರಾಜ್ಯಶಾಹಿ ಯುರೋಪಿನ ಸಮಾಜವಾದಿ ದೇಶಗಳಿಗೆ ನೀಡುತ್ತಿದೆ. ಆ ದೇಶಗಳ ಬಂಡವಾಳ ಶಾಹೀ ಸುಧಾರಣೆಯ ಸಿದ್ಧಾಂತ ಕಾರರೂ ಇದರಿಂದ ಅಸಂತುಷ್ಟರಾದಂತಿಲ್ಲ.

ಎಂದೂ ಶರಣಾಗುವುದಿಲ್ಲ.

ಈಗ ಸಾಮ್ರಾಜ್ಯಶಾಹಿ ಬಹುಪಾ ತೃತೀಯ ಜಗತ್ತಿನ ದೇಶಗಳೊ ಅಸಮಾನ ವ್ಯಾಪಾರ ಸಂಬಂಧಗಳಿ ಗಳಿಸಿದ ತನ್ನ ಮಿಗುತೆ ಬಂಡವಾಳವ ಪಡೆಯಿರೆಂದು ಯುರೋಪಿಯ ಸಮಾಜವಾದಿ ದೇಶಗಳನ್ನು ಕರೆಯುತ್ತಿ ತೃತೀಯ ಜಗತ್ತನ್ನು ಕೊಳ್ಳೆ ಹೊಡೆಯ ವಲ್ಲಿ ಶಾಮಿಲಾಯಿಸಿ ಎನ್ನುತ್ತಿದೆ · ಆದೇ ಗಳಿಗೆ, ಆದೇಶಗಳ ಬಂಡವಾಳಶಾ ಸುಧಾರಣೆಯ ಸಿದ್ಧಾಂತಕಾರರು ಕೂಡ ಇದರಿಂದ ಅಸಂತುಷ್ಟರಾದಂತಿಲ ಅವರಲ್ಲಿ ಯಾರೂ ತೃತೀಯ ಜಗತ್ತಿ ದುರಂತದ ಬಗ್ಗೆ ಮಾತಾಡುತ್ತಿಲ್ಲ. ತವ ಅಸಂತೃಪ್ತ ಜನಸಮೂಹಗಳನ್ನು ಬಂಡವಾ ಶಾಹಿ ಮತ್ತು ಕಮ್ಯುನಿಸಂ ವಿರೋಧ ದ ಒಯ್ಯುತ್ತಿದ್ದಾರೆ. ನಮ್ಮ ಜನಗಳಿಂದ ಸೂ ಮಾಡಿದ ಕೊಳ್ಳೆಯಲ್ಲಿ ಒಂದುಪಾಲನ ಸಾಮ್ರಾಜ್ಯಶಾಹಿಗಳು ಅವರಿಗೆ ನೀಡು ಭರವಸೆ ನೀಡುತ್ತಿದ್ದಾರೆ. ಯಾಕೆಂದ ಬಂಡವಾಳಶಾಹಿ ಭೋಗವಾದಿ ಸಮಾ ಗಳನ್ನು ಕಟ್ಟಲು ಇರುವ ದಾ ಇದೊಂದೇ.

ಅವರು ನಮಗೆ ಶಾಂತಿಯ ಬ ಹೇಳುತ್ತಾರೆ. ಯಾವ ರೀತಿಯ ಶಾಂ ಪ್ರಮುಖ ಶಕ್ತಿಗಳ ನಡುವಿನ ಶಾಂತಿ ಜತೆಗೆ ತೃತೀಯ ಜಗತ್ತಿನಲ್ಲಿ ಮೂ ತೂರುವ ಆಕ್ರಮಣ ನಡೆಸುವ ತ ಹಕ್ಕನ್ನು ಸಾಮ್ರಾಜ್ಯಶಾಹಿ ಕಾದಿರಿ ಕೊಂಡಿದೆ. ಇದಕ್ಕೆ ನೀಡಬಹುದಾ ಉದಾಹರಣೆಗಳು ಹಲವು.......... ನಮ್ಮ ಧೀರ ಹೋರಾಟದಿಂದ ನಾವೇ ಗಳಿಸಿ ಶಾಂತಿ ಮತ್ತು ಭದ್ರತೆಯಲ್ಲದೆ ಬೇ ಯಾವ ರೀತಿಯ ಶಾಂತಿ, ಭದ್ರತೆ ನವ ಜನಗಳಿಗೆ ದೊರೆಯಬಲ್ಲದು?......

ಸಾಮ್ರಾಜ್ಯಶಾಹಿಗೆ ನಮ್ಮ ಜನಗ ಮೇಲೆ ಆಕ್ರಮಣ ನಡೆಸಲು ಪರಮಾಣ ಶಸ್ತ್ರಗಳು ಬೇಕಿಲ್ಲ. ವಿಶ್ವಾದ್ಯಂ ಹರಡಿರುವ ಅವರ ಮಿಲಿಟರಿ ನೆಲೆಗಳ ಶಕ್ತಿಶಾಲೀ ನಾವಿಕ ಪಡೆಗಳು, ಸದ ಆಧುನಿಕಗೊಳ್ಳುತ್ತಿರುವ ಪಾರಂಪರಿ ಶಸ್ತ್ರಾಸ್ತ್ರಗಳು ಸಾಕು.

> ಕ್ಯೂಬಾ [illegible] ಸೇನೆಯ ವಿಜಯ ಯಾತ್ರೆಯ ಹಿನ್ನೆ ಯಲ್ಲಿ ಸಮಾಜವಾದ ಪಡೆ ದೇಶವೇನಲ್ಲ. ಒಂದು ನ್ಯಾಯ ಯುತ ವೀರ ಹೋರಾಟದ ನಮ್ಮ ಜನ ನಮ್ಮ ಸಮಾಜವಾ ಸಮಾಜವನ್ನು ಕಟ್ಟಿದ್ದಾರೆ.

ಅಲ್ಲದೆ ಬದುಕುಳಿಯ ಬ ದಾಗಿದ್ದ 40 ಸಾವಿರ ಮಕ್ಕಳು ನವಿ ಜಗತ್ತಿನಲ್ಲಿ ಪ್ರತಿದಿನ ಸಾಯುತ್ತಿದ್ದಾ ನಾನು ಹಿಂದೆಯೂ ಈ ಬಗ್ಗೆ ಹೇಳಿ ಅದನ್ನು ಮತ್ತೆ ಹೇಳುತ್ತೇನೆ- ಇ ಹಿರೋಶಿಮಾ, ನಾಗಾಸಾಕಿಯ ಮೇ ಹಾಕಿದ ತರಹೆಯ ಬಾಂಬುಗಳನ್ನು ಪ ಮೂರು ದಿನಕೊಮ್ಮೆ ವಿಶ್ವದ ಬಡಮಕ್ಕ ಮೇಲೆ ಹಾಕಿದಂತೆ.

ಹೊಸ ಚಿಂತನೆಯೆಂದರೇನು?

ಇವೆಲ್ಲ ಇದೇ ರೀತಿಯಲ್ಲಿ ಸಾಗಿದ್ದ ಅಮೆರಿಕಾ ತನ್ನ ಈ ಎಲ್ಲ ಪರಿಕಲ್ಪ ಗಳನ್ನು ಬಿಡುವಂತೆ ಮಾಡದಿದ್ದರೆ ನಾ ಯಾವ ರೀತಿಯ ಹೊಸ ಚಿಂತನೆ ಬ ಮಾತನಾಡಲು ಸಾಧ್ಯ?....

ಕ್ಯೂಬಾದಲ್ಲಿ ನಾವೀಗ ಸರಿಪಡಿಸ ಪ್ರಕ್ರಿಯೆಯಲ್ಲಿ ತೊಡಗಿದ್ದೇವೆ. ಒಂ ಶಕ್ತಿಯುತ, ಶಿಸ್ತು ಬದ್ಧ, ಗೌರವಾ ಪಕ್ಷವಿಲ್ಲದೆ ಯಾವುದೇ ಕ್ರಾಂತಿ ಅಥ ನಿಜವಾದ ಸಮಾಜವಾದಿ ಸರಿಪ ಸಾಧ್ಯವಿಲ್ಲ. ಸಮಾಜವಾದವನ್ನು ದು ಸುತ್ತಾ. ಅದರ ಮೌಲ್ಯಗಳನ್ನು ನ ಮಾಡುತ್ತಾ, ಪಕ್ಷದ ಮೇಲೆ ಕೆಸರೆರಚು ಪಕ್ಷದ ಮಾರ್ಗದ ಪಾತ್ರವನ್ನು ತ್ಯ ಇಂತಹ ಪ್ರಕ್ರಿಯೆ ಮುನ್ನಡೆಯಲಾರ

1989ಮುಗಿದಿದೆ. ಇದರ ಜೊತೆಗೆ ಎಂಭತ್ತರ ದಶಕವೂ ಮುಗಿದಿದೆ. ಇದೊಂದು ಮಹತ್ವದ ಘಟನೆಗಳ ದಶಕ ಎನ್ನುವ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾಂ.ಎಂ. ಬಸವಪುನ್ನಯ್ಯನವರು ಈ ದಶಕದಲ್ಲಿ, ಕೊನೆಯ ದಶಕಕ್ಕೆ ಕಾಲಿಟ್ಟಿರುವ ಈ ಶತಮಾನದಲ್ಲಿ ಮಾನವಕುಲದ ಮುನ್ನಡೆಯತ್ತ ಸ್ಥೂಲ ನೋಟ ಹರಿಸುತ್ತಾ 1989ರ ಪ್ರಮುಖ ಘಟನೆಗಳ ಬಗ್ಗೆ, ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಬೆಳವಣಿಗೆಗಳ ಕುರಿತು ಇಲ್ಲಿ ಬರೆದಿದ್ದಾರೆ.



ಮಹತ್ವದ ಘಟನೆಗಳ ದಶಕ

ಎಂ. ಬಸವಪುನ್ನಯ್ಯ

ಮಾನವಕುಲ ಒಂದು ದಶಕವನ್ನು ಪ್ರವೇಶಿಸುತ್ತಿದೆ. ಇಪ್ಪತ್ತನೇ ಶತಮಾನದ ಕೊನೆಯ ದಶಕವಿದು. ಕಳೆದ ಈ ದಶಕದಲ್ಲಿ ಹಲವಾರು ದೊಡ್ಡ ಬೆಳವಣಿಗೆಗಳು ನಡೆದಿವೆ. ಈ ಪ್ರಕ್ರಿಯೆ ಮುಂದುವರಿಯುತ್ತಿದೆ. ಬೃಹತ್ ಬದಲಾವಣೆಗಳ ಈ ಪ್ರಕ್ರಿಯೆಯಲ್ಲಿ, ಘಟನೆಗಳ ಪೂರ್ಣ ಅರಿವು ಹೊಂದುವುದಿರಲಿ, ಅವುಗಳೊಡನೆ ಹೆಜ್ಜೆ ಹಾಕುವುದೂ ಕೂಡಾ ಹೆಚ್ಚೆಚ್ಚು ಕಷ್ಟವಾಗುತ್ತಿದೆ. ಆದರೂ ಈ ಬೆಳವಣಿಗೆಗಳು ಪ್ರಗತಿಪರವಾಗಿರಲಿ, ಪ್ರಗತಿ ವಿರೋಧಿಯಾಗಿರಲಿ, ನಮಗೆ ರುಚಿಸಲಿ, ರುಚಿಸದಿರಲಿ ಅವುಗಳನ್ನು ಅರಿಯುವುದು ಅತ್ಯಗತ್ಯ. ತ್ವರಿತ ಗತಿಯಿಂದ ಬೆಳೆಯುತ್ತಿರುವ ವಿಶ್ವಸನ್ನಿವೇಶ ಹಲವಾರು ರಾಜಕೀಯ, ಸೈದ್ಧಾಂತಿಕ ಪ್ರಶ್ನೆಗಳನ್ನು ಎತ್ತಿದೆ. ಇವನ್ನು ಪಾಲಿಟ್‌ಬ್ಯೂರೋ, ಕೇಂದ್ರಸಮಿತಿ ಚರ್ಚಿಸಲಿವೆ. ಈ ಸಂದರ್ಭದಲ್ಲಿ ಸದ್ಯದ ವಿಶ್ವಸನ್ನಿವೇಶ ನಿರ್ಮಾಣಗೊಳ್ಳಲು ಕಾರಣಗಳೇನಿರಬಹುದು ಎಂದು ಅರಿಯಲು ಇಲ್ಲಿ ಪ್ರಯತ್ನಿಸುತ್ತಿದ್ದೇನೆ. ಇವು ತಾತ್ಕಾಲಿಕ ವೀಕ್ಷಣೆಗಳಷ್ಟೆ. ಪಾಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿಯ ಸಾಮೂಹಿಕ ತೀರ್ಮಾನಕ್ಕೆ ಅಧೀನವಾದ ವೀಕ್ಷಣೆಗಳು.

20ನೇ ಶತಮಾನವಿಡೀ ಚಾರಿತ್ರಿಕವಾದ, ವಿಶ್ವವನ್ನೇ ನಡುಗಿಸಿದ ಮಾನವಕುಲದ ಮುನ್ನಡೆಯ ಅಧ್ಯಾಯಗಳಿಂದ ಕೂಡಿದೆ. ಫ್ಯಾಸಿಸ್ಟ್ ಶಕ್ತಿಗಳ ಮೇಲೆ ವಿಜಯದ ನಂತರ ಕಳೆದ 45 ವರ್ಷಗಳ ದಾಪುಗಾಲಿನ ಮುನ್ನಡೆ ವಿಶೇಷವಾಗಿ ಗಮನಾರ್ಹ.

ಸಮಾಜವಾದಿ ಸೋವಿಯತ್ ಒಕ್ಕೂಟ ಮತ್ತು ಮಹಾನ್ ಕೆಂಪು ಸೇನೆ ವಹಿಸಿದ ನಿರ್ಣಾಯಕ ಪಾತ್ರ ವರ್ಗ ಹಾಗೂ ರಾಜಕೀಯ ಶಕ್ತಿಗಳ ಬಲಾಬಲ ವನ್ನು ಶಾಂತಿ, ಪ್ರಜಾಪ್ರಭುತ್ವ, ರಾಷ್ಟ್ರೀಯ ಸ್ವಾತಂತ್ರ ಮತ್ತು ಸಮಾಜವಾದದ ಪರವಾಗಿ ಬದಲಿಸಿತು.

ಇವೆಲ್ಲ ಬಂಡವಾಳ ಶಾಹಿ ಪ್ರತಿಕ್ರಾಂತಿಯ ಪ್ರಯತ್ನಗಳು ಮಾತ್ರ ಎಂಬ ಸಂಪೂರ್ಣ ತಪ್ಪು ತೀರ್ಮಾನಕ್ಕೆ ಯಾವುದೇ ಮಾರ್ಕ್ಸ್‌ವಾದಿ ಚಿಂತಕ ಬಂದರೆ ಅದು ಅಕ್ಷಮ್ಯ.

ಫ್ಯಾಸಿಸ್ಟ್ - ವಿರೋಧಿ ಯುದ್ಧ ಮುಗಿದ ನಂತರದ 45 ವರ್ಷಗಳು ಮಾನವಕುಲವನ್ನು ಮೂರನೇ ಮಹಾಯುದ್ಧದಿಂದ ಉಳಿಸಿದ ವರ್ಷಗಳು. ಸೋವಿಯತ್ ಒಕ್ಕೂಟ ಶಕ್ತಿಶಾಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಹಾಗೂ ಅವರ ಪರಮಾಣು ಬ್ಲ್ಯಾಕ್‌ಮೇಲನ್ನು ತಡೆದು ನಿಲ್ಲಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಸಮಾಜವಾದಿ ಸೋವಿಯತ್‌ಒಕ್ಕೂಟ ಇನ್ನೊಂದು ದೊಡ್ಡ ಶಕ್ತಿಯಾದ ಸಾಮ್ರಾಜ್ಯಶಾಹಿ ಅಮೆರಿಕಾದೊಂದಿಗೆ ಸಮಾನ ರಾಜಕೀಯ ಮಿಲಿಟರಿ ಸ್ಥಾನಮಾನ ಪಡೆಯಿತು.

ಇದು ಸಾಧ್ಯವಾದದ್ದು ಸೋವಿಯತ್ ಜನತೆಯ ಸಾಮಾಜಿಕ ಆರ್ಥಿಕ, ರಾಜಕೀಯ ತ್ಯಾಗ-ಬಲಿದಾನಗಳಿಂದ. ಸೋವಿಯತ್ ದುಡಿಯುವ ಜನ ತಮ್ಮ ಹೊಟ್ಟೆ ಕಟ್ಟಿ ತಮ್ಮ ಸಮಾಜವಾದಿ ಸಾಧನೆಗಳನ್ನು ಕಾಪಾಡಿಕೊಂಡರು. ಫ್ಯಾಸಿಸ್ಟ್-ವಿರೋಧಿ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಆಳ್ವಿಕೆಗಳಿಗೆ ಹಾಗೂ ವಿಶ್ವದಾದ್ಯಂತ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ನೆರವು ನೀಡಿದರು. ಇದಕ್ಕೆ ಪ್ರತಿಯಾಗಿ ಈ ಶಕ್ತಿಗಳು ಸೋವಿಯತ್ ಪ್ರಭುತ್ವ ಮತ್ತು ಜನಸಮೂಹಗಳು ಹೊಸದಾಗಿ ಮೂಡಿಬರುತ್ತಿದ್ದ ವಿಶ್ವದ ನೇತಾರನಾಗುವಲ್ಲಿ ನೆರವಾದವು.

ಕಳೆದ 45 ವರ್ಷಗಳಲ್ಲಿ ಚಾರಿತ್ರಿಕವಾದ ಉಸಿರುಬಿಗಿಹಿಡಿದು ಇಟ್ಟ ದಾಪುಗಾಲಿನ ಮುನ್ನಡೆ ಮಾನವ ಇತಿಹಾಸದ ಪುಟಗಳಲ್ಲೇ ಅತ್ಯಂತ ದೊಡ್ಡ, ಭವ್ಯತಮ ಅಧ್ಯಾಯ.

1989ಕ್ಕೆ ವಿದಾಯ ಹೇಳಿ 1990 ನ್ನು ಪ್ರವೇಶಿಸುತ್ತಿರುವಾಗ ಈ ಸಂದರ್ಭಕ್ಕೆ ಪ್ರಸ್ತುತವಾದ ಕೆಲವು ವಿಷಯಗಳ ಬಗ್ಗೆ ಸ್ಥೂಲನೋಟವನ್ನಾದರೂ ಬೀರದಿರಲು ಸಾಧ್ಯವಿಲ್ಲ.

ಮೊದಲನೆಯದಾಗಿ ನ್ಯೂಕ್ಲಿಯರ್ ಮಹಾ ವಿನಾಶದ ಭಯ ಮಾಯವಾಗಿದೆಯೆಂದು ಭಾವಿಸುವಂತಿಲ್ಲ. ಈ ವಿಪತ್ತನ್ನು ಸದ್ಯಕ್ಕೆ ತಡೆಯಲಾಗಿದೆ. ಆದರೆ ಪೂರ್ಣವಾಗಿ ಕೊನೆಗೊಳಿಸಿಲ್ಲ.

ಎರಡನೆಯದಾಗಿ, ಶೀತಲಯುದ್ಧ ಎಂದು ಯಾವುದನ್ನು ಕರೆಯುತ್ತಾರೋ, ಅದಿನ್ನೂ ಮುಂದುವರೆಯುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅದನ್ನು ಮುಂದುವರಿಸುತ್ತಲೇ ಇದ್ದಾರೆ. ಎರಡು ದೊಡ್ಡ ಶಕ್ತಿಗಳ ನಡುವೆ ಸಮೀಪ ಮತ್ತು ಮಧ್ಯಮಾಂತರ ಪರಮಾಣು ಕ್ಷಿಪಣಿಗಳ ಬಗ್ಗೆ ನಡೆದ ಒಪ್ಪಂದ ಒಂದು ಮಹತ್ವದ ಹೆಜ್ಜೆಯಾದರೂ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಬಹಿರಂಗವಾಗಿ ನಾಚಿಕೆಯಿಲ್ಲದೆ ತಾರಾಯುದ್ಧ ಕಾರ್ಯಕ್ರಮವನ್ನು ತೀವ್ರಗೊಳಿಸುವುದಾಗಿ ಘೋಷಿಸಿರುವುದನ್ನು ನಿರ್ಲಕ್ಷಿಸುವಂತಿಲ್ಲ.

ಮೂರನೇಯದಾಗಿ, ವಿಶ್ವದ ಪ್ರಮುಖ ವೈರುಧ್ಯದ ನಿರೂಪಣೆ, ಅಂದರೆ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವಿನ ವೈರುಧ್ಯದ ನಿರೂಪಣೆ ಈಗಲೂ ಕೂಡಾ ಸಮಂಜಸ. ಈ ವೈರುಧ ತೀಕ್ಷ್ಣಗೊಳ್ಳುತ್ತಲೇ ಇದೆ.

ಈ ಬಗ್ಗೆ ನಾವು ಒತ್ತು ನೀಡುತ್ತೇವೆಂದರೆ ಈ ಮೂಲಭೂತ ಹಾಗೂ ಕೇಂದ್ರ ವೈರುಧ್ಯವನ್ನು ಪರಮಾಣು ವಿಶ್ವಯುದ್ಧದ ಹಣಾಹಣಿಯಿಂದಲ್ಲದೆ ಬೇರೆ ರೀತಿಯಲ್ಲಿ ಪರಿಹರಿಸಲು ಸಾಧ್ಯವಿಲ್ಲ ಎಂದೇನೂ ಅರ್ಥವಲ್ಲ. ಈ ಮೂಲಭೂತ ವೈರುಧ್ಯದ ಮಹತ್ವವನ್ನು ಯಾವ ಮಾರ್ಕ್ಸ್‌ವಾದಿಯೂ ಅಲ್ಲಗಳೆಯಲು ಸಾಧ್ಯವಿಲ್ಲವೆಂಬುದನ್ನು ನಾವು ಒತ್ತಿಹೇಳಬಯಸುತ್ತೇವಷ್ಟೆ. ಈ ವೈರುಧ್ಯವನ್ನು ಭಿನ್ನವಾದ, ನವನವೀನ ರೀತಿಯ ಹೋರಾಟಗಳಿಂದ ಪರಿಹರಿಸುವ ವಿಧಾನ ಕಂಡು ಕೊಳ್ಳುವ ಬಗ್ಗೆ ಖಂಡಿತಾ ಗಂಭೀರವಾಗಿ ನಾವು ಯೋಚಿಸುತ್ತಿದ್ದೇವೆ. ಈ ವಿಧಾನಗಳು ಹೇಗಿರಬಹುದು ಎಂದು ಈ ಹಂತದಲ್ಲಿ ಭವಿಷ್ಯನುಡಿಯುವುದು ಸುಲಭದ ಕೆಲಸವಲ್ಲ.

ಸಮಾಜವಾದಿ ದೇಶಗಳ ಅಲ್ಲೋಲ ಕಲ್ಲೋಲ

ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿ ಒಂದು ದೊಡ್ಡ ಅಲ್ಲೋಲ-ಕಲ್ಲೋಲ ನಡೆದಿದೆ ಸುಮಾರಾಗಿ ಎಲ್ಲಾ ಪೂರ್ವಯುರೋಪಿನ ಕಮ್ಯುನಿಸ್ಟ್ ನೇತೃತ್ವದ ಪ್ರಭುತ್ವಗಳು, ಸರಕಾರಗಳಿರುವ ದೇಶಗಳಲ್ಲಿ ಒಂದು ವ್ಯಾಪಕ ಸಾಮೂಹಿಕ ಅಸಂತೃಪ್ತಿ ಕಂಡು ಬಂದಿದೆ ಆಯಾಯ ದೇಶಗಳ ವಿಶಿಷ್ಟ ಸ್ವರೂಪಕ್ಕನುಗುಣವಾಗಿ ಇದರಲ್ಲಿ ಇಳಿತ-ಭರತಗಳಿವೆ.

ಈ ದೇಶಗಳಲ್ಲಿ ಸಮಾಜವಾದೀ ಪ್ರಜಾಪ್ರಭುತ್ವದ ವಿಕೃತಿಯಿಂದಾಗಿ ಸಾಕಷ್ಟು ದೀರ್ಘ ಅವಧಿಯವರೆಗೆ ನಾಗರೀಕ ಸ್ವಾತಂತ್ರಗಳನ್ನು, ಅಭಿವ್ಯಕ್ತಿ ಸ್ವಾತಂತ್ರವನ್ನು, ಪ್ರಜಾಪ್ರಭುತ್ವವನ್ನು ನಿರಾಕರಿಸಲಾಗಿತ್ತು. ಎಂಬುದು ಸ್ವಯಂವೇದ್ಯ, ಕಮ್ಯುನಿಸ್ಟ್ ಪಕ್ಷಗಳೊಳಗೆ ಆಂತರಿಕ ಪ್ರಜಾಪ್ರಭುತ್ವದ ಅಭಾವ, ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿ ನಿರಂಕುಶ ಕೇಂದ್ರವಾದದ ಮಟ್ಟಕ್ಕಿಳಿದದ್ದು, ಈ ವಿಷಯದಲ್ಲಿ ರಾಜಕೀಯ ಅಧಿಕಾರದ ಬಳಕೆ, ದುರ್ಬಳಕೆ ನಿಜಸಂಗತಿಗಳಾಗಿ ಕಾಣುತ್ತಿವೆ. ಜನಗಳಲ್ಲಿ ಹುದುಗಿದ್ದ ಅಸಂತೃಪ್ತಿಯೆಲ್ಲಾ ಈಗ ಭುಗಿಲೆನ್ನುತ್ತಿವೆ.

ಕಾರ್ಮಿಕ ವರ್ಗದ ಪ್ರಾಬಲ್ಯದ ಪರಿಕಲ್ಪನೆಯನ್ನು ದೀರ್ಘಕಾಲ ದುರುಪಯೋಗ ಪಡಿಸಿಕೊಂಡು ಒಂದು ರೀತಿಯ ಕೆಲವೇ ವ್ಯಕ್ತಿಗಳ ರಾಜಕೀಯ ಸರ್ವಾಧಿಕಾರಿ ಅಧಿಪತ್ಯವನ್ನು ಶಾಶ್ವತಗೊಳಿಸುವ ಒಂದು ಕೆಲಸದ ಮಟ್ಟಕ್ಕಿಳಿಸಲಾಗಿದೆ. ಇದು ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ ಮಾರ್ಕ್ಸ್‌ವಾದ ಲೆನಿನ್‌ವಾದದ ಸಿದ್ಧಾಂತದಲ್ಲಿ ಶಿಕ್ಷಣ ನೀಡದಿರುವ ಗಂಭೀರ ಪ್ರಮಾದವಷ್ಟೇ ಅಲ್ಲ, ನಿಜವಾಗಿ ನಡೆದದ್ದು ಮಾರ್ಕ್ಸ್‌ವಾದ-ಲೆನಿನ್‌ವಾದದ ಒಂದು ವಿಕೃತಿ.

ಇದರಿಂದ ಎದ್ದ ವ್ಯಾಪಕ ಅಸಂತೃಪ್ತಿಯೇ ಸಮಾಜವಾದಿ ದೇಶಗಳಲ್ಲಿನ "ಉತ್ಕ್ರಾಂತಿ"ಯ ಮೂಲ.

ಈ ಎಲ್ಲಾ ಅಲ್ಲೋಲ-ಕಲ್ಲೋಲವನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕು. ಸರಿಯಾದ ಪಾಠ ಕಲಿತು ಅವನ್ನು ಶ್ರದ್ಧೆಯಿಂದ ಜಾರಿಗೊಳಿಸಬೇಕು. ಇವನ್ನು ಮಾರ್ಕ್ಸ್‌ವಾದ-ಲೆನಿನ್‌ವಾದ, ಕಮ್ಯುನಿಸ್ಟ್ ಪಕ್ಷದ ಚಾರಿತ್ರಿಕ ಪಾತ್ರ, ಸಮಾಜವಾದಕ್ಕೆ ದೃಢ ಬದ್ಧತೆ ಮತ್ತು ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ನಡೆಸಬೇಕು. ಇವೆಲ್ಲಾ ಬಂಡವಾಳಶಾಹಿ ಪ್ರತಿಕ್ರಾಂತಿಯ ಪ್ರಯತ್ನಗಳು ಮಾತ್ರ ಎಂಬ ಸಂಪೂರ್ಣ ತಪ್ಪು ತೀರ್ಮಾನಕ್ಕೆ ಯಾವುದೇ ಮಾರ್ಕ್ಸ್‌ವಾದಿ ಚಿಂತಕ ಬಂದರೆ ಅದು ಅಕ್ಷಮ್ಯ. ಸಮಾಜವಾದಿ ಪದ್ಧತಿಯಲ್ಲಿ ಬಂಡವಾಳಶಾಹಿ ಪ್ರತಿ-ಕ್ರಾಂತಿ ಶಕ್ತಿಗಳ, ಅವರ ಸೈದ್ಧಾಂತಿಕ ಉಳಿಕೆಯ ನೆರಳು ಬಹುಕಾಲ ಮುಂದುವರಿದಿದೆ ಎಂಬುದೇನೋ ನಿಜವೇ. ಈ ಶಕ್ತಿಗಳು ಪ್ರಾಮಾಣಿಕ ಅಸಂತೃಪ್ತಿಯ ದುರ್ಲಾಭ ಪಡೆಯಲು ಕೂಡಾ ಪ್ರಯತ್ನಿಸುತ್ತಾರೆ. ಆದರೆ ಈ ಸಂಗತಿ ಜನಗಳ ಅಸಂತೃಪ್ತಿ ಪ್ರಾಮಾಣಿಕವಾದದ್ದು ಎಂಬುದರತ್ತ ನಮ್ಮನ್ನು ಕುರುಡಾಗಿಸಬಾರದು.

ಬೂರ್ಜ್ವಾ ಪ್ರಜಾಪ್ರಭುತ್ವದ ಪ್ರಗತಿಪರ ಆಯಾಮವನ್ನು ತ್ಯಜಿಸಬಾರದು. ಬದಲಿಗೆ ಅದನ್ನು ಸಾಚಾ ಕಾರ್ಮಿಕ ವರ್ಗದ ಹೂರಣದಿಂದ ಶ್ರೀಮಂತಗೊಳಿಸಬೇಕು.

ಒಂದು ಎಚ್ಚರಿಕೆಯ ಮಾತು.

ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತ ಹಾಗೂ ಅದು ವಿಶ್ವಮಟ್ಟದಲ್ಲಿ ಪ್ರತಿಪಾದಿಸುವ ಸಮಾಜವಾದ ಮತ್ತು ಕಮ್ಯುನಿಸಂನ ಉದಾತ್ತ ಪರಿಕಲ್ಪನೆಯ ಕಥೆ ಮುಗಿದಂತೆಯೇ ಎಂದು ಭವಿಷ್ಯ ನುಡಿಯುತ್ತಿರುವವರಿಗೆಲ್ಲಾ ಎಚ್ಚರಿಕೆಯ ಮಾತು ಹೇಳಬೇಕಾಗಿದೆ. ಒಂದು ನಿರ್ದಿಷ್ಟ ಐತಿಹಾಸಿಕ ಘಟ್ಟದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದ ಅತ್ಯಂತ ಮುಂದುವರಿದ ಯೋಚನಾ ಪದ್ಧತಿಯಾಗಿ ಮೂಡಿಬಂತು ಎಂಬುದನ್ನು ಯಾರೂ ಅಲ್ಲಗಳೆಯುವುದು, ಸಾಧ್ಯವಿಲ್ಲ. ಅದು ಈಗಲೂ ಪ್ರಸ್ತುತವಾಗಿರುವುದು, ಸಮಂಜಸವಾಗಿರುವುದು ಅದರ ವೈಜ್ಞಾನಿಕ ಪ್ರಕೃತಿಯಿಂದಾಗಿ. ಆದ್ದರಿಂದ ಮಾರ್ಕ್ಸ್‌ವಾದ - ಲೆನಿನ್‌ವಾದದ ಮನ್ನುಡಿಯನ್ನು ನಿಲ್ಲಿಸಲು ಸಾಧ್ಯವಿಲ್ಲ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಜನ್ಮನೀಡಿದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು ಈಗಲೂ ಇವೆ ಎಂಬುದನ್ನು ನೆನಪಿಟ್ಟುಕೊಳ್ಳಿ. ಈ ವೈಚಾರಿಕ ಪ್ರಕ್ರಿಯೆಯನ್ನೂ ಬದಲಿಸಲು ಸಾಧ್ಯವಿಲ್ಲ.

20ನೇ ಶತಮಾನದಲ್ಲಿ ಮಾನವಕುಲ ಸಾಧಿಸಿದ ಸಾಮಾಜಿಕ ಮುನ್ನಡೆಯನ್ನು ಹಿಂದೆ ತಳ್ಳಲು, ಅದನ್ನು ಇಲ್ಲವಾಗಿಸಲು ಸಾಧ್ಯವಿಲ್ಲ. ವಿಶ್ವ ಸಮಾಜ 18ನೇ, 19ನೇ ಶತಮಾನಗಳಲ್ಲಿದ್ದ ಜೀವನ ಪದ್ಧತಿಯನ್ನು ಅನುಸರಿಸಬೇಕೆಂದು ಮನಬಂದಂತೆ ಆದೇಶ ನೀಡಲು ಆಗುವುದಿಲ್ಲ.

ಮಾರ್ಕ್ಸ್‌ವಾದ, ಸಮಾಜವಾದಕ್ಕಾಗಿ ವಿಶ್ವಾದ್ಯಾಂತ ಕಮ್ಯೂನಿಸ್ಟರು ಅಪಾರ ಬಲಿದಾನ ನೀಡಿದ್ದಾರೆಂಬುದನ್ನು ಯಾರೂ ಅಲ್ಲಗಳೆಯಲಾರರು. ಫ್ಯಾಸಿಸಂ-ವಿರೋಧಿ ಹೋರಾಟವೊಂದರಲ್ಲೇ ಮಿಲಿಯಾಂತರ ಕಮ್ಯೂನಿಸ್ಟರು ಪ್ರಾಣಾರ್ಪಣೆ ಮಾಡಿದರು. ಕಳೆದ ಎಪ್ಪತ್ತು ವರ್ಷಗಳಿಗೆ ಮೀರಿದ ಅವಧಿಯಲ್ಲಿ ಸಮಾಜವಾದಕ್ಕಾಗಿ ಹೋರಾಟದ ಈ ಭವ್ಯ ಅಧ್ಯಾಯ ಈ ಧ್ಯೇಯಸಾಧನೆಯಲ್ಲಿ ಸಾವನ್ನಪ್ಪಿದ ಮಹಿಳೆಯರ, ಪುರುಷರ ನೆತ್ತರಿನಿಂದ ಬರೆದ ಅಧ್ಯಾಯ. ಈ ಸತ್ಯವನ್ನು ನಿರಾಕರಿಸುವ ಪುಂಬತನ ತೋರಿ ಯಾರೂ ಮುಂದಿನ ಪೀಳಿಗೆಗಳ ಗೇಲಿಗೆ ಒಳಗಾಗದಿರಲಿ.

ಅದೇ ವೇಳೆಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಶ್ವವ್ಯಾಪೀ ವಿಜಯಗಳ ಬಗ್ಗೆ ನ್ಯಾಯವಾಗಿಯೇ ಹೆಮ್ಮೆಯಲ್ಲಿ ಭಾಗಿಯಾಗುವ ವಿಶ್ವದ ಕಮ್ಯುನಿಸ್ಟರಿಗೆ ಸೋಲುಗಳ, ತಪ್ಪುಗಳ, ಗಂಭೀರ ಪ್ರಮಾದಗಳ ಅರಿವು ಕೂಡಾ ಇದೆ.

ಲೆನಿನ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಬಗ್ಗೆ ಬರೆದ ಈ ಕೆಳಗಿನ ಪರಿಚ್ಛೇದದಿಂದ ಈ ಸ್ವಲ್ಪ ಲೇಖನ ಮುಗಿಸೋಣ. " – ಆದರೆ ಕ್ರಾಂತಿಕಾರಿ ವಿಚಾರಗಳ ಈ ದೈತ್ಯರ, ಇಡೀ ಜಗತ್ತಿನ ಕಾರ್ಮಿಕ ವರ್ಗವನ್ನು ಅಲ್ಪಸಾಮಾನ್ಯ ಮತ್ತು ನಿರರ್ಥಕ ಕೆಲಸಗಳಿಂದ ಮೇಲೆತ್ತಲು ಪ್ರಯತ್ನಿಸಿದ, ನಿಜವಾಗಿಯೂ ಮೇಲೆತ್ತಿದ ಈ ದೈತ್ಯರ ಇಂತಹ ತಪ್ಪುಗಳು ಕ್ರಾಂತಿ ಕಾರಿ ಬಡಾಯಿಗಳ ನಿರರ್ಥಕತೆಯ ಬಗ್ಗೆ, ಕ್ರಾಂತಿ ಕಾರಿ ಹೋರಾಟಗಳ ನಿಷ್ಫಲತೆಯ ಬಗ್ಗೆ, ಕ್ರಾಂತಿ-ವಿರೋಧಿ "ಸಂವೈಧಾನಿಕ" ಕೊಳಗಿನ ಬಗ್ಗೆ ಹಾಡುವ, ಬೊಬ್ಬಿಡುವ, ಆರಿಕೆ ಮಾಡಿಕೊಳ್ಳುವ, ಲೊಟಗುಟ್ಟುವ ಅಧಿಕೃತ ಉದಾರವಾದಿಗಳ ಕ್ಷುದ್ರ ಜಾಣತನಕ್ಕಿಂತ ಸಾವಿರ ಪಾಲು ಹೆಚ್ಚು ಉದಾತ್ತವಾದದ್ದು ಉನ್ನತವಾದದ್ದು, ಚಾರಿತ್ರಿಕವಾಗಿ ಹೆಚ್ಚು ಸತ್ಯವಾದದ್ದು, ಹೆಚ್ಚು ಬೆಲೆಯುಳ್ಳದ್ದು....."

ವಿಶ್ವದ ಕಮ್ಯೂನಿಸ್ಟೇತರ ಮತ್ತು ಕಮ್ಯುನಿಸ್ಟ್-

ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಶ್ವವ್ಯಾಪಿ ವಿಜಯಗಳ ಬಗ್ಗೆ ನ್ಯಾಯವಾಗಿಯೇ ಹೆಮ್ಮೆಪಡುವ ವಿಶ್ವದ ಕಮ್ಯುನಿಸ್ಟರಿಗೆ ಸೋಲುಗಳ, ತಪ್ಪುಗಳ, ಗಂಭೀರ ಪ್ರಮಾದಗಳ ಅರಿವು ಕೂಡಾ ಇದೆ.

ವಿರೋಧಿ ಲೇಖಕರಲ್ಲಿ ಅತ್ಯುನ್ನತರಾದವರು ಕೂಡಾ ಸ್ವಲ್ಪ ಕಲಿಯುತ್ತಾರೆ, ಮಾರ್ಕ್ಸ್‌ವಾದ ಸತ್ತಿದೆ, ಕಮ್ಯೂನಿಸಂನ ಧ್ಯೇಯ ಮಿಥ್ಯೆಯೆಂದು ಸ್ಫೋಟಗೊಂಡಿದೆ ಎಂಬ ಘೋಷಣೆಗಳನ್ನು ಮೆಲುಕುವುದನ್ನು ನಿಲ್ಲಿಸುತ್ತಾರೆ ಎಂದು ಆಶಿಸೋಣ.

ದಾದಾ ಅಮಿರ್ ಹೈದರ್‌ಖಾನ್

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷದ ಪ್ರವರ್ತಕರಲ್ಲಿ ಒಬ್ಬರಾದ ನಮ್ಮ ಉಪಖಂಡದ ಹಿರಿಯ ಕಮ್ಯೂನಿಸ್ಟ್ ಮುಖಂಡ ದಾದಾ ಅಮಿರ್ ಹೈದರ್ ಖಾನ್ ಡಿಸೆಂಬರ್ 26 ರಂದು ಪಾಕಿಸ್ತಾನದಲ್ಲಿ ಮೃತರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು.

ಈಗ ಪಾಕಿಸ್ತಾನದಲ್ಲಿರುವ ಒಂದು ಹಳ್ಳಿಯಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದ ಕಾಮ್ರೇಡ್ ಅಮಿರ್ ಹೈದರ್ ಖಾನ್ ಹಡಗಿಗೆ ಸಾಮಾನು ಹೊರುವವರಾಗಿ ಜೀವನ ಆರಂಭಿಸಿದರು. ಮದ್ರಾಸಿಗೆ ಪಕ್ಷವನ್ನು ಕಟ್ಟಲು ಕಳುಹಿಸಿದಾಗ ಅತ್ಯಂತ ದುರ್ಭರ ಪರಿಸ್ಥಿತಿಯಲ್ಲಿ, ಬ್ರಿಟಿಷ್ ಪೋಲೀಸರ ಕಿರುಕುಳ ಎದುರಿಸಿ ಪಕ್ಷದ ಹಂದರ ಕಟ್ಟಿದ ಇವರು ಹಲವಾರು ಯುವ ರಾಜಕೀಯ ಕಾರ್ಯಕರ್ತರನ್ನು ಪಕ್ಷಕ್ಕೆ ತಂದರು. ಕಾಮ್ರೇಡ್ ಸುಂದರಯ್ಯ ಇವರಲ್ಲೊಬ್ಬರು.

ಕಾಮ್ರೇಡ್ ಅಮಿರ್ ಹೈದರ್ ಖಾನ್‌ರವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೊ ದಾದಾ ಅವರು ಅತ್ಯಂತ ಅರ್ಪಣಾ ಭಾವದಿಂದ ಮಾರ್ಕ್ಸ್‌ವಾದ ಲೆನಿನ್‌ವಾದದ ಧ್ಯೇಯ ಸಾಧನೆಗೆ ದುಡಿದ, ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಲು ಕಾರ್ಮಿಕ ವರ್ಗವನ್ನು ಅಣಿನೆರೆಸಿದ ಆರಂಭದ ಕಾರ್ಮಿಕ ವರ್ಗದ ಮುಖಂಡರ ಅದಮ್ಯ ಚೇತನದ ಪ್ರತೀಕ ಎಂದಿದೆ. ಸಮಾಜವಾದ, ಪ್ರಜಾಪ್ರಭುತ್ವ ಬಯಸುವ ಎಲ್ಲರಿಗೂ ಇವರು ಸದಾ ಸ್ಮರಣೀಯರು ಎಂದು ಶ್ರದ್ಧಾಂಜಲಿ ಅರ್ಪಿಸಿದೆ.

ದಾದಾ ಅವರ ಆರೋಗ್ಯ ಹದಗೆಡುತ್ತಿದ್ದರೂ ಸಾರ್ವಜನಿಕ ವ್ಯವಹಾರಗಳಲ್ಲಿ ಅವರು ಸಕ್ರಿಯರಾಗಿದ್ದರು. 1988ರಲ್ಲಿ ಅವರು ಭಾರತ ವಿಭಜನೆಯ ನಂತರ ಮೊದಲಬಾರಿಗೆ ಭಾರತಕ್ಕೆ ಭೇಟಿಯಿತ್ತಾಗ ಭಾರತೀಯ ಕಮ್ಯುನಿಸ್ಟರು, ಇತರ ಪ್ರಗತಿಪರ ವಲಯಗಳಿಂದ ಹಾರ್ದಿಕ ಸ್ವಾಗತ ಪಡೆದಿದ್ದರು.

ಪುಟ 2 ರಿಂದ

ರೂಪದ ಬಗ್ಗೆ ಹೆಚ್ಚು ಪ್ರಜ್ಞಾವಂತರಾಗಿದ್ದಾರೆ. ಕಾಳಜಿಯಿಂದಿದ್ದಾರೆ. ತಮ್ಮ ಕಲೆಯ ಸೈದ್ಧಾಂತಿಕ ಸ್ವಭಾವವನ್ನು, ರಾಜಕೀಯ ಶಕ್ತಿಗಳ ಜತೆ ಅದರ ಮೈತ್ರಿಯನ್ನು ಮುಲಾಜಿಲ್ಲದೆ ಒಪ್ಪಿಕೊಳ್ಳುವ ಇವರು ಬರಿಯ ಪೋಸ್ಟರ್ ನಾಟಕಗಳನ್ನು ಮಾತ್ರ ಆಡುತ್ತಿಲ್ಲ.

★ ಬೀದಿ ನಾಟಕ ಒಂದು ಪೂರ್ಣ ಪ್ರಮಾಣದ ಕಲಾಪ್ರಕಾರವಾಗಿ ಬೆಳೆಯುತ್ತಿದೆ. ವೃತ್ತಾಕಾರದ ನಟನೆಯ ಸ್ಥಳ, ನಾಟಕ ಆಡುವ ಪರಿಸ್ಥಿತಿ, ಪ್ರೇಕ್ಷಕ ನಟರ ಸಾಮೀಪ್ಯ - ಈ ವಿಶಿಷ್ಟ ಅವಶ್ಯಕತೆಗಳು ಹೊಸ ನಟನಾ ಶೈಲಿ, ಹೊಸ ನಾಟಕದ ಬಂಧ ಹೊಸ ಬರಹದ ಶೈಲಿ, ಹೊಸ ಸಂಗೀತ ಹಾಡು ಮತ್ತು ಮೇಳದ ಉಪಯೋಗ ಮತ್ತು ಹೊಸ ರಂಗ ಸಜ್ಜಿಕೆಗೆ ಒತ್ತಾಯ ತರುತ್ತಿವೆ. ಬೀದಿ ನಾಟಕದ ಭಾಷೆ , ವ್ಯಾಕರಣ, ಬಂಧ ಮತ್ತು ಕಲಾಭಿರುಚಿಯ ಬಗ್ಗೆ ಗಂಭೀರ ಕೆಲಸ ನಡೆದಿದೆ..

★ ವೀಡಿಯೋ, ಟಿವಿಗಳು ವ್ಯಕ್ತಿ ಅಥವಾ ಸಣ್ಣ ಕುಟುಂಬದ ಮಟ್ಟದಲ್ಲಿ 'ಸೇವಿಸುವ' ಪ್ಯಾಕ್ ಆದ ಮನೋರಂಜನೆಯನ್ನು ಮಾರುತ್ತಿರುವ ಪರಿಸ್ಥಿತಿಯಲ್ಲಿ, ಎಲ್ಲಾ ಸಾಂಪ್ರದಾಯಿಕ ಸಾಮೂಹಿಕವಾಗಿ ಅನುಭವಿಸುವ ಮನೋರಂಜನೆ ಮಾಯವಾಗುತ್ತಿದೆ. ಬೀದಿ ನಾಟಕವೊಂದೇ ದೊಡ್ಡ ಪ್ರಮಾಣದಲ್ಲಿ ಸಾಮೂಹಿಕ ಮನರಂಜನಾ ಮಾಧ್ಯಮವಾಗಿ ಬೆಳೆಯುತ್ತಿದೆ. ಈ ರೀತಿ ಬೆಳೆದ ಜನಪರ ನಾಟಕದ ಕೆಲಸ ಆಗಲೇ ಮಾಡುತ್ತಿದ.

ಬೀದಿ ನಾಟಕವೋ? ಪ್ರೋಸೆನಿಯಂ ನಾಟಕವೋ?

★ ಬೀದಿ ನಾಟಕ ಪ್ರೋಸೇನಿಯಂ ನಾಟಕದ ವಿರುದ್ಧ ದಂಗೆಯೂ ಅಲ್ಲ, ಅದಕ್ಕೆ ವಿರುದ್ಧವಾದುದೂ ಅಲ್ಲ. ವೈರುಧ್ಯವಿರುವುದು ಪ್ರತಿಗಾಮಿ ಮತ್ತು ಪ್ರಗತಿಪರ ಪ್ರೋಸೇನಿಯಂ ನಾಟಕಗಳ ನಡುವೆ-ವೈವಿಧ್ಯವಿರುವುದು ಪ್ರಜಾಸತ್ತಾತ್ಮಕ ಬೀದಿ ನಾಟಕ ಮತ್ತು ಸುಧಾರಣಾವಾದಿ, ಸರ್ಕಾರಿ ಬೀದಿನಾಟಕಗಳ ನಡುವೆ.....

★ ಬೀದಿ ನಾಟಕ ಮತ್ತು ಪ್ರೋಸೇನಿಯಂ ನಾಟಕ ಎರಡೂ ಜನತೆಗೆ ಸೇರಿದ್ದು. ಅವುಗಳ ನಡುವೆ ಯಾವುದೇ ವೈರುಧ್ಯವಿಲ್ಲ. ಆದರೆ ಖಂಡಿತವಾಗಿಯೂ ಕಲೆಯ ಬೂರ್ಜ್ವಾ ವ್ಯಕ್ತಿವಾದಿ ಧೋರಣೆ ಮತ್ತು ಜನತಾ ಸಾಮೂಹಿಕ ಧೋರಣೆಗಳ ನಡುವೆ ಪರಿಹರಿಸಲಾಗದ ವೈರುಧ್ಯವಿದೆ.......

★ ಬೀದಿ ನಾಟಕ ಬೂರ್ಜ್ವಾ ಪರಿಕಲ್ಪನೆಯ ನಾಟಕಕ್ಕೆ ವಿರುದ್ಧವಾದದ್ದು. ಪ್ರೋಸೇನಿಯಂ ನಾಟಕರೂಪದ ಬೂರ್ಜ್ವಾ ಬಳಕೆಗೆ ವಿರುದ್ಧವಾದುದು. ಇದರ ವಿರುದ್ಧ ಪ್ರತಿಭಟನೆ ರೂಪವೇ ಬೀದಿ ನಾಟಕ.

★ ಇಂತಹ ಮಾತು (ಪ್ರೋಸೇನಿಯಂ ನಾಟಕ ಬೀದಿ ನಾಟಕಕ್ಕಿಂತ ಪ್ರಬುದ್ಧ, ಉಚ್ಚಮಟ್ಟದ ಕಲೆ ಎಂಬ ಮಾತು) ಉದ್ಭವಿಸುವುದು ಉತ್ಪಾದನೆಯ ಉಪಕರಣಗಳಿಗೆ ಒಂದು ರೀತಿಯ ಮಾಯಾವಿ ಶಕ್ತಿಯನ್ನು ಕೊಡುವ ತಪ್ಪು ಕಲ್ಪನೆಯಿಂದ. ಈ ಸಂದರ್ಭದಲ್ಲಿ ಉಪಕರಣಗಳು ಕಲಾತ್ಮಕ ಅಭಿವ್ಯಕ್ತಿಯವು ಅಷ್ಟೆ.

★ ನಾಟಕ ರಂಗಪರಿಕರ, ಸಜ್ಜಿಕೆ ಇತರ ಉಪಕರಣಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಜೀವನದ ಬಗ್ಗೆ ನಾಟಕಕಾರನ ಸೃಷ್ಟಿಶೀಲ ಮತ್ತು ಗತಿ ಶೀಲ ದೃಷ್ಟಿ, ರಂಗ ಪರಿಕರ ಮತ್ತು ಉಪಕರಣಗಳನ್ನು ಸೃಷ್ಟಿಸುತ್ತದೆ. ಇದು ತಿರುವು ಮುರುವಾಗುವುದು ಸಾಧ್ಯವಿಲ್ಲ.

★ ಬೀದಿ ನಾಟಕಗಳ ಬೆಳವಣಿಗೆ ಜತೆ, ಕಲೆಯಲ್ಲಿ ವ್ಯಕ್ತಿವಾದಿ ದೃಷ್ಟಿಯ ಮೇಲೆ ಸಾಮೂಹಿಕ ದೃಷ್ಟಿ ಕ್ರಾಂತಿಕಾರಿ ಅಧಿಪತ್ಯ ಸಾಧಿಸಿದೆ.'

ಜನ ಯಾಕೆ ನಾಟಕಕ್ಕೆ ಬರುವುದಿಲ್ಲ?

ದೆಹಲಿಯಲ್ಲಿ ಶ್ರೀ ಸಾಮಾನ್ಯ ನಾಟಕದ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಾನೆಂಬುದು ಕಹಿ ಸತ್ಯ. ಕೆಲವು ನಿರ್ದೇಶಕರು ಈ ಸತ್ಯವನ್ನು ಎದುರಿಸಲು ತಯಾರಿಲ್ಲ. ಒಳ್ಳೆಯ ಪ್ರಯೋಗವೆನಿಸಿದ ಮತ್ತು ಉಚ್ಚ ಕಲಾತ್ಮಕ ಮಟ್ಟವನ್ನು ಮುಟ್ಟಿದ ನಾಟಕಗಳಿಗೆ ಪ್ರೇಕ್ಷಕರ ಅಭಾವವೇನು ಇಲ್ಲ . ಎಂದು ಇವರ ಅಂಬೋಣ. ಆದರೆ ಇವರ ಸಫಲ ನಾಟಕಗಳು ಮುಟ್ಟಲು ಸಾಧ್ಯವಾಗಿರುವುದು ಕೆಲವು ಸಾವಿರ ಪ್ರೇಕ್ಷಕರನ್ನು ಮಾತ್ರ. ದೆಹಲಿಯ ಜನಸಂಖ್ಯೆ 70 ಲಕ್ಷ ಎಂದು ಇವರಿಗೆ ನೆನಪು ಮಾಡಿಕೊಡಬೇಕು.....

ಜನ ನಾಟಕಗಳಿಗೆ ಬರದಿದ್ದರೆ, ನಾಟಕಗಳು ಜನರ ಹತ್ತಿರ ಹೋಗಬೇಕು. ನಮ್ಮ ಸಾಂಪ್ರದಾಯಿಕ ರಂಗ ತಂಡಗಳು ನಾಟಂಕಿ ಜಾತ್ರೆ ಇತ್ಯಾದಿ - ಮಾಡುತ್ತಿದ್ದದ್ದೂ ಇದನ್ನೇ. ಸಂತೆ, ಉತ್ಸವಗಳು ನಡೆಯುವಲ್ಲಿ ಅವರು ಹೋಗುತ್ತಿದ್ದರು.

ಈ ನಾಟಕದ ಜನ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರ ಬಗ್ಗೆ ಎಂದೂ ಯೋಚಿಸಿಯೇ ಇಲ್ಲ ಎಂದು ಕಾಣುತ್ತದೆ. ಅವರಲ್ಲಿ ತಮ್ಮ ಉಚ್ಚ ಮಧ್ಯಮ ವರ್ಗದ ನಾಟಕಗಳಿಗೆ ಸ್ಪಂದಿಸದ ದೊಡ್ಡ ಪ್ರೇಕ್ಷಕ ವರ್ಗದ ಬಗ್ಗೆ ಅಪ್ರಜ್ಞಾಪೂರ್ವಕ ಭಯವೂ ಇರಬೇಕು. ಮುಖ್ಯ ಕಾರಣ ಅವರು ಪ್ರೇಕ್ಷಕರ ಬಗೆಗಿನ ಪರಿಕಲ್ಪನೆಯೇ ಪ್ರಜಾಸತ್ತಾತ್ಮಕವಾದುದಲ್ಲ. ಆರೋಗ್ಯಕರ ಸಂಸ್ಕೃತಿಯ ಅಭಾವದಿಂದ ನೊರಗಿರುವ ನಮ್ಮ ಜನತೆಯ ದೊಡ್ಡ ವಿಭಾಗ ಈ ನಾಟಕದ ಜನರ ಪ್ರಜ್ಞೆಯ ಭಾಗವಾಗಿಯೇ ಇಲ್ಲ. ಈ ನಾಟಕ ಎತ್ತ ಸಾಗಿದೆ? ಜನತೆಯಿಂದ ಸಂಬಂಧ ಕಾದು ಕೊಂಡಿರುವ ಈ ನಾಟಕ ಎಲ್ಲೂ ಹೋಗಲಾರದು.

ಮಹಾಭಾರತದಿಂದ ನಾಟಕ

ಸಾವಲೀ ಮಿತ್ರರ ಈ ನಾಟಕ (ದ್ರೌಪದಿ ಬಗ್ಗೆ) ಒಂದು ಒಳ್ಳೆಯ ಅಭಿನಯದ ಸುಂದರ ನಾಟಕ ಮಾತ್ರವಲ್ಲ, ನಮ್ಮ ಮಹಾಕಾವ್ಯಗಳ ಬಗ್ಗೆ ಯಾವ ಕಲಾತ್ಮಕ ಧೋರಣೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಸುಂದರ ಉದಾಹರಣೆ ಸಹ. ಈ ನಾಟಕ ಮಹಾಭಾರತದ ಘಟನೆಗಳ ಪಾತ್ರಗಳ ಶ್ರೀಮಂತತೆಯನ್ನೂ ಕಸಿಯುವುದಿಲ್ಲ. ಅದರ ಜತೆ ಆಟವಾಡುವುದಿಲ್ಲ. ಅದು ಬರಿ ಈ ಮಹಾ ಕಾವ್ಯದ ಘಟನೆಗಳನ್ನು ಪಾತ್ರಗಳನ್ನು ಮಾನವೀಯ, ಧಾರ್ಮಿಕವಲ್ಲದ ದೃಷ್ಟಿಕೋನದಿಂದ ನೋಡುತ್ತದೆ. ಎಂತಹ ಪರಿಣಾಮಕಾರಿಯಾದ ನಾಟಕ!

ಕಮಾಂಡೋ ಕಾರ್ಯಾಚರಣೆ!

ಇಪ್ಟಾ (IPTA)ದೆಹಲಿಯಲ್ಲೂ ಇತ್ತು. 1958ರಲ್ಲಿ ಆರಂಭವಾಗಿ ರ ಹೊತ್ತಿಗೆ ಪತನ ಆರಂಭವಾಗಿತ್ತು. ಇಪ್ಟಾ ಕ್ಕೆ ಕನಾಟ್ ಪ್ಲೇಸ್‌ನಲ್ಲಿ ಆಫೀಸು ಇತ್ತು. 1966ರಲ್ಲಿ ಅದರ ಕಾರ್ಯದರ್ಶಿ, ಇಪ್ಟಾ ಪೂರ್ತಿಯಾಗಿ ಕೆಲಸ ಮಾಡದಂತೆ ನೋಡಿ ಕೊಂಡು, ಅದೇ ಆಫೀಸಿನಲ್ಲಿ ತನ್ನ ಆಮದು - ರಫ್ತು ವ್ಯಾಪಾರ ಆರಂಭಿಸಿದ್ದ. ನಾವು ಇಪ್ಟಾದ ಹೆಸರಿನಲ್ಲಿ ಸಾಂಸ್ಕೃತಿಕ ಕೆಲಸ ಆರಂಭಿಸಿದ್ದ. ಮೇಲೆ ನಮಗೆ ಇದು ಹೇಗೋ ಗೊತ್ತಾಯಿತು. ನಾವು ನಿಜವಾದ ಇಪ್ಟಾವಾದ್ದರಿಂದ ಈ ಆಫೀಸನ್ನು ನಮಗೆ ಬಿಟ್ಟು ಕೊಡಬೇಕೆಂದು ನಾವು ಆತನಿಗೆ ಒತ್ತಾಯಿಸಿದೆವು. ಆತ ಒಪ್ಪಲಿಲ್ಲ. ಆಗ ನಾವೆಲ್ಲ ಹುಡಗರು - ಹದಿನಾರು ಹದಿನೇಳು ವರುಷದವರೇ ಬಹಳ ಮಂದಿ- ಇಪ್ಟಾದ ಈ ಮಾಜಿ ಕಾರ್ಯದರ್ಶಿಯನ್ನು ಎತ್ತಿ ಹೊರಗೆ ಹಾಕಿದೆವು. ಆತನ ಸಾಮಾನು ಸರಂಜಾಮುಗಳನ್ನು ಮೊದಲನೆಯ ಮಾಳಿಗೆಯಿಂದ ಕೆಳಗೆ ಒಗೆದೆವು. ಈ ಕಾರ್ಯಾಚರಣೆ ಬಹಳ ಹಿಂಸಾತ್ಮಕವೇನು ಆಗಿರಲಿಲ್ಲ, ಯಾಕೆಂದರೆ ಆತ ಹೆಚ್ಚು ಪ್ರತಿಭಟಿಸಲಿಲ್ಲ! ಆದರೂ ಇದೊಂದು ಕಮಾಂಡೋ ಕಾರ್ಯಾಚರಣೆಯಾಗಿತ್ತು! ಈ ಆಫೀಸಿನಿಂದ ನಾವು ಸುಮಾರು ಒಂದೂವರೆ ವರ್ಷ ಕೆಲಸ ಮಾಡಿ ನಿಯಮಿತ ಸಾಂಸ್ಕೃತಿಕ ಸಂಘಟನೆಯಾದೆವು. ದೆಹಲಿಯ ಎಡ ಚಳುವಳಿಯ ಜತೆ ಸಂಬಂಧವಿಟ್ಟುಕೊಂಡು ನಮ್ಮ ಕೆಲಸ ಮಾಡುತ್ತಿದ್ದೆವು.....

... 1973ರಲ್ಲಿ ಯಾವ ರೀತಿಯಲ್ಲಿ ನಾಟಕೀಯವಾಗಿ ಇಪ್ಟಾ ಆಫೀಸು ಸೇರಿದ್ದೆವೋ ಅಷ್ಟೇ 'ನಾಟಕೀಯ'ವಾಗಿ ನಮ್ಮನ್ನು ಅಲ್ಲಿಂದ ಹೊರಗೆ ಹಾಕಲಾಯಿತು.

...ಆದಿನಗಳು ನಾವು ಟ್ರೇಡ್ ಯೂನಿಯನ್, ವಿದ್ಯಾರ್ಥಿ ಮತ್ತು ಯುವಜನರ ಸಂಘಟನೆಗಳ (ಎರಡೂ ಕಮ್ಯುನಿಸ್ಟ್ ಪಕ್ಷಗಳ) ವೇದಿಕೆಯ ಮೇಲೆ ನಾಟಕ ಆಡುತ್ತಿದ್ದೆವು. ಯಾವುದೇ ಪಕ್ಷದ ಧ್ವಜದಡಿ ನಾವು ಕಾರ್ಯಕ್ರಮ ಕೊಡುವುದಿಲ್ಲ ಎಂಬ ನಿಯಮ ನಾವೇ ಮಾಡಿಕೊಂಡಿದ್ದೆವು. ಮಾರ್ಚ್ 1973ರಲ್ಲಿ ಸಿ.ಪಿ.ಐ. ಒಂದು ದೊಡ್ಡ ಮತ ಪ್ರದರ್ಶನ ಏರ್ಪಡಿಸಿತ್ತು. ಇದರಲ್ಲಿ ನಾವು ಕಾರ್ಯಕ್ರಮ ಕೊಡಬೇಕೆಂದು ಅವರು ಕೇಳಿಕೊಂಡರು. ನಾವು ಅದನ್ನು ನಿರಾಕರಿಸಿದೆವು. ಅವರು ಬಹಳಷ್ಟು ಒತ್ತಾಯಿಸಿದರು. ಆದರೂ ನಾವು ನಮ್ಮ ನಿಯಮದಿಂದ ಜಗ್ಗಲಿಲ್ಲ. ಆಗ ಅವರು ನಮ್ಮನ್ನು ಇಪ್ಟಾ ಆಫೀಸಿನಿಂದ ಎತ್ತಿ ಹೊರಗೆ ಹಾಕಿದರು.

ಒಂದು ರೀತಿಯಲ್ಲಿ ಇದು 'ಜನಮ್' ಹುಟ್ಟಿಗೆ ನಾಂದಿಯಾಯಿತು.

ತುರ್ತುಪರಿಸ್ಥಿತಿ ಮತ್ತು ನಾವು

ಜೂನ್ 25ಕ್ಕೆ ತುರ್ತುಪರಿಸ್ಥಿತಿ ಘೋಷಿತವಾದಾಗ ನಮ್ಮ ಹಲವು ಮಿತ್ರರು ಬಂಧಿತರಾದಾಗ, ನಾವು ವಿಪರೀತ ಹೆದರಿ ಬಿಟ್ಟೆವು. ಭಾರತದ ಸರ್ಕಾರಕ್ಕೆ ನಾವು ಭಾರಿ ಅಪಾಯಕಾರಿ ಅಂತ ಅಂದುಕೊಂಡಿದ್ದೆವು. ನಾವು ನಮ್ಮ ಬೆದರಿಕೆಯ ಸಾಮರ್ಥ್ಯದ ಬಗ್ಗೆ ಅತಿಶಯ ನಂಬಿಕೆ ಇರಿಸಿಕೊಂಡಿದ್ದೆವು. ನಮ್ಮನ್ನು ಬಂಧಿಸಿ ಚಿತ್ರಹಿಂಸೆ ಕೊಡಬಹುದು ಎಂದು ಅಂದುಕೊಂಡಿದ್ದೆವು. ಆದ್ದರಿಂದ ನಾವು ಅದೃಶ್ಯರಾಗಿಬಿಟ್ಟೆವು. ನಾಟಕ ಆಡುವುದನ್ನು ನಿಲ್ಲಿಸಿ ಬಿಟ್ಟೆವು. ಟ್ರೇಡ್ ಯೂನಿಯನ್ ಪಾರ್ಟಿ ಆಫೀಸಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟೆವು.....

ಇದು ನಮ್ಮ ತಪ್ಪು ಕಲ್ಪನೆಯಾಗಿತ್ತು. ನಾವುಬೇರೆ ರೀತಿಗಳಲ್ಲಿ ರೂಪಗಳಲ್ಲಿ ನಮ್ಮ ಕೆಲಸ ಮುಂದುವರಿಸಬಹುದಾಗಿತ್ತು. ಉದಾಹರಣೆಗೆ ನಾವು ಪ್ರೋಸೀನಿಯಂ ನಾಟಕಗಳನ್ನು ಆಡಬಹುದಾಗಿತ್ತು. ಆ ಮೂಲಕ ನಾಟಕ ತಂಡವಾಗಿ ಉತ್ತಮ ಅಭ್ಯಾಸ, ಗುಣವನ್ನು ಅಳವಡಿಸಿಕೊಳ್ಳಬಹುದಾಗಿತ್ತು ತುರ್ತು ಪರಿಸ್ಥಿತಿಯ 18 ತಿಂಗಳು ನಾವು ಪೂರ್ಣ ನಿಷ್ಕ್ರಿಯರಾದೆವು.

ಉತ್ಪಲ್ ದತ್

ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಎರಡನೇ ಚುನಾವಣೆಯ ಸಮಯದಲ್ಲಿ ಬೀದಿ ನಾಟಕಗಳನ್ನು ಆಡಿದ ಕೀರ್ತಿ ಉತ್ಪಲ್ ದತ್‌ಗೆ ಸಲ್ಲಬೇಕು. ನಾಟಕಗಳಿಗೆ ಅವರ ಕೊಡುಗೆ ಅಪಾರ. ಆದರೆ ಬಹುಶಃ ಉತ್ಪಲ್‌ದತ್‌ರ ನೈಜ ಚಿತ್ರಣದ ನಾಟಕಗಳ ಕಾಲ ಮುಗಿದಿದೆ ಅಂತ ಅನ್ನಿಸುತ್ತದೆ. ಅವರು ಜಲಿಯನ್‌ವಾಲಾ ಬಾಗ್ ಬಗ್ಗೆ ಒಂದು ಶಕ್ತಿಯುತ ನಾಟಕ ಬರೆದು ಆಡಿಸಿದ್ದರು.....

ಅವರು ನಾಟಕಗಳು ಚೆನ್ನಾಗಿದ್ದರೂ ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಆಡಿಸುತ್ತವೆ. ಜನತೆಯ ಪ್ರಜ್ಞೆಯ ಜತೆ ಭಾವನಾತ್ಮಕ ಆಟವಾಡುವ ಯಾವುದೇ ನಾಟಕ, ಸಿನೆಮಾ ಅಥವಾ ಕಲೆಯನ್ನು ನಾನು

ಸಫ್ದರ್ ಹಾಶ್ಮಿ ಹೇಳುತ್ತಾರೆ



ವಿರೋಧಿಸುತ್ತೇನೆ. ಹಾಗೆ ಜನರ ಮೇಲೆ ಪರೋಕ್ಷ ಅನುಭವ ಹೇರು... ಕಲೆಯನ್ನು ಸಹ ನಾನು ವಿರೋಧಿಸುತ್ತೇನೆ. ಇದು ನ... ಧೋರಣೆಯನ್ನು ಒಪ್ಪುವವರಿಗೆ ಪ್ರೇಕ್ಷಕನ ಕಾಲರ್ ಹಿಡಿ... ಅಲುಗಿಸಿದಂತೆ ಎಂದು ನನ್ನ ಅಭಿಪ್ರಾಯ. ಈ ಅರ್ಥದಲ್ಲಿ ನಾ... ಬ್ರೆಕ್ಟ್‌ವಾದಿ. ಜನತೆಯ ಜತೆ ವಾದದಲ್ಲಿ ತೊಡಗಿ ಪ್ರಚಲಿತ ಸಮಸ್ಯೆಗ... ಬಗ್ಗೆ ಅವರೇ ಯೋಚನೆ ಮಾಡುವ ಹಾಗೆ ಮಾಡುವುದರಲ್ಲಿ ನನ... ಹೆಚ್ಚು ಆಸಕ್ತಿ. ಆದರೆ ಇಷ್ಟು ಹೇಳಿದ ಮೇಲೆ - ಭಾರತದ ಜನಪ... ರಂಗ ಚಳುವಳಿಗೆ ಉತ್ಪಲ್ ದತ್‌ರ ಕೊಡುಗೆ ಬಾದಲ್ ಸರ್ಕಾ... ಕೊಡುಗೆಗಿಂತ ಎಷ್ಟೋ ಹೆಚ್ಚು ಎಂಬುದರ ಬಗ್ಗೆ ವಿ... ಅನುಮಾನವಿಲ್ಲ. ಬಾದಲ್ ಸರ್ಕಾರ್‌ರಿಂದ ನಕಾರಾತ್ಮಕವಾ... ಕೊಡುಗೆಯೇ ಹೆಚ್ಚು.

ಪಾರಂಪರಿಕ ಕಲಾರೂಪ ಮತ್ತು ಆಧುನಿಕ ಜನಪರ ವಸ್ತು

ಇದು ನಾವೆಲ್ಲರೂ ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ನಾ... ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಸಂಸ್ಕೃತಿ... ಕಪಿಮುಷ್ಟಿಯಿಂದ ಬಿಡುಗಡೆ ಪಡೆಯಬಯಸುತ್ತೇವೆ. ಈ ಸಂಸ... ನಮ್ಮ ಪಾರಂಪರಿಕ ಕಲೆಯನ್ನು ಹೆಚ್ಚುಕಡಿಮೆ ನಾಶಮಾಡಿಬಿಟ್ಟ... ಜನತೆ ತಮ್ಮ ಆಶೋತ್ತರಗಳನ್ನು ಬಿಂಬಿಸಲು ಉಪಯೋಗಿಸುತ್ತಿ... ಅವರಿಗೆ ಸುಲಭವಾಗಿ ಅರ್ಥವಾಗುವ ಪಾರಂಪರಿಕ ಕಲಾರೂಪಗಳ... ನಾವು ಕೆಲಸ ಮಾಡಬೇಕೆಂದು ನಮ್ಮ ಆಸೆ. ಆದರೆ ಪಾರಂಪ... ಕಲಾರೂಪಗಳ ಜತೆ, ಅದರ ವಸ್ತು ಸಹ ಬರುತ್ತದೆ. ಪಾರಂಪರಿಕ ಕಲೆ... ವಸ್ತು ಹೆಚ್ಚಾಗಿ ಮೂಢನಂಬಿಕೆಗಳಿಂದ ಕೂಡಿದ್ದು, ಧಾರ್ಮಿ... ಮೌಢ್ಯದ ಪಾಳೆಯಗಾರಿ ಮತ್ತು ಅದಕ್ಕೂ ಹಿಂದಿನ ಪದ್ಧತಿ... ಮೌಲ್ಯಗಳನ್ನು ಎತ್ತಿ ಹಿಡಿಯುವಂಥದ್ದು. ಯಾವುದೇ ಕಲೆಯ... ರೂಪ ಮತ್ತು ವಸ್ತುವಿಗೆ ಗಹನ ಸಂಬಂಧವಿರುತ್ತದೆ. ಕಲೆ... ಆಪರೇಷನ್ ಮಾಡಿ ರೂಪ ಮತ್ತು ವಸ್ತುವ... ಬೇರ್ಪಡಿಸುವುದುಕಷ್ಟ. ಆದರೆ ಬಹಳ ಜನಪರ ರಂಗತಂಡಗಳು ... ಕಷ್ಟ ಸಾಧ್ಯ ಕೆಲಸವನ್ನು ಬಹಳ ಮಟ್ಟಿಗೆ ಮಾಡಿವೆ. ಪಾರಂಪ... ಹಾಡುಗಳ ರಾಗ ಮತ್ತು ಶೈಲಿಯನ್ನು ನಮ್ಮ ನಾಟಕ... ಹಾಡುಗಳಲ್ಲಿ ನಾವು ಉಪಯೋಗಿಸುವುದರಲ್ಲಿ ಯಶಸ್ವಿಯಾಗಿದ್ದೇ... ಆದರೆ ಈ ಪ್ರಶ್ನೆ ಸೈದ್ಧಾಂತಿಕ ಮಟ್ಟದಲ್ಲಾಗಲಿ, ಪ್ರತ್ಯಕ್ಷ ಕೆಲಸ... ಮಟ್ಟದಲ್ಲಾಗಲಿ ಪರಿಹಾರವಾಗಿದೆ ಎಂದು ಹೇಳುವುದು ಕ... ಆದರಲ್ಲೂ ಈ ಕೆಲಸ ಒಂದು ವಿಶಿಷ್ಟ ಹಿನ್ನೆಲೆಯ... ಆಗುತ್ತಿರುವುದರಿಂದ ಇನ್ನೂ ಕಷ್ಟಕಾರಿಯಾಗಿದೆ. ಪಾರಂಪ... ಜಾನಪದ ಮತ್ತು ಆದಿವಾಸಿ ಕಲೆಗಳನ್ನು ದೊಡ್ಡ ಪ್ರಮಾಣದ... 'ಪುನರುತ್ಥಾನ' ಮಾಡುವ ಕೆಲಸ ಬಿರುಸಿನಿಂದ ನಡೆದಿದೆ. ... 'ಪುನರುತ್ಥಾನ ' ಕೆಲಸವನ್ನು ಅಧಿಕೃತ (ಅಕಾಡೆಮಿಗಳಂತಹ ... ಸಂಘಟನೆಗಳು ಅಷ್ಟೇನೂ ಅಧಿಕೃತವಲ್ಲದ ಸಂಘಟನೆಗಳು ಮ... ವಿದೇಶಿ ಸಂಘಟನೆಗಳು ಮಾಡುತ್ತಿವೆ. ಇದರಿಂದ ಬೇಕಾದ... ಧಾರ್ಮಿಕ ಮೌಢ್ಯ ಮತ್ತು ಹಿನ್ನಡೆಯುವ ಧೋರಣೆ ಪುನರುತ್ಥಾ... ಗೊಳ್ಳುತ್ತಿದೆ.

ಭಾರತೀಯ ಅಥವಾ ಜನಪರ ಕಲೆ?

ಈ ಪ್ರಯತ್ನ (ಅಧಿಕೃತ, ವಿದೇಶಿ ಏಜೆನ್ಸಿಗಳು ಮಾಡುತ್ತಿರುವ ... ಭಾರತದ ರಂಗಚಳುವಳಿಗೆ ವಿಶಿಷ್ಟ ಭಾರತೀಯತೆ ಕೊಡುವ ಬದಲು ... ಭಾರತದ ರಂಗಭೂಮಿಗೆ ಒಂದು ವಿಶಿಷ್ಟ ಹಿಂದುಳಿಯು... ಕೊಡುತ್ತಿದೆ ಎಂದು ನನ್ನ ಮತ್ತು ಇತರ ಸಾಂಸ್ಕೃತಿಕ ಕೆಲಸಗಾ... ಅಭಿಪ್ರಾಯ. ಇದರಿಂದ ಭಾರತದ ರಂಗಭೂಮಿಯನ್ನು ಬಿಡುಗ... ಮಾಡಬೇಕು. ಅಂದರೆ ನಾವು ಪಾರಂಪರಿಕ ನಾಟಕರೂಪಗಳ... ತಿರಸ್ಕರಿಸುತ್ತೇವೆ ಎಂದಲ್ಲ. ಎರಡು ರೀತಿಯ ಪರಂಪರೆಗಳು ... ಎಂದು ನಮ್ಮ ನಂಬಿಕೆ. ಪರಂಪರೆಯ ಜತೆ ನಾವು ವಿಮರ್ಶಾ... ಸಂಬಂಧವನ್ನು ಬೆಳೆಸಬೇಕು.

ಆದರೆ ಈ ಅಧಿಕೃತ ಏಜೆನ್ಸಿಗಳು ನಾವು ಪರಂಪರೆಗೆ ಪೂ... ಶರಣಾಗತವಾಗಬೇಕೆಂದು ಬಯಸುತ್ತವೆ.ನಮ್ಮ ಚಳುವಳಿಯ ಒ... ಇದರ ಬಗ್ಗೆ ಒಮ್ಮತ ಸಾಧಿಸಲಾಗಿದೆ ಎಂದು ನಾನು ಹೇಳಲಾರೆ.... ಈ ಪ್ರಶ್ನೆಯನ್ನು ಜನಪರ ನಾಟಕಗಳನ್ನು ಹೆಚ್ಚೆಚ್ಚು ಆಡಿ, ಜನತೆ... ಜತೆ ಹೆಚ್ಚೆಚ್ಚು ಗಾಢ ಮತ್ತು ಶ್ರೀಮಂತ ಸಂಬಂಧಗಳ... ಸಾಧಿಸುತ್ತಾ ಹೋದಂತೆ ಮಾತ್ರ ನಾವು ಬಗೆಹರಿಸಲು ಸಾಧ್ಯ. ವ... ಗಾಢವಾಗುತ್ತಾ, ಶ್ರೀಮಂತವಾಗುತ್ತಾ ಹೋದಂತೆ , ಹೊ... ಕಲಾರೂಪಗಳು ಹುಟ್ಟಿಕೊಳ್ಳುತ್ತವೆ. ಜೀವಂತ ಪರಂಪರೆಯನ್ನು ನಾ... ಅರಗಿಸಿಕೊಂಡಾಗ ನಮ್ಮ ಕಲೆಯಲ್ಲಿ ಅದು ತನ್ನಿಂದ ತಾನೆ ಪರಿಣಾ... ಬೀರುತ್ತದೆ.

ಜಾತ್ಯತೀತ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು

ರಾಮಜನ್ಮಭೂಮಿ/ಬಾಬ್ರಿ ಮಸೀದಿಗೆ ಸಂಬಂಧಪಟ್ಟಂತೆ "ಧರ್ಮಸ್ಥಾನ ಮುಕ್ತಿ ಯಜ್ಞ ಸಮಿತಿ" ತನ್ನ ಡಿಸೆಂಬರ್ 11 ರ ಸಭೆಯಲ್ಲಿ ತಳೆದ ನಿಲುವು ಉದ್ರೇಕಕಾರಿ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತನ್ನ ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ಹಿಂದಿನ ಕಾಂಗ್ರೆಸ್(ಐ) ಸರಕಾರದಿಂದ ಬಳುವಳಿಯಾಗಿ ಪಡೆದ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆಯೊಡ್ಡಿರುವ ಸಮಸ್ಯೆಗಳನ್ನು ಹೊಸ ಸರಕಾರ ಎದುರಿಸಲು ಪ್ರಯತ್ನಿಸುತ್ತಿರುವಾಗ ಸಮಿತಿಯ ಈ ಉದ್ರೇಕಕಾರಿ ನಿಲುವು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಹಲವಾರು ಸಂತರ ಹೆಸರುಗಳಿದ್ದರೂ ವಿಶ್ವ ಹಿಂದೂ ಪರಿಷತ್, ಬಿ.ಜೆ.ಪಿ. ಹಾಗೂ ಆರ್.ಎಸ್.ಎಸ್.ಗಳೇ ಪ್ರಮುಖ ಅಂಗಗಳಾಗಿರುವ "ಧರ್ಮಸ್ಥಾನ ಮುಕ್ತಿ ಯಜ್ಞ ಸಮಿತಿ" ಮೂರು ನಿರ್ಣಯಗಳನ್ನು ಅಂಗೀಕರಿಸಿತು.

ಮೊದಲನೆಯ ನಿರ್ಣಯದಲ್ಲಿ "ಶ್ರೀರಾಮ ಜನ್ಮಭೂಮಿ ದೇವಸ್ಥಾನದ ಶಿಲಾನ್ಯಾಸ ಒಂದು ವೈಭವಶಾಲಿ ಶ್ರೀರಾಮ ದೇವಸ್ಥಾನದ ಶಿಲಾನ್ಯಾಸ ಮಾತ್ರವಲ್ಲ, ಕೋಟಿ-ಕೋಟಿ ಹಿಂದೂಗಳ ಭಾವನೆಗಳಿಗೆ ಅನುಗುಣವಾಗಿ ಭಾರತ ವರ್ಷದಲ್ಲಿ ಒಂದು ಹಿಂದೂ ರಾಷ್ಟ್ರದ ಮರುಸ್ಥಾಪನೆಯ ಸಂಕೇತ ಕೂಡಾ" ಎನ್ನಲಾಗಿದೆ. ಈ ನಿರ್ಣಯ ರಾಮಜನ್ಮಭೂಮಿ/ಬಾಬ್ರಿ ಮಸೀದಿ ವಿವಾದಕ್ಕಷ್ಟೇ ನಿಲ್ಲದೆ ಮಥುರಾ ಮತ್ತು ವಾರಾಣಸಿಯ ಮಸೀದಿಗಳನ್ನು ಕೆಡಹುವ ಬೆದರಿಕೆಯನ್ನು ಹಾಕಿದೆ. ಯಾಕೆಂದರೆ ಈ ಮಸೀದಿಗಳನ್ನು ಕೃಷ್ಣ ಜನ್ಮಭೂಮಿ ಮತ್ತು ಶ್ರೀವಿಶ್ವನಾಥ ದೇವಸ್ಥಾನದ ಜಾಗಗಳಲ್ಲಿ ಕಟ್ಟಲಾಗಿದೆ ಎಂದು ಹೇಳಿರುವ ಈ ನಿರ್ಣಯ ತನು, ಮನ, ಧನದಿಂದ ಇದರಲ್ಲಿ ಸಹಕರಿಸಬೇಕೆಂದು ಹಿಂದೂಗಳಿಗೆ ಕರೆ ನೀಡಿದೆ.

ಎರಡನೇ ನಿರ್ಣಯ ರಾಮಜನ್ಮಭೂಮಿಯನ್ನು ಹಿಂದೂ ಸಮುದಾಯಕ್ಕೆ ವಹಿಸಿಕೊಡಬೇಕೆಂದು ಸರಕಾರಕ್ಕೆ ಹೇಳಿದೆ. ಉಚ್ಛ ಮಟ್ಟದ ಮಾತುಕತೆಗಳಲ್ಲಿ ಭಾಗವಹಿಸಲು ಸಿದ್ಧ ಎಂದಿರುವ ಈ ನಿರ್ಣಯ ಈ ವಿವಾದ ನ್ಯಾಯಾಲಯಗಳ ವ್ಯಾಪ್ತಿಗೆ ಮೀರಿದ್ದೆಂದೂ ಸ್ಪಷ್ಟಪಡಿಸಿದೆ.

ಮೂರನೆಯ ನಿರ್ಣಯ ಜನವರಿ 26, 27 ರಂದು ನಡೆಯಲಿರುವ 'ಸಂತ ಸಮ್ಮೇಳನ'ದ ಮೊದಲೇ ಒಂದು ತ್ವರಿತ ನಿರ್ಣಯ ಕೈಗೊಳ್ಳಬೇಕೆಂದು ಸರಕಾರಕ್ಕೆ ಹೇಳುತ್ತದೆ. ಪ್ರಯಾಗದಲ್ಲಿ ನಡೆಸಲಿರುವ ಈ ಸಮ್ಮೇಳನ ಮುಂದಿನ ಕಾರ್ಯಕ್ರಮಗಳನ್ನು ಘೋಷಿಸಲಿದೆಯಂತೆ. ಮಾತುಕತೆಗೆ ಸಿದ್ಧವಿರುವುದನ್ನು ದೌರ್ಬಲ್ಯವೆಂದು ಭಾವಿಸಿದರೆ ತಮ್ಮ ಗುರಿಸಾಧನೆಗೆ ಮುಂದಿನ ಮಾರ್ಗ ರೂಪಿಸಬೇಕಾಗುತ್ತದೆ ಎಂದೂ ನಿರ್ಣಯ ಬೆದರಿಸಿದೆ.

ಸಮಿತಿಯ ಮತ್ತು ವಿ.ಹೆಚ್.ಪಿ.ಯ ಈ ನಿಲುವು ಬಹುಸಂಖ್ಯಾತ ಕೋಮನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಯೋಜನೆ ಹೊಂದಿದೆ ಎಂದಿರುವ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕೆಡವದೆ ರಾಮ ದೇವಸ್ಥಾನ ಕಟ್ಟಲು ಯಾರದೂ ಆಕ್ಷೇಪವಿಲ್ಲ, ಆದರೆ ಮಸೀದಿಯನ್ನು ಕೆಡವಿ ಕಟ್ಟುವುದಾದರೆ ಅದು ರಾಷ್ಟ್ರೀಯ ಐಕ್ಯತೆ, ಕೋಮು ಸೌಹಾರ್ದದ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದೆ.

ಇದೊಂದು ಸೂಕ್ಷ್ಮ ಪ್ರಶ್ನೆ, ಇದಕ್ಕೊಂದು ರಾಷ್ಟ್ರೀಯ ಸಹಮತ, ಸಂಬಂಧಪಟ್ಟ ಎಲ್ಲರನ್ನೂ ಒಳಗೊಂಡ ಪರಿಹಾರ ಅಗತ್ಯ. ಆದ್ದರಿಂದ ಇಂತಹ ಪ್ರಶ್ನೆಯ ಮೇಲೆ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸುವುದು ಒಂದು ಅನಪೇಕ್ಷಣೀಯ ಪ್ರಯತ್ನ. ಈ ಕ್ಲಿಷ್ಟ ಸಮಸ್ಯೆಯನ್ನು ಚರ್ಚಿಸಿ ಬಹುಸಂಖ್ಯಾತ ಕೋಮಿನ ಧಾರ್ಮಿಕ ಭಾವನೆಗಳನ್ನು ಗೌರವಿಸುವ, ಜತೆಗೆ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಒಂದು ನಿಲುವು ರೂಪಿಸಲು ತಕ್ಷಣ ರಾಷ್ಟ್ರೀಯ ರಂಗ ಸರ್ಕಾರ ಒಂದು ಸರ್ವ ಪಕ್ಷ ಸಭೆ ಕರೆಯುವುದು ಅಗತ್ಯ ಎಂದು ಪಿ.ಬಿ. ಹೇಳಿದೆ.

ಒಂದು ಪ್ರಜಾಪ್ರಭುತ್ವದಲ್ಲಿ ಅಲ್ಪಸಂಖ್ಯಾತರ ಪ್ರಾಥಮಿಕ ಹಕ್ಕುಗಳ ಭರವಸೆ ನೀಡಲೇಬೇಕು, ರಾಜಕೀಯದಲ್ಲಿ ಧಾರ್ಮಿಕ ಮಧ್ಯ ಪ್ರವೇಶ ತಂದು ಜಾತ್ಯತೀತ ಮೌಲ್ಯಗಳಿಗೆ ಬೆದರಿಕೆಯೊಡ್ಡುವುದನ್ನು ಎಲ್ಲರೂ ಪ್ರತಿರೋಧಿಸಬೇಕೆಂಬುದನ್ನು ಎಲ್ಲಾ ನಾಗರಿಕರು ರಾಜಕೀಯ ಪಕ್ಷಗಳು ನೆನಪಿಟ್ಟುಕೊಳ್ಳಬೇಕು ಎಂದು ಪೊಲಿಟ್ ಬ್ಯೂರೋ ಮನವಿ ಮಾಡಿಕೊಂಡಿದೆ. ಪರಿಸ್ಥಿತಿ ಹದಗೆಡದಂತೆ ತಡೆಯಲು ಜಾತ್ಯತೀತ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿಯಲು ಎಲ್ಲಾ ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳು ಒಂದು ಐಕ್ಯ ನಿಲುವು ತಳೆಯಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಸಿ.ಪಿ.ಐ(ಎಂ) ಕೇಂದ್ರ ಸಮಿತಿಯ ಮುಖಪತ್ರಿಕೆ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ ಈ ಕುರಿತು ಬರೆಯುತ್ತಾ ಮುಕ್ತಿ ಯಜ್ಞ ಸಮಿತಿಯ ಈ ನಿಲುವು ದೇಶ ಪ್ರೇಮಿ ಭಾರತೀಯರಿಗೆ, ದೇಶದ ಸಂವಿಧಾನದ ಮೂಲಭೂತ ನೀತಿಗಳಿಗೆ ಒಂದು ಗಂಭೀರ ಸವಾಲು ಎಂದು ವರ್ಣಿಸುತ್ತಾ, ಬಿ.ಜೆ.ಪಿ.ಯ "ಸಕಾರಾತ್ಮಕ ಜಾತ್ಯತೀತತೆಯನ್ನು ಇದು ಪರೀಕ್ಷೆಗೊಡ್ಡಿದೆ ಎಂದು ಹೇಳಿದೆ. ಬಿ.ಜೆ.ಪಿ. ಈ ನಿಲುವಿನಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳದಿದ್ದರೆ, ವಾಸ್ತವವಾಗಿ ಅದು ಈ ನಿಲುವಿಗೆ ಪ್ರೋತ್ಸಾಹ ನೀಡುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ಈ ಕಾರಣಕ್ಕಾಗಿಯೇ ಸಿ.ಪಿ.ಐ(ಎಂ) ಮತ್ತು ಎಡ ಪಕ್ಷಗಳು ಆರಂಭದಿಂದಲೇ ಕಾಂಗ್ರೆಸ್ ಸರಕಾರವನ್ನು ಇಳಿಸುವುದರ ಜೊತೆಗೆ ಕೋಮುವಾದಿ ಶಕ್ತಿಗಳು ದೂರ ತಳ್ಳಲ್ಪಡುವಂತಾಗಲು ಪ್ರಯತ್ನಿಸಿದವು. ಈ ಹಿಂದೆ ಕೂಡಾ ಭಾರತ ಕೋಮುವಾದಿ ರಾಜಕೀಯದಿಂದ ಬಹಳಷ್ಟು ಕಷ್ಟ ನಷ್ಟ ಅನುಭವಿಸಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಇದರ ದುರ್ಲಾಭ ಪಡೆದರು. ದೇಶ ಇಬ್ಭಾಗವಾಯಿತು. ಈಗ 42 ವರ್ಷಗಳ ನಂತರವೂ ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ಭಾವನೆ ಉಳಿದಿದೆಯೆಂದರೆ ಪ್ರಜಾಪ್ರಭುತ್ವ ಆಂದೋಲನದ ಬೆಳವಣಿಗೆಗಾಗಲಿ, ರಾಷ್ಟ್ರೀಯ ಐಕ್ಯತೆಗಾಗಲಿ ಒಳ್ಳೆಯ ಲಕ್ಷಣವಲ್ಲ.

ಒಂದು ಹಿಂದೂ ರಾಷ್ಟ್ರ ಸ್ಥಾಪಿಸಬೇಕೆನ್ನುವುದಾದರೆ ಪಾಕಿಸ್ತಾನದ ಬೇಡಿಕೆಯನ್ನಾಗಲಿ, ಪಾಕಿಸ್ತಾನದ ಇನ್ನೊಂದು ರೂಪವನ್ನು ಅಥವಾ ಒಂದು ಕ್ರಿಶ್ಚಿಯನ್ ರಾಷ್ಟ್ರದ ಬೇಡಿಕೆಯನ್ನಾಗಲಿ ವಿರೋಧಿಸಲು ಸಾಧ್ಯವಾಗದು ಎಂದು ಹೇಳಿರುವ ಪಿ.ಡಿ. ಸಂಪಾದಕೀಯ ಇಂತಹ ಬೇಡಿಕೆಗಳನ್ನು ಎತ್ತುವವರು ಪಂಜಾಬ್ ಮತ್ತು ಜಮ್ಮು-ಕಾಶ್ಮೀರದಲ್ಲಿ ದೇಶ ಎಂತಹ ಸಂಕಷ್ಟಮಯ ಪರಿಸ್ಥಿತಿ ಎದುರಿಸುತ್ತಿದೆ ಎಂಬುದನ್ನು ಅರಿತಂತೆ ಕಾಣುವುದಿಲ್ಲ ಎಂದಿದೆ. ಹಿಂದೂ ಕೋಮುವಾದಿಗಳು ಈ ಮೂಲಕ ದೇಶದಲ್ಲಿ ಕಾರ್ಯನಿರತವಾಗಿರುವ ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಶಕ್ತಿಗಳಿಗೆ ಪ್ರೋತ್ಸಾಹ ನೀಡುತ್ತಾರಷ್ಟೆ.

ಈ ದೇಶದ ಮಹಾನತೆ ಇರುವುದು ಅದರ ಐಕ್ಯತೆಯಲ್ಲಿ. ಒಂದು ಐಕ್ಯ ಭಾರತ ಶಾಂತಿಯ ಹೋರಾಟದಲ್ಲಿ, ಸಾಮ್ರಾಜ್ಯಶಾಹಿಗಳ ಒತ್ತಡ ಎದುರಿಸುವಲ್ಲಷ್ಟೆ ಅಲ್ಲ, ದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಜೀವನದಲ್ಲಿ ಮುನ್ನಡೆ ಸಾಧಿಸುವಲ್ಲಿಯೂ ಮಹತ್ವದ ಪಾತ್ರವಹಿಸುವ ಸಾಮರ್ಥ್ಯ ಹೊಂದಿದೆ ಎಂದು ಸಂಪಾದಕೀಯ ಒತ್ತಿ ಹೇಳಿದೆ.

ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳಲ್ಲಿ

ಸಿ.ಪಿ.ಐ.(ಎಂ) 9 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. 8 ಸ್ಥಾನಗಳಲ್ಲಿ ಜನತಾದಳದೊಡನೆ ಹೊಂದಾಣಿಕೆಯಿತ್ತು.

ಸಿ.ಪಿ.ಐ.(ಎಂ) ಗೆದ್ದಿರುವ ಸ್ಥಾನಗಳು ಎರಡು. ಇವೆರಡೂ ಈಗಾಗಲೇ ಸಿ.ಪಿ.ಐ.(ಎಂ) ಎಂ.ಎಲ್.ಎ.ಗಳನ್ನೇ ಹೊಂದಿದ್ದ ಸ್ಥಾನಗಳು. ವಾರಣಾಸಿ ಜಿಲ್ಲೆಯ ಗಂಗಾಪುರದಲ್ಲಿ ರಾಜ್ಯ ಸೆಕ್ರೆಟರಿಯೆಟ್ ಸದಸ್ಯ ರಾಜಕಿಶೋರ್ ಸಿಂಗ್ ಕಾಂಗ್ರೆ ಅಭ್ಯರ್ಥಿಯನ್ನು 15,475 ಮತಗಳಿಂದ ಸೋಲಿಸಿದರು. ಬಿ.ಜೆ.ಪಿ. ನಾಲ್ಕನೇ ಸ್ಥಾನ ಪಡೆದು ಠೇವಣಿ ಕಳಕೊಂಡಿತು. ಇನ್ನೊಂದು ಉಳಿಸಿಕೊಂಡ ಕ್ಷೇತ್ರ-ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರ್(ಮೀಸಲು) ಪಕ್ಷದ ರಾಜ್ಯಸಮಿತಿ ಸದಸ್ಯರಾದ ಅಕ್ಬರ್ ಹುಸೇನ್ ಬಾಬರ್ ಇಲ್ಲಿ ಗೆದ್ದಿದ್ದಾರೆ. ಕಾಂಗ್ರೆ ಪೋಷಿತ ಕ್ರಿಮಿನಲ್ ಗ್ಯಾಂಗ್ ಕಾಮ್ರೆಡ್ ಬಾಬರ್‌ಗೆ ಹಾಕಿದ ಕೊಲೆ ಬೆದರಿಕೆಯ ನೆರಳಿನಲ್ಲೇ ಇಲ್ಲಿ ಚುನಾವಣಾ ಪ್ರಚಾರ ನಡೆಯಿತು. ಅಯೋಧ್ಯೆಯನ್ನು ಒಳಗೊಂಡ ಈ ಕ್ಷೇತ್ರ ಕೋಮುವಾದಿಗಳ ವಿಷಪ್ರಚಾರಕ್ಕೆ ತಕ್ಕ ಉತ್ತರ ನೀಡಿತು.

ಮೂರು ಸ್ಥಾನಗಳಲ್ಲಿ ಬಿಜನೂರು ಜಿಲ್ಲೆಯ ನಝೀಬಾಬಾದ್, ಆಝಂಗಡ್‌ನ ಮೋಹ್‌ನಗರ ಹಾಗೂ ಸುಲ್ತಾನ್‌ಪುರ್ ಜಿಲ್ಲೆಯ ಕಾದೀಪುರನಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿಗಳು ಎರಡನೇ ಸ್ಥಾನದಲ್ಲಿದ್ದರು. ನಝೀಬಾಬಾದ್ ನಲ್ಲಿ 1,100 ಮತಗಳಿಂದ ಬಿ.ಎಸ್.ಪಿ ಅಭ್ಯರ್ಥಿ ಗೆದ್ದರು.

ಮಹಾರಾಷ್ಟ್ರ

ಕೋಮುವಾದಿ ಶಕ್ತಿಗಳ ಬೆಳವಣಿಗೆಯ ಸಂಕೇತ

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್(ಐ)ಗೆ ಹಿನ್ನಡೆಯುಂಟಾಗಿದೆ. ಆದರೆ ಇನ್ನೂ ಅತಿ ದೊಡ್ಡ ರಾಜಕೀಯ ಶಕ್ತಿಯಾಗಿಯೇ ಉಳಿದಿದೆ. ಕಾಂಗ್ರೆಸ್(ಐ)ನ ಹಿನ್ನಡೆಯಿಂದ ಎಡ, ಪ್ರಜಾಪ್ರಭುತ್ವ ಶಕ್ತಿಗಳಿಗೇನೂ ದಕ್ಕಿಲ್ಲ. ಬದಲು ಕೋಮುವಾದಿ ಕೂಟಕ್ಕೆ ಹೆಚ್ಚು ಲಾಭವಾಗಿದೆ.

48 ಸ್ಥಾನಗಳಲ್ಲಿ ಸ್ಪರ್ಧಿಸಿದ ಕಾಂಗ್ರೆಸ್(ಐ) 28ರಲ್ಲಿ ಗೆದ್ದಿದ್ದರೆ 39 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿ.ಜೆ.ಪಿ-ಶಿವಸೇನೆ ಕೂಟ 14ರಲ್ಲಿ ಗೆದ್ದಿದೆ. ಕಾಂಗ್ರೆಸ್(ಐ) 45% ಮತ ಪಡೆದಿದೆ. ಬಿ.ಜೆ.ಪಿ.-ಶಿವಸೇನೆ ಕೂಟ 28% ಮತಗಳಿಸಿತು. ನಗ್ನ ಕೋಮುವಾದಿ ಪ್ರಚಾರದಲ್ಲಿ ತೊಡಗಿದ್ದ ಈ ಕೂಟ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಕೆಲವು ಪ್ರಮುಖ ಪ್ರತಿನಿಧಿಗಳನ್ನು ಸೋಲಿಸಲು ಬಹಳ ಶ್ರಮವಹಿಸಿ, ಮೃಣಾಲ್ ಗೋರೆ, ದತ್ತಾ ಸಾಮಂತ್, ಡಿ.ಬಿ.ಪಾಟೀಲ್ ರಂತವರ ಸೋಲಿಗೆ ಕಾರಣರಾದರು.

ಈ ಚುನಾವಣೆಯ ಅತ್ಯಂತ ಕಳವಳಕಾರಿ ಅಂಶವೆಂದರೆ ಮುಂಬೈ-ಥಾಣೆ ಕೈಗಾರಿಕಾ ಪಟ್ಟಿಯಲ್ಲಿ ಎಲ್ಲಾ ಭಾಷೆಯ ಕಾರ್ಮಿಕ ವರ್ಗದ ಹಾಗೂ ಮಧ್ಯಮವರ್ಗಗಳ ಮತದಾರರಿರುವ ಪ್ರದೇಶದಲ್ಲಿ ಬಿ.ಜೆ.ಪಿ.-ಶಿವಸೇನೆ ಕೂಟ 7ರಲ್ಲಿ ಐದು ಸ್ಥಾನ ಗೆದ್ದರು. ಜನತಾದಳದಲ್ಲಿ ಅನೈಕ್ಯತೆ, ಕೋಮುವಾದದ ವಿರುದ್ಧ ಅದರ ನಿಷ್ಕ್ರಿಯತೆ ಇದಕ್ಕೆ ದೊಡ್ಡ ಕಾಣಿಕೆ ನೀಡಿತು.

ಸಿ.ಪಿ.ಐ.(ಎಂ) ದಹಾಣು (ಮೀಸಲು) ಹಾಗೂ ವರ್ಧಾದಲ್ಲಿ ಸ್ಪರ್ಧಿಸಿತ್ತು. ಪ್ರತಿ ಚುನಾವಣೆಯಲ್ಲೂ ಪಕ್ಷ ಇಲ್ಲಿಂದ ಸ್ಪರ್ಧಿಸುತ್ತಾ ಬಂದಿದೆ. ಕಳೆದಬಾರಿ 2ನೇ ಸ್ಥಾನದಲ್ಲಿದ್ದ ಪಕ್ಷ ವರ್ಧಾದಲ್ಲಿ ಈ ಬಾರಿಯೂ ಬಿ.ಜೆ.ಪಿಯ ತೀವ್ರ ಸ್ಪರ್ಧೆಯಿದ್ದರೂ ಎರಡನೇ ಸ್ಥಾನದಲ್ಲಿತ್ತು. ಆದರೆ ದಹಾಣುವಿನಲ್ಲಿ ಬಿ.ಜೆ.ಪಿ.ಯಿಂದಾಗಿ 3ನೇ ಸ್ಥಾನಕ್ಕಿಳಿಯಿತು. ಗೆದ್ದ ಕಾಂಗ್ರೆಸ್(ಐ) ಅಭ್ಯರ್ಥಿ 1.97ಲಕ್ಷ, ಬಿ.ಜೆ.ಪಿ. 1.72ಲಕ್ಷ ಹಾಗೂ ಸಿ.ಪಿ.ಐ.(ಎಂ) 1.43ಲಕ್ಷ ಮತಗಳಿಸಿತು. ವರ್ಧಾದಲ್ಲಿ ಕಾಂಗ್ರೆಗೆ 2.22ಲಕ್ಷ, ಸಿ.ಪಿ.ಐ.(ಎಂ)ಗೆ 1.96ಲಕ್ಷ ಹಾಗೂ ಬಿ.ಜೆ.ಪಿ.ಗೆ 1.18ಲಕ್ಷ ಮತ ದೊರೆಯಿತು. ಈ ಎರಡೂ ಕ್ಷೇತ್ರಗಳಲ್ಲಿ ಕೋಮುವಾದಿಗಳಿಂದ ಅಪಾಯವನ್ನು ಸಂಪೂರ್ಣವಾಗಿ ಗ್ರಹಿಸದ ಕಾಂಗ್ರೆಸ್(ಐ)ನ ವಿರುದ್ಧವೇ ಪ್ರಚಾರ ಕೇಂದ್ರೀಕೃತಗೊಂಡಿದ್ದರಿಂದ ಹೀಗಾಯಿತು ಎಂದು ತಿಳಿದುಬಂದಿದೆ. ಮೊದ ಮೊದಲು ಎಡ-ಪ್ರಜಾಪ್ರಭುತ್ವ ಶಕ್ತಿಗಳತ್ತ ಒಲವು ತೋರಿದ ಅಲ್ಪಸಂಖ್ಯಾತರು ನಂತರ ಬಿ.ಜೆ.ಪಿ.-ಶಿವಸೇನೆ ಕೂಟದ ವಿರುದ್ಧ ಕಾಂಗ್ರೆಗೆ ಮತನೀಡಿದರು.

ಶರದ ಜೋಶಿಯವರ ಶೇತಕರಿ ಸಂಘಟನಾ ಕೊನೆಯ ಗಳಿಗೆಯಲ್ಲಷ್ಟೇ ಎಡ, ಪ್ರಜಾಪ್ರಭುತ್ವ ಅಭ್ಯರ್ಥಿಗಳಿಗೆ ಬೆಂಬಲ ಘೋಷಿಸಿತು. ಅಲ್ಲದೆ ಅದರ ಬೆಂಬಲವೂ ಇಳಿದಂತೆ ಕಾಣುತ್ತಿದೆ.

ಮಾರ್ಚ್‌ನಲ್ಲೇ ಈ ರಾಜ್ಯದಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯಬೇಕು. ಲೋಕಸಭಾ ಚುನಾವಣೆಗಳಲ್ಲಿಯೇ ಬಿ.ಜೆ.ಪಿ.ಯೊಂದಿಗೆ ಸಖ್ಯತೆ ಬಯಸಿದ್ದ ಶಕ್ತಿಗಳು ಜನತಾದಳದಲ್ಲಿದ್ದವು. ಈಗಂತೂ ಅಂತವರ ಶಕ್ತಿ ಹೆಚ್ಚಿದಂತೆ ಕಾಣುತ್ತದೆ. ಆದರೆ ಶಿವಸೇನೆಯೊಂದೇ 288ರಲ್ಲಿ 200ಸ್ಥಾನದಲ್ಲಿ ಸ್ಪರ್ಧಿಸಬೇಕೆಂದಿರುವುದರಿಂದ ಬಿ.ಜೆ.ಪಿ. ಯೇತರ ವಿರೋಧ ಪಕ್ಷಗಳಿಗೆ ಈ ಕೂಟದಲ್ಲಿ ಹೆಚ್ಚೇನೂ ಸೀಟುಗಳು ದಕ್ಕಲಿಕ್ಕಿಲ್ಲ.

ಕಾನಪುರ: ಸಾಮೂಹಿಕ ಆಂದೋಲನವಾದ

ಉತ್ತರ ಪ್ರದೇಶದ ಕಾನಪುರದಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿ ಕಾಂ. ಸುಭಾಷಿಣಿ ಅಲಿಯವರ ವಿಜಯ ಮುಖ್ಯವಾಗಿ ಕಳೆದ ಐದು ವರ್ಷಗಳಲ್ಲಿ ಅಲ್ಲಿ ಪಕ್ಷ ಮತ್ತು ಪಕ್ಷದ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳು ನಗರದ ವಿವಿಧ ಜನವಿಭಾಗಗಳ ಹೋರಾಟಗಳ ನಡೆಸಿದ್ದು ಅಥವಾ ದುಡಿಯುವ ಜನಗಳ ಹೋರಾಟಗಳನ್ನು ನೆರವಿಗೆ ಧಾವಿಸಿದ್ದರ ಪರಿಣಾಮ. 1986ರಲ್ಲಿ ರಾಜ್ಯ ಸರಕಾರಿ ನೌಕರರ ದೀರ್ಘ ಮುಷ್ಕರಕ್ಕೆ ಬೆಂಬಲಿಸಿ ಬಂದ್, ಗಿರಣಿ, ಸೆಣಬು, ರಕ್ಷಣಾ, ಟ್ಯಾನರಿ ಕಾರ್ಮಿಕರ ಹೋರಾಟಗಳಿಗೆ ಬೆಂಬಲ, ಅಸಂಘಟಿತ ಕಾರ್ಮಿಕರ ಕನಿಷ್ಠ ಕೂಲಿ ಹೋರಾಟ ಎಲ್ಲಕ್ಕೂ ಮಿಗಿಲಾಗಿ ಇತ್ತೀಚೆಗೆ ಜವಳಿ ಕಾರ್ಮಿಕರಿಗೆ ಬೆಂಬಲವಾಗಿ ನಡೆದ ಐದು ದಿನಗಳ ಚಾರಿತ್ರಿಕ ರೈಲು ರೋಕೋ.

ಪಕ್ಷದ ಈ ಹೋರಾಟಗಳು ನಗರದಲ್ಲಿ ಕಳೆದ ಒಂದು ದಶಕದಿಂದ ಆಟಾಟೋಪ ನಡೆಸುತ್ತಿದ್ದ ಕೋಮುಶಕ್ತಿಗಳಿಗೂ ಪ್ರತ್ಯುತ್ತರ ನೀಡಿದೆ. 1980ರಲ್ಲಿ ಕಾಂಗ್ರೆಸ್(ಐ) ಹಾಗೂ ಆಗಿನ ಜನತಾ ಪಕ್ಷ ಎರಡೂ ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿದಾಗ ತಮಾಷೆಗಾಗಿ ಸ್ಪರ್ಧಿಸಿದ್ದ ಹಿಂದೂ ಅಭ್ಯರ್ಥಿಯೊಬ್ಬನಿಗೆ ಆತನೂ ನಿರೀಕ್ಷಿಸದಷ್ಟು 60ಸಾವಿರ ಮತಗಳು ದೊರೆತವು. 1984ರಲ್ಲಿ ಜನತಾಪಕ್ಷ ಮುಸ್ಲಿಂ ಮೂಲಭೂತವಾದಿಗಳನ್ನು ಒಲೈಸಲು ಸೈಯದ್ ಶಹಾಬುದ್ದೀನ್‌ರನ್ನು ನಿಲ್ಲಿಸಿತು. ಕಾಂಗ್ರೆಸ್(ಐ) ಅಭ್ಯರ್ಥಿ ನರೇಶ ಚಂದ್ರ ಚತುರ್ವೇದಿ ಸಿಖ್-ವಿರೋಧಿ ಘೋಷಣೆಗಳೊಂದಿಗೆ, ಪಕ್ಕಾ ಹಿಂದೂ ಕೋಮುವಾದಿ ವೇದಿಕೆಯಿಂದ ಸ್ಪರ್ಧಿಸಿದರು. ಕೊನೆಯಗಳಿಗೆಯಲ್ಲಿ ಬಿ.ಜೆ.ಪಿ. ತನ್ನ ಮತಗಳನ್ನು ಕಾಂಗ್ರೆಸ್(ಐ) ಈಬಾರಿ ತನ್ನ ಸೋಲು ಖಚಿತವಾದ ಮೇಲೆ ಬಿ.ಜೆ.ಪಿ.ಗೆ ಮತನೀಡಬೇಕೆಂದು ಮನವಿ ಮಾಡಿಕೊಂಡಿತು. ಬಿ.ಜೆ.ಪಿ.ಯಂತೂ ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ತನ್ನ ಕೋಮುವಾದಿ ಸ್ವರೂಪವನ್ನು ಯಾರಿಗೂ ಸಂಶಯಕ್ಕೆಡೆಯಿಲ್ಲದಂತೆ ತೋರಿಸಿಕೊಟ್ಟಿತು. ತ್ರಿಶೂಲ ಹಿಡಿದು ನೃತ್ಯ ಮಾಡುವವರ ಮೆರವಣಿಗೆಯನ್ನು ನಡೆಸಿತು. ಸಿ.ಪಿ.ಐ.(ಎಂ) ಅಭ್ಯರ್ಥಿ ಮುಸ್ಲಿಂ ಅಭ್ಯರ್ಥಿಯೆಂದು ಚಿತ್ರಿಸಲು ಪ್ರಯತ್ನಿಸಿತು. ಚುನಾವಣೆಗೆ "ಅಲಿ ಮತ್ತು ಭಜರಂಗಬಲಿ ನಡುವಿನ ಚುನಾವಣೆ" ಎಂದಿತು. ರಾಮಜನ್ಮಭೂಮಿ ಸ್ಥಳದಲ್ಲಿ ಶೌಚಾಲಯ ಕಟ್ಟಬೇಕೆಂದು ಹೇಳಿರುವರೆಂದು ಅಪಪ್ರಚಾರ ನಡೆಸಿತು. ಫಲವೆಂದರೆ ಸ್ವಂತ ನೆಲೆಯನ್ನೇ ಸ್ವಲ್ಪ ಮಟ್ಟಿಗೆ ಅದು ಕಳಕೊಂಡಿತು.

ಕಾನಪುರದಲ್ಲಿ ಪಕ್ಷದ ಸಂಘಟನೆ ಈ ಚುನಾವಣಾ ಹೋರಾಟ ಎದುರಿಸುವಷ್ಟು ಶಕ್ತಿಶಾಲಿಯಾಗಿರಲಿಲ್ಲ. ಆದರೂ ಈ ಸವಾಲನ್ನು ಸ್ವೀಕರಿಸಿ ಯಶಸ್ವಿಯಾಗಿ ಪೂರ್ಣಗೊಳಿಸಿತು.

ಒಟ್ಟಿನಲ್ಲಿ ಕಾನಪುರದಲ್ಲಿ ಸಿ.ಪಿ.ಐ.(ಎಂ) ಪ್ರಚಾರ ಕೇವಲ ಮತ ಪಡೆಯುವ ಚುನಾವಣಾ ಪ್ರಚಾರವಾಗಿರಲಿಲ್ಲ. ಅಲ್ಲಿ ಎತ್ತಿದ ಪ್ರಶ್ನೆಗಳು, ಭಾಗವಹಿಸಿದ ಜನರ ದೃಷ್ಟಿಯಿಂದ ನೋಡಿದರೆ ಅದೊಂದು ಆಂದೋಲನದ ಸ್ವರೂಪವನ್ನೇ ಪಡೆಯಿತು.

ಬಿಹಾರ: ತೀವ್ರ ಕಾಂಗ್ರೆ-ವಿರೋಧಿ ಭಾವನೆ

ರಾಮಶಿಲಾ ಪೂಜೆ, ಶಿಲಾನ್ಯಾಸ ಹಾಗೂ ಭಾಗಲ್‌ಪುರ ಮುಂತಾದ 30 ಜಿಲ್ಲೆಗಳ ವಿವಿಧೆಡೆ ತೀವ್ರ ಕೋಮು ಗಲಭೆಗಳ ಹಿನ್ನೆಲೆಯಲ್ಲಿ ಬಿಹಾರದಲ್ಲಿ ಚುನಾವಣೆ ನಡೆಯಿತು. ರಾಮಶಿಲಾಪೂಜೆ ಈ ರಾಜ್ಯದ ಸುಮಾರು ಎಲ್ಲಾ ಹಳ್ಳಿಗಳಲ್ಲಿ ನಡೆದಿತ್ತು. ಬಿ.ಜೆ.ಪಿ. ಮತ್ತು ಅದರ ಕೋಮುವಾದಿ ಸಂಘಟನೆಗಳು ಹಿಂದೂ ಧಾರ್ಮಿಕ ಭಾವನೆಗಳ ಸಂಪೂರ್ಣ ದುರ್ಲಾಭ ಪಡೆಯಲು ಪ್ರಯತ್ನಿಸಿದವು. ಧಾರ್ಮಿಕ ಸ್ಥಳಗಳನ್ನೇ ತಮ್ಮ ಚುನಾವಣಾ ಕಚೇರಿಯಾಗಿಸಿ ಕೊಂಡವು ಕೂಡಾ. ಪ್ರತ್ಯೇಕ ವನಾಚಲ ರಾಜ್ಯದ ಬೇಡಿಕೆಯೆತ್ತಿ ಆದಿವಾಸಿಗಳ ಪಡುವೆಯೂ ನೆಲೆ ಸ್ಥಾಪಿಸಲು ಪ್ರಯತ್ನಿಸಿದರು ಅವರ ಮುಖ್ಯ ಚುನಾವಣಾ ಪ್ರಚಾರ ಪಶ್ಚಿಮಬಂಗಾಳದ ಎಡರಂಗ ಹಾಗೂ ಜ್ಯೋತಿ ಬಸುರವರ ವಿರುದ್ಧ ವಿಷಕಾರುವುದಾಗಿತ್ತು.

ಈ ರಾಜ್ಯದಲ್ಲಿ ಕಾಂಗ್ರೆ-ವಿರೋಧಿ ಭಾವನೆ ಬಲವಾಗಿತ್ತು. ಕೇವಲ 4ಸ್ಥಾನಗಳಲ್ಲಿ ಗೆದ್ದ ಈ ಪಕ್ಷ 16ಸ್ಥಾನಗಳಲ್ಲಿ ಮೂರನೇ ಅಥವಾ ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು.

54 ರಲ್ಲಿ 40 ಸ್ಥಾನಗಳಲ್ಲಿ ಜನತಾದಳ (31), ಸಿ.ಪಿ.ಐ.(8) ಹಾಗೂ ಸಿ.ಪಿ.ಐ.(ಎಂ) (1) ನಡುವೆ ಹೊಂದಾಣಿಕೆಯಾಯಿತು. ಸಿ.ಪಿ.ಐ(ಎಂ) ಹಾಗೂ ಸಿ.ಪಿ.ಐ. ಪರಸ್ಪರರ ಅಭ್ಯರ್ಥಿಗಳನ್ನು ಬೆಂಬಲಿಸಿದರಲ್ಲದೆ ಧನಬಾದ್ ಕ್ಷೇತ್ರದಿಂದ ಎ.ಕೆ.ರಾಯ್‌ರವರನ್ನು ಬೆಂಬಲಿಸಿದ್ದವು. ಎ.ಕೆ.ರಾಯ್ ಈಗ ಲೋಕಸಭೆಯಲ್ಲಿ ಎಡಪಕ್ಷಗಳ ಜತೆಗಿದ್ದು ರಾಷ್ಟ್ರೀಯ ರಂಗ ಸರಕಾರಕ್ಕೆ ಬೆಂಬಲ ಘೋಷಿಸಿದ್ದಾರೆ. ಜನತಾದಳ ಒಟ್ಟು 31 ಸ್ಥಾನಗಳನ್ನು, ಸಿ.ಪಿ.ಐ. 4 ಹಾಗೂ ಸಿ.ಪಿ.ಐ(ಎಂ) 1ಸ್ಥಾನ (ನವಾಡಾ) ಗಳಿಸಿದವು.

ಸಿ.ಪಿ.ಐ.(ಎಂ) ಸ್ಪರ್ಧಿಸಿದ್ದ ಇನ್ನೊಂದು ಸ್ಥಾನ ಪೂರ್ಣಿಯಾದಲ್ಲಿ ಜನತಾದಳದೊಡನೆ ಒಪ್ಪಂದ ಸಾಧ್ಯವಾಗಿರಲಿಲ್ಲ. ಅಲ್ಲಿ ಜನತಾದಳದ ಅಭ್ಯರ್ಥಿ ಸಿ.ಪಿ.ಐ.(ಎಂ) ಅಭ್ಯರ್ಥಿಗಿಂತ 55ಸಾವಿರ ಹೆಚ್ಚು ಮತಪಡೆದು ಗೆದ್ದರು.

ಇನ್ನೊಂದು ಸ್ಥಾನದಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸುವ ಸಾಧ್ಯತೆಯಿತ್ತು. ಆದರೆ ಎಡ, ಜಾತ್ಯತೀತ ಶಕ್ತಿಗಳ ಐಕ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸ್ಪರ್ಧಿಸಲಿಲ್ಲ.

ನವಾಡಾದಲ್ಲಿ 1980 ಹಾಗೂ 1984 ರಲ್ಲಿ ಸ್ಪರ್ಧಿಸಿದ್ದ ಇನ್ನೊಂದು ಕ್ಷೇತ್ರ ಕಾಂಗ್ರೆಸ್‌ನ ಯಾದವ್‌ರವರು ಎರಡನೇ ಸ್ಥಾನ ಪಡೆದಿತ್ತು.

ಬರ್ಬರ ಕೃತ್ಯಗಳು

ಪುಟ 1 ರಿಂದ.

ಒಬ್ಬರು ಬಳ್ಳಾರಿಯಲ್ಲಿ, ಒಬ್ಬರು ಪೋಲೀಸ್ ಲಾಕಪ್‌ನಲ್ಲಿ ಸತ್ತರು. ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಪೋಲೀಸ್ ದಬ್ಬಾಳಿಕೆ ನಡೆಯಿತು. ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕುಗಳಲ್ಲಿ ಸರಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡಲು ಹೊರಟಿದ್ದ ನೂರಾರು ಕೃಷಿ ಕೂಲಿಕಾರರ ಮೇಲೆ ಭೀಕರ ಬೆತ್ತ ಪ್ರಹಾರ, ಅಶ್ರುವಾಯು ಪ್ರಯೋಗವನ್ನು ನಡೆಸಿದ ಪೋಲೀಸರು ಆ ಜನರ ಸುಮಾರು ಮುನ್ನೂರು ಬೈಸಿಕಲ್ಲುಗಳನ್ನು, ಎರಡು ಮೊಪೆಡ್‌ಗಳನ್ನು, ಪಾತ್ರೆಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ದಬ್ಬಾಳಿಕೆಗೆ ಗುರಿಯಾದವರಲ್ಲಿ ಬಹು ಮಂದಿ ಹರಿಜನರು. ಬೆಂಗಳೂರಿನಲ್ಲಿ ಚಳುವಳಿ ನಡೆಸುತ್ತಿದ್ದ ಇಂಜನೀಯರಿಂಗ್ ವಿದ್ಯಾರ್ಥಿಗಳ ಮೇಲೆ ಪೋಲೀಸರು ಬೆತ್ತಪ್ರಹಾರ ಮಾಡಿದರು.

ಹಾಸನ ಜಿಲ್ಲೆಯ ಹಲವೆಡೆ, ಕೋಲಾರ ಜಿಲ್ಲೆಯ ಶಿಡ್ಲಘಟ್ಟ, ಚಿಂತಾಮಣಿಗಳ ತಾಲ್ಲೂಕುಗಳಲ್ಲಿ ಹಾಗೂ ರಾಜ್ಯದ ತಮ್ಮ ಪಕ್ಷಕ್ಕೆ ಮತವೀಯಲಿಲ್ಲವೆಂಬ ಕಾರಣಕ್ಕೆ ಪ್ರತೀಕಾರ ತೀರಿಸಲು ಕಾಂಗ್ರೆಸ್ (ಐ) ಪಕ್ಷದ ಗೂಂಡಾಗಳು ವಿರೋಧ ಪಕ್ಷಗಳ ಹಿಂಬಾಲಕರ ಮೇಲೆ ದಬ್ಬಾಳಿಕೆ ಮತ್ತು ಅತ್ಯಾಚಾರಗಳನ್ನು ನಡೆಸಿದ್ದಾರೆ. ಸರ್ಕಾರವು ಆ ಕಡೆ ಗಮನ ಹರಿಸದೆ ಲಕ್ಷಾಂತರ ಮಹಿಳಾ ಕಾರ್ಮಿಕರ ಜೀವನದ ಬಗ್ಗೆ ನಿರ್ಲಕ್ಷ್ಯ ತಾಳಿದೆ.

ತನ್ನ ಆಡಳಿತದ ಈ ಅಲ್ಪ ಕಾಲಾವಧಿಯಲ್ಲಿ ಕಾಂಗ್ರೆಸ್ (ಐ) ಸರ್ಕಾರವು ನಡೆಸಿರುವ ಪೋಲೀಸರ ದಬ್ಬಾಳಿಕೆಯನ್ನು, ರೈತರ, ಕೃಷಿ ಕೂಲಿಕಾರರ, ವಿದ್ಯಾರ್ಥಿಗಳು ಮತ್ತು ಇತರ ಜನರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಮತ್ತು ಕಾಂಗ್ರೆಸ್ (ಐ) ಸರ್ಕಾರದ ಈ ದುಷ್ಟ ಆಡಳಿತದ ವಿರುದ್ಧವಾಗಿ ಎಚ್ಚರಗೊಳ್ಳಬೇಕೆಂದು ರಾಜ್ಯದ ಜನತೆಗೆ ಕರೆ ಕೊಡುತ್ತದೆ.

ನಗರ ಸಭಾ ಚುನಾವಣೆಗಳು :

ಮುಂಬರುವ ಮಹಾನಗರ ಪಾಲಿಕೆ, ನಗರ ಸಭೆ ಹಾಗೂ ಪುರಸಭೆ ಚುನಾವಣೆಗಳಲ್ಲಿ ಕೋಮುವಾದಿಗಳನ್ನು ಸೋಲಿಸಬೇಕೆಂದು, ಎಡ,ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಪಕ್ಷ ಹಾಗೂ ವ್ಯಕ್ತಿಗಳನ್ನು ಬೆಂಬಲಿಸಿ ಗೆಲ್ಲಿಸಬೇಕೆಂದು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಕರ್ನಾಟಕದ ಜನತೆಗೆ ಕರೆ ಕೊಡುತ್ತದೆ.

ಅಧಿಕಾರ ಕೇಂದ್ರೀಕರಣದ ಕಾಂಗ್ರೆ ಮಾದರಿ.

ಕಾಂಗ್ರೆಸ್ (ಐ) ಸರ್ಕಾರವು ಸ್ಥಳೀಯ ಸಂಸ್ಥೆಗಳ ಆಡಳಿತದ ಬಗ್ಗೆ ಅನುಸರಿಸುತ್ತಿರುವ ನೀತಿಯು ರಾಜ್ಯದ ಜನರಲ್ಲಿ ವಿಸ್ಮಯವನ್ನುಂಟುಮಾಡಿದೆ. ಕಾಂಗ್ರೆಸ್ (ಐ) ತನ್ನ ಚುನಾವಣಾ ಘೋಷಣೆಯಲ್ಲಿ ಪಂಚಾಯ್ತಿ ರಾಜ್ ಮತ್ತು ನಗರಗಳ ಆಡಳಿತಗಳಲ್ಲಿ ಹೆಚ್ಚು ಅಧಿಕಾರವನ್ನು ಜನತೆಗೆ ಕೊಡುವ ಆಶ್ವಾಸನೆಯನ್ನು ಕೊಟ್ಟ ಕಾಂಗ್ರೆಸ್ (ಐ) ಪಕ್ಷವು ರಾಜ್ಯದಲ್ಲಿ ಅಧಿಕಾರದ ವಿಕೇಂದ್ರೀಕರಣದ ವಿರುದ್ಧವಾಗಿ ವರ್ತಿಸುತ್ತಿದೆ. ಜಿಲ್ಲಾ ಪರಿಷತ್‌ಗಳು ಹಿಂದೆ ನೇಮಕ ಮಾಡಿದ ಸಾವಿರಾರು ಅಧ್ಯಾಪಕರ ಮಂಡಲ ಪಂಚಾಯತ್ ನೌಕರರ ನೇಮಕಾತಿಯನ್ನು ರದ್ದು ಮಾಡುವ ಬಗ್ಗೆ ಸಚಿವ ಸಂಪುಟವು ಕೈಗೊಂಡ ತೀರ್ಮಾನ, ಗ್ರಾಮಾಭಿವೃದ್ಧಿ ಮಂತ್ರಿ ಶ್ರೀ ಬಿ.ಬಸವಲಿಂಗಪ್ಪನವರು ಜಿಲ್ಲಾ ಪರಿಷತ್ ಅಧ್ಯಕ್ಷರ ಅಧಿಕಾರದ ಬಗ್ಗೆ ಮಾಡಿದ ಪ್ರಸ್ತಾಪ, ಅದನ್ನು ಸಮರ್ಥಿಸಿ ಪ್ರದೇಶ ಕಾಂಗ್ರೆಸ್ (ಐ) ಅಧ್ಯಕ್ಷ ಆಸ್ಕರ್ ಫರ್ನಾಂಡಿಸ್ ಕೊಟ್ಟ ಹೇಳಿಕೆ, ನಾಡ ಕಛೇರಿಗಳನ್ನು ಮುಚ್ಚುವ ಬೆದರಿಕೆ ಇವುಗಳು ಕಾಂಗ್ರೆಸ್ (ಐ) ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಹೇಳುತ್ತಿದ್ದುದು ಎಷ್ಟು ಹಸಿಸುಳ್ಳು, ಕಪಟ ಎಂಬುದನ್ನು ತೋರಿಸುತ್ತವೆ.

ಬೀಡಿಕಾರ್ಮಿಕರ ಸಂಕಷ್ಟ

ಕಾಂಗ್ರೆಸ್ (ಐ) ಅಧಿಕಾರಕ್ಕೆ ಬಂದ ನಂತರ ಬೀಡಿ ಕೈಗಾರಿಕೆಯ ಬಂಡವಾಳಗಾರರು ಬೀಡಿ ಕಾರ್ಮಿಕರಿಗೆ ವಾರದಲ್ಲಿ ಎರಡು ದಿವಸ ಮಾತ್ರ ಕೆಲಸ ಕೊಟ್ಟು ಅವರನ್ನು ಅತೀವ ಕಷ್ಟಕ್ಕೆ ಗುರಿ ಮಾಡಿದ್ದಾರೆ. ಬೀಡಿ ಕಾರ್ಮಿಕರಲ್ಲಿ ಮುಕ್ಕಾಲು ಪಾಲಿಗಿಂತಲೂ ಹೆಚ್ಚು ಮಹಿಳೆಯರಿದ್ದಾರೆ. ಕಾಂಗ್ರೆಸ್ (ಐ)

ಬೀಡಿ ಕಾರ್ಮಿಕರ ಸಮಸ್ಯೆ ಸಿ.ಐ.ಟಿಯು ಒತ್ತಾಯ

ಕಳೆದ ಎರಡು ತಿಂಗಳುಗಳಿಂದ ವಾರಕ್ಕೆ ಬರೀ ಎರಡು ದಿನಗಳ ಕೆಲಸ ಸಿಗುತ್ತಿರುವ ದ.ಕ. ಜಿಲ್ಲೆಯ ಮೂರು ಲಕ್ಷಕ್ಕಿಂತಲೂ ಹೆಚ್ಚು ಬೀಡಿಕಾರ್ಮಿಕರು ಉಪವಾಸದ ದವಡೆಗೆ ಸಿಲುಕಿದ್ದಾರೆ. ಮೊದಲೇ ಅತ್ಯಂತ ಕಡಿಮೆ ಕೂಲಿಯಲ್ಲಿ ತೀರಾ ನಿಕೃಷ್ಟ ಮಟ್ಟದ ಜೀವನ ಸಾಗಿಸುತ್ತಿರುವ ಈ ಬಡ ಕಾರ್ಮಿಕರು ತಮ್ಮ ದುಡಿಮೆಯ ಅವಕಾಶದಿಂದಲೇ ವಂಚಿತರಾಗಿ ಹತಾಶರಾಗಿದ್ದಾರೆ. ಬೀಡಿ ಕೈಗಾರಿಕೆಯನ್ನೇ ಅವಲಂಬಿಸಿರುವ ಲಕ್ಷಗಟ್ಟಲೆ ಮನೆಗಳಲ್ಲಿ ಒಪ್ಪೊತ್ತಿನ ಗಂಜಿ ಬೇಯಿಸುವ ಸ್ಥಿತಿಯೂ ಮಾಯವಾಗುತ್ತಿದೆ. ಜಿಲ್ಲೆಯ ಅನೇಕ ಸಣ್ಣ ಪಟ್ಟಣಗಳ ದೈನಂದಿನದ ವ್ಯಾಪಾರ ವ್ಯವಹಾರಗಳೂ ಬೀಡಿ ಕೈಗಾರಿಕೆಯನ್ನು ಅವಲಂಬಿಸಿರುವುದರಿಂದ ಈ ಪಟ್ಟಣಗಳ ವ್ಯಾಪಾರ ಚಟುವಟಿಕೆಗಳೂ ಸ್ಥಗಿತವಾಗುವ ಸ್ಥಿತಿಯಲ್ಲಿವೆ.

ಲಕ್ಷಗಟ್ಟಲೆ ಬೀಡಿ ಕಾರ್ಮಿಕರ ಕುಟುಂಬಗಳು ಉಪವಾಸದ ಸ್ಥಿತಿಯಲ್ಲಿರುವಾಗ ರಾಜ್ಯದ ಕಾಂಗ್ರೆಸ್? (ಐ) ಸರಕಾರವು ಈ ಭೀಕರ ಸಮಸ್ಯೆಯನ್ನು ಪೂರ್ತಿಯಾಗಿ ನಿರ್ಲಕ್ಷಿಸಿರುವುದನ್ನು ತಾ॥ 14-1-1990 ರಂದು ಜರಗಿದ ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ಸಭೆಯು ಬಲವಾಗಿ ಖಂಡಿಸಿದೆ.

ಈ ಪ್ರಶ್ನೆಯಲ್ಲಿ ತಕ್ಷಣ ಮಧ್ಯಪ್ರವೇಶ ಮಾಡಬೇಕೆಂದು ರಾಜ್ಯ ಕಾರ್ಮಿಕ ಸಚಿವರಿಗೆ ಸಿಐಟಿಯು ಜಿಲ್ಲಾ ಸಮಿತಿಯು ತಂತಿ ಕಳುಹಿಸಿದೆ. ಬೀಡಿ ಎಲೆ ಅಭಾವದ ಕುರಿತು ಕೂಡಲೇ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿ ಸಮಿತಿಯು ಕೇಂದ್ರ ಕಾರ್ಮಿಕ ಸಚಿವರಿಗೆ ತಂತಿ ಕಳುಹಿಸಿದೆ.

ಈ ನಿಟ್ಟನಲ್ಲಿ ಸರಕಾರವನ್ನು ಸಾಮೂಹಿಕವಾಗಿ ಒತ್ತಾಯಿಸಲು ಇದೇ ಫೆಬ್ರವರಿ 2 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಕಾರ್ಮಿಕರ ಬೃಹತ್ ಪ್ರದರ್ಶನ ನಡೆಸಲು ತೀರ್ಮಾನಿಸಲಾಗಿದೆ. ಸರಕಾರವು ತಕ್ಷಣ ಮಧ್ಯಪ್ರವೇಶ ಮಾಡಿ ಸಮಸ್ಯೆಯನ್ನು ಬಗೆ ಹರಿಸದಿದ್ದರೆ ಜಿಲ್ಲೆಯಾದ್ಯಂತ ತೀವ್ರ ಹೋರಾಟಕ್ಕೆ ಎಲ್ಲಾ ವಿಭಾಗಗಳ ಕಾರ್ಮಿಕರೂ ಸಿದ್ಧರಾಗಬೇಕೆಂದು ಸಿಐಟಿಯು ಜಿಲ್ಲಾ ಸಮಿತಿ ಕರೆ ನೀಡುತ್ತದೆ ಎಂದು ಸಿ.ಐ.ಟಿ.ಯು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾ॥ ಬಿ.ಮಾದವರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಂಗಳೂರು

ಜಮ್ಮು - ಕಾಶ್ಮೀರ ರಾಜ್ಯಪಾಲರ ನೇಮಕ ಎಡಪಕ್ಷಗಳ ವಿರೋಧ

ನ್ಯಾಷನಲ್ ಕಾನ್‌ಫರೆನ್ಸ್ ಜಮ್ಮು - ಕಾಶ್ಮೀರ ರಾಜ್ಯದಲ್ಲಿ ಜನತೆಯ ನ... ಬೆಂಬಲ ಗಳಿಸಿರುವ ಏಕಮಾತ್ರ ಪಕ್ಷವಾದ್ದರಿಂದ ಪಾಕಿಸ್ತಾನೀ ಪ್ರೇರಿತ ಪ್ರತ್ಯೇಕತಾವಾ... ಶಕ್ತಿಗಳನ್ನೆದುರಿಸುವಲ್ಲಿ ಅದರ ಸಹಕಾರ ಗಳಿಸುವುದು ಅಗತ್ಯ. ಅದರ ಬ... ಜಗನ್ಮೋಹನರವರನ್ನು ರಾಜ್ಯಪಾಲರನ್ನಾಗಿ ನೇಮಿಸಿದರ ಪರಿಣಾಮವಾಗಿ ಫಾ... ಅಬ್ದುಲ್ಲಾ ಸರಕಾರ ರಾಜಿನಾಮೆ ನೀಡುವಂತಾದದ್ದು ರಾಷ್ಟ್ರೀಯ ರಂಗದ ಸರಕಾ... ತಪ್ಪು ಕ್ರಮ ಎಂದು ಎಡಪಕ್ಷಗಳ ನೀಡಿದ ಒಂದು ಹೇಳಿಕೆಯಲ್ಲಿ ತಿಳಿಸಿವೆ. 1984 ರಲ್ಲಿ ರಾಜ್ಯಪಾಲರಾಗಿದ್ದ ಇದೇ ವ್ಯಕ್ತಿ ಆಗ ಕಾಂಗ್ರೆಸ ಸರಕಾರದ ಗೊಂಬೆಯ... ವರ್ತಿಸಿ ಜಿ.ಎಂ.ಶಹಾ ರ ಅಲ್ಪ ಮತದ ಸರಕಾರವನ್ನು ಸ್ಥಾಪಿಸಲು ಕಾರಣರಾದವ... ನೆನಪಿಸಿಕೊಟ್ಟಿರುವ ಹೇಳಿಕೆ, ಈಗ ಫಾರುಕ್ ಅಬ್ದುಲ್ಲಾರ ವಿರೋಧವನ್ನು ಕಡೆಗ... ಅವರನ್ನು ಮತ್ತೆ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ ಎಂದು ಹೇಳಿಕೆ ತಿಳಿ... ಇದು ಹಿಂದಿನ ವಿರೋಧ ಪಕ್ಷಗಳು ಬೆಂಬಲಿಸಿದ ಸರ್ಕಾರಿಯಾ ಆಯೋ... ಶಿಫಾರಸುಗಳಿಗೆ ವ್ಯತಿರಿಕ್ತ ವರ್ತನೆ ಎಂದೂ ಹೇಳಿಕೆ ತಿಳಿಸಿದೆ.

ಇಂತಹ ವಿಷಯಗಳಲ್ಲಿ ಪಕ್ಷಪಾತ ಪೂರ್ಣವಾಗಿ ವರ್ತಿಸಿದ ತಪ್ಪು ಕ... ಗಳಿಂದಾಗಿ ಕಾಂಗ್ರೆ ಪರಿಸ್ಥಿತಿ ಮತ್ತಷ್ಟು ಹದಗೆಡುವಂತೆ ಮಾಡಿತ್ತು. ಇದರಿ... ರಾಷ್ಟ್ರೀಯ ರಂಗ ಸರಕಾರ ಪಾಠ ಕಲಿಯಬೇಕು ಎಂದೂ ಎಡಪಕ್ಷಗಳು ಹೇಳಿವೆ.

ಫಾರುಕ್ ಸರಕಾರದ ರಾಜಿನಾಮೆಯಿಂದ ರಾಜ್ಯಪಾಲ ಆಳ್ವಿಕೆ ಮುಂ... ವರೆಯುತ್ತದೆ. ಅಂದರೆ ಇಂತಹ ಪ್ರಮುಖ ಸಮಸ್ಯೆಯನ್ನು ಕೇವಲ ಆಡ... ಕ್ರಮಗಳಿಂದ ಮಾತ್ರವೇ ಎದುರಿಸಿದಂತಾಗುತ್ತದೆ. ಇದರಿಂದ ಪ್ರತ್ಯೇಕತಾವಾದಿ ಶಕ್ತಿಗ... ಈ ಸಮಸ್ಯೆಯನ್ನು ಅಂತರಾಷ್ಟ್ರೀಯ ಸಮಸ್ಯೆಯಾಗಿ ಮಾಡಲು ಅವಕಾಶ ನಿ... ದಂತಾಗಿದೆ ಎಂದು ಹೇಳಿಕೆ ಅಭಿಪ್ರಾಯಪಟ್ಟಿದೆ.

ಕಮ್ಯೂನಿಸ್ಟರು ಕ್ರಾಂತಿಕಾರಿಗ...

ಪುಟ 4 ರಿಂದ

ಅದು ಕ್ರಾಂತಿಕಾರಿ ಬದಲಾವಣೆ ತಂದು. ಬದಲಿಗೆ ಪ್ರತಿ-ಕ್ರಾಂತಿಯನ್ನು ಘೋಷಿಸಬಹುದಷ್ಟೆ.

ಕ್ಯೂಬಾ ಬಹಳ ದಿನ ಪ್ರತಿರೋಧಿಸಿ ನಿಲ್ಲಲು ಸಾಧ್ಯವಿಲ್ಲ, ಸಮಾಜವಾದಿ ಸಮುದಾಯದ ಹೊಸ ಸನ್ನಿವೇಶ ಖಂಡಿತವಾಗಿಯೂ ನಮ್ಮ ಕ್ರಾಂತಿ ಮೊಣಕಾಲೂರುವಂತೆ ಮಾಡಲು ನೆರವಾಗುತ್ತದೆ ಎಂದು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಯೋಚಿಸುತ್ತಿದ್ದಾರೆ.

ಕ್ಯೂಬಾ ಕೆಂಪು ಸೇನೆಯ ವಿಜಯಯಾತ್ರೆಯ ಹಿನ್ನೆಲೆಯಲ್ಲಿ ಸಮಾಜವಾದ ಪಡೆದು ದೇಶವೇನಲ್ಲ. ಒಂದು ನ್ಯಾಯಯುತ ವೀರ ಹೋರಾಟದಲ್ಲಿ ನಮ್ಮ ಜನ ನಮ್ಮ ಸಮಾಜವಾದಿ ಸಮಾಜವನ್ನು ಕಟ್ಟಿದ್ದಾರೆ. ನಮ್ಮ ಕ್ರಾಂತಿಯನ್ನು ನಾಶಮಾಡಲು ಯತ್ನಿಸಿದ ಭೂಮಿಯ ಮೇಲಿನ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯದ ವಿರುದ್ಧ ಮೂವತ್ತು ವರ್ಷ ದೃಢವಾಗಿ ನಿಂತಿರುವುದು ನಮ್ಮ ರಾಜಕೀಯ, ನೈತಿಕ ಬಲಕ್ಕೆ ಸಾಕ್ಷಿ.

ನಮ್ಮ ದೇಶದ ಮುಖಂಡತ್ವದಲ್ಲಿರುವವರು ತಮ್ಮ ಜವಾಬ್ದಾರಿಗೆ ಹೊಸಬರಾಗಿರುವ ನಿನ್ನೆ - ಮೊನ್ನೆ ಅಧಿಕಾರದ ಸ್ಥಾನ ಪಡೆದ ಅಯೋಗ್ಯ ಧಂಬಾಚಾರಿ ಮಂದಿಗಳಲ್ಲ. ಸಮರದ ಬೆಂಕಿಯಲ್ಲಿ ಸ್ಫುಟಗೊಂಡ ನಮ್ಮ ಪಕ್ಷದಲ್ಲಿ, ನಮ್ಮ ಅದ್ಭುತ ಮುಂಚು... ಸಂಘಟನೆಯಲ್ಲಿ, ಯುವ ಜ... ಸಂಘಟನೆಯಲ್ಲಿ, ನಮ್ಮ ಶಕ್ತಿಶಾ... ಸಾಮೂಹಿಕ ಸಂಘಟನೆಗಳಲ್ಲಿ, ನ... ಕ್ರಾಂತಿಕಾರಿ ಸಶಸ್ತ್ರ ಸೇನಾಪಡೆಗಳ... ಮತ್ತು ನಮ್ಮ ಅಂತರಿಕ ವ್ಯವಹಾರ... ಮಂತ್ರಾಲಯದಲ್ಲಿ ಕ್ಯೂಬನ್ನರ ಮೂ... ತಲೆ ಮಾರಿನ ಮಹಿಳೆಯ... ಪುರುಷರು ಜವಾಬ್ದಾರಿ ಸ್ಥಾನಗಳ... ವಹಿಸಿಕೊಂಡಿದ್ದಾರೆ.

ಕ್ಯೂಬಾದಲ್ಲಿ ಕ್ರಾಂತಿ ಸಮಾಜವಾ... ಮತ್ತು ಸ್ವಾತಂತ್ರ್ಯ ಪರಸ್ಪರ ವಿಸರ್ಜಿಸಲಾಗ... ರೀತಿಯಲ್ಲಿ ಬೆಸೆದಿವೆ.......

ನಾವು ಕ್ಯೂಬಾದ ಕಮ್ಯುನಿಸ್ಟ್... ಎಂದೂ ಕ್ರಾಂತಿಕಾರಿ ಆಂದೋಲನ ತ... ಚಾರಿತ್ರಿಕ ಸ್ಫೂರ್ತಿದಾಯಕ ಇತಿಹಾ... ದಾದ್ಯಂತ ರಕ್ಷಿಸಿಕೊಂಡು ಬಂದ ಬಾವು... ಗಳು, ನೀತಿಗಳು ನಮ್ಮ ಕಾವಲಿನಲ್ಲಿ... ಇರಬೇಕೆಂದು ಅಪೇಕ್ಷಿಸಿಲ್ಲ. ಆ... ವಿಶ್ವದ ಮೇಲೆ ಆಧಿಪತ್ಯ ಮೆರೆಸು... ಹಿಟ್ಲರನ ಕನಸುಗಳನ್ನು ಅಮೆರಿಕ... ಸಾಮ್ರಾಜ್ಯಶಾಹಿ ಸಾಧಿಸಿರುವ ಒಂ... ಜಗತ್ತಿನಲ್ಲಿ ಒಂದು ದಿನ ಸಮಾಜವಾದ... ಅಂತಿಮ ರಕ್ಷಕರಲ್ಲಿ ನಾವೊಬ್ಬರಾ... ಉಳಿಯುವ ಸ್ಥಿತಿ ಬಂದರೆ ನಾವು ... ಕೊತ್ತಳವನ್ನು ನಮ್ಮ ರಕ್ತದ ಕೊನೆ... ಹನಿಯುವರೆಗೂ ರಕ್ಷಿಸುತ್ತೇವೆ.

ಅಮಾನುಷ ದಾಳಿ

ಟ್ರಕ್‌ನಲ್ಲಿ ಕೊಂಡೊಯ್ದಿದ್ದಾಪುಟ 1 ರಿಂದ

ದಲಿತರ ಬಗ್ಗೆ ರಾಜ್ಯದ ರೈತರ ಬಗ್ಗೆ ಬರೀ ಆಶ್ವಾಸನೆಗಳನ್ನು ಚುನಾವಣೆಯಲ್ಲಿ ನೀಡಿದ ಕಾಂಗ್ರೆಸ್ ಪಕ್ಷ, ಅಧಿಕಾರಕ್ಕೆ ಬಂದಾಕ್ಷಣ ಅದರ ಹರಿಜನ ವಿರೋಧಿ ನೀತಿ ಬಯಲಾಗಿದೆ.

ಪ್ರಾಂತ ರೈತ ಸಂಘ ರಾಜ್ಯ ಸಮಿತಿಯು ದಲಿತರ ಮೇಲೆ ಮಾಡಿದ ಈ ಹೇಯ ಕೃತ್ಯವನ್ನು ಉಗ್ರವಾಗಿ ಖಂಡಿಸಿದೆ. ಈ ದೌರ್ಜನ್ಯಕ್ಕೆ ಕಾರಣವಾದ ಅಧಿಕಾರಿಗಳನ್ನು ಕೂಡಲೇ ಅಮಾನತ್ತುಗೊಳಿಸಿ. ಈ ದೌರ್ಜನ್ಯದ ಕುರಿತು ನ್ಯಾಯಾಂಗ ತನಿಖೆಯನ್ನು ನಡೆಸಲು ಒತ್ತಾಯಿಸಿದೆ. ಅರ್ಜಿ ಹಾಕಿದ ರೈತರಿಗೆ ಭೂಮಿ ಮಂಜೂರು ಮಾಡಲು ಕೂಡ ಒತ್ತಾಯಿಸಿದೆ.

ಈ ಬಗ್ಗೆ ದಿನಾಂಕ 17 1 89 ರಂದು ಭದ್ರಾವತಿಯಲ್ಲಿ ಪ್ರತಿಭಟನಾ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಪೋಲೀಸರ ಬೆದರಿಕೆಗೆ ಜಗ್ಗದೆ ನೂರಾರು ಭೂಹೀನರು, ಅದರಲ್ಲಿಯೂ ಮಹಿಳೆಯರು ಇದರಲ್ಲಿ ಭಾಗವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮಂಡಳಿ ಹಾಗೂ ಕೃಷಿಕೂಲಿಕಾರರ ರಾಜ್ಯಸಮಿತಿ ಇಡೀ ರಾಜ್ಯದ್ಯಾಂತ ಪ್ರತಿಭಟನಾ ಧರಣಿ ನಡೆಸಲು ಕರೆ ನೀಡಿದೆ.

ದಿಢೀರ ದೌರ್ಜನ್ಯ

ದಿನಾಂಕ 04-01-1990 ರಂದು ಮಧ್ಯಾಹ್ನ 500 ಕ್ಕೂ ಹೆಚ್ಚು ಪೋಲೀಸರು ಶಿವಮೊಗ್ಗ ಜಿಲ್ಲಾಧಿಕಾರಿ ಹಾಗೂ ಪೋಲೀಸ್ ಅಧಿಕಾರಿಗಳ ಸಮ್ಮುಖದಲ್ಲಿಯೇ ಯಾವ ಮುನ್ಸೂಚನೆಯಿಲ್ಲದೆ ಅಮಾನುಷವಾಗಿ ಲಾಠಿ ಚಾರ್ಜ್ ಮಾಡಲಾಯಿತು. ಟಿಯರ್ ಗ್ಯಾಸ್ ಬಳಸಲಾಯಿತು. ಮಕ್ಕಳು, ಹಾಗೂ ಮುದುಕರು ಹೊಡೆತಗಳಿಗೆ ಸಿಕ್ಕಿ ದಿನಾಗಿದ್ದಾರೆಂಬ ಮಾಹಿತಿ ಇನ್ನೂ ಸಿಕ್ಕಿಲ್ಲ. ಕಿಲೋ ಮೀಟರ್‌ಗಟ್ಟಲೆ ಬೆನ್ನಟ್ಟಿ ಥಳಿಸಲಾಗಿದೆ. ದೊಡ್ಡ ಸಂಖ್ಯೆಯಲ್ಲಿ ನೂರಾರು ಜನರಿಗೆ ತೀವ್ರ ಗಾಯಗಳಾಗಿವೆ. ಹಳ್ಳಿಗಳಲ್ಲಿ, ಭದ್ರಾವತಿ ನಗರದಲ್ಲಿ ಪೋಲೀಸರ ಅಟ್ಟಹಾಸ ನಡೆಸಲಾಗುತ್ತಿದೆ.

ಸಂಜೆ 5-00 ಘಂಟೆಯ ನಂತರ ಸ್ಥಳ ಬಿಟ್ಟು ಮಾಡದ ಚಳುವಳಿಯ ಮುಖಂಡರನ್ನು ಅಮಾನುಷವಾಗಿ ಥಳಿಸಿ ಭದ್ರಾವತಿ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಸುದ್ದಿ ತಿಳಿದ ರೈತರು ದೊಡ್ಡ ಸಂಖ್ಯೆಯಲ್ಲಿ ದವಾಖಾನೆಗೆ ಬಂದು ನೆರೆದರು. ಅಲ್ಲಿಯೂ ಸಹ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿಯೇ ಪೋಲೀಸರು ಬಂದು ಲಾಠಿ ಚಾರ್ಜ್ ನಡೆಸಿದರು. ಮುಖಂಡರನ್ನು ಆಸ್ಪತ್ರೆಯಲ್ಲಿ ಜಿಲ್ಲಾಧಿಕಾರಿಯವರೇ ಹೀಯಾಳಿಸಿ ನಿಮಗೆ ಭೂಮಿ ಬೇಕೆ ಎಂದು ಕಪಾಳಕ್ಕೆ ಥಳಿಸಿದರು. ಈಗ ಮುಖಂಡರು ಹಾಗೂ ರೈತರನ್ನು ಪೋಲಿಸರು ಒಯ್ದಿದ್ದಾರೆ.

ಈ ಪ್ರದೇಶವನ್ನು ಭಯಾನಕಗೊಳಿಸಿ ಗುಡಿಸಲುಗಳನ್ನೆಲ್ಲಾ ಸುಟ್ಟು ಹಾಕಿ, ಪಾತ್ರೆ, ಬಟ್ಟೆ, ಹಾಸಿಗೆ ಹೊದ್ದುಕೊಳ್ಳುವ ಬಟ್ಟೆಗಳನ್ನೆಲ್ಲಾ ಪೋಲೀಸರು ... ಬಗ್ಗೆ ರೈತ ಪ್ರತಿನಿಧಿಗಳ ಜೊತೆ ಮಾತನಾಡುವದೇನಿಲ್ಲವೆಂದು ತಿಳಿಸಿದರು.

ಡಿಸೆಂಬರ್ 25 ರಂದು 3000 ಹರಿಜನ, ಗಿರಿಜನ, ಬಡ ಭೂ ರಹಿತ ಕೃಷಿ ಕೂಲಿಗಾರರು ಪ್ರಾಂತ ರೈತ ಸಂಘ, ದಲಿತ ಸಂಘರ್ಷ ಸಮಿತಿ ರಾಜ್ಯ ರೈತ ಸಂಘ (ಎ.ಐ.ಕೆ.ಎಸ್)ದ ನಾಯಕತ್ವದಲ್ಲಿ ಭೂಮಿಯನ್ನು ಆಕ್ರಮಿಸಲಾಯಿತು. ಜಿಲ್ಲಾಧಿಕಾರಿ ಹಾಗೂ ಪೋಲೀಸ್ ಅಧಿಕಾರಿಗಳು ಭೇಟಿ ನೀಡಿ ಭೂಮಿ ತೆರವು ಮಾಡಲು ಹೆದರಿಕೆ ಹಾಕಿದರು. ಪಕ್ಕದ ಹಳ್ಳಿಯ ರೈತರನ್ನು ಎತ್ತಿ ಕಟ್ಟಲು ಪ್ರಯತ್ನಿಸಿದರು. ರೈತರು ಎದೆಗುಂದದೆ ಗುಡಿಸಲುಗಳನ್ನು ನಿರ್ಮಿಸಿ ಸ್ಥಳದಲ್ಲಿಯೇ ಅಡಿಗೆ ಮಾಡಿ ಇನ್ನೇನು ಕೆಲವು ದಿನದಲ್ಲಿ ಬಿಡಲಾಗುವ ನೀರನ್ನು ಉಪಯೋಗಿಸಿ ಸಾಗುವಳಿ ಮಾಡುವ ತಯಾರಿಯಲ್ಲಿದ್ದರು.

ಶಿವಮೊಗ್ಗ, ಚಿಕ್ಕಮಗಳೂರು ಭೇಟಿಗೆ ಬಂದಿದ್ದ ಮುಖ್ಯ ಮಂತ್ರಿಗಳು ಹಾದಿಯಲ್ಲಿ ಕಾರು ನಿಲ್ಲಿಸಿ, ಭೂ ಸ್ವಾಧೀನ ಮಾಡಿದ ರೈತರನ್ನು ನೋ... ಚಿಕ್ಕಮಗಳೂರು ತಲುಪಿದ ನಂತ... ಎರಡು ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೋಲೀಸ್ ಅಧಿಕಾರಿಗಳು ಸಭೆಯ... ನಡೆಸಿ ಈ ಭೂಮಿಯ ಬಗ್ಗೆ ನಿರ್ದೇಶ... ನೀಡಿದ್ದಾರೆಂದು ತಿಳಿದು ಬಂತು.



Printed and published by P. Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO Managerial Office: C/o Kriya Prakashana, Shobha Lodge Complex, 5th main Road, Gandhinagar, Bangalore - 560 009